ನಾಟಕ

ಚನ್ನಿಗನ ಚರಿತ್ರೆ.

೧೯೩೭

ಲ. ಅ. ಶಿರಹಟ್ಟಿ

ಚತುರ್ಥ ಪುಷ್ಪ.

ಕನ್ನಡಿಗನ ಕಲಿತನ

ನಾಟಕ.

ಎನ್ನಯ ಜೀಡಿದು ಚೆಲ್ವಿನ
ಕನ್ನಡ ನೆಲೆವೀಡು, ಮಹಿತ ವಿದ್ಯಾರಣ್ಯರ್
ಮನ್ನಣೆಗೊಳಿಸಿದ ಮುದ್ದಿನ
ಪೊನ್ನೆಸಕದ ನಾಡು, ಜಸದ ನಾಡಿದು ನಿಸದಂ॥

ಲಕ್ಕಪ್ಪ ಅಣ್ಣಪ್ಪ ಶಿರಹಟ್ಟಿ [ತೊರವಿ]
ಕನ್ನಡ ಶಾಲಾ ಮುಖ್ಯಾಧ್ಯಾಪಕ ವಿಜಾಪುರ
ಇವರು ರಚಿಸಿದುದು.

ಬೆಲೆ ೦-೧೨-೦

ರಾ|| ಸಾ|| ಫ. ಗು. ಹಳಕಟ್ಟಿ ಇವರು
ವಿಜಾಪುರದಲ್ಲಿ ಉಪಲಿಬುರುಜದ ಹತ್ತರ ತಮ್ಮ ೧೬೨೦ (ಅ) ನೇ ಮನೆಯಲ್ಲಿ
ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.
ಲ. ಅ. ಶಿರಹಟ್ಟಿ ಇವರು ವಿಜಾಪುರದಲ್ಲಿ ಜೋರಾಪುರದ
ತಮ್ಮ ಮನೆಯಲ್ಲಿ ಪ್ರಕಟಿಸಿದರು.

ಗೆಲಿದೀ ಭಾರತಮಂ ಗೆ-
ಲ್ಬಳಿಯಿಗೆಯುಂ ಮೆರಿಸಿ ಕನ್ನಡದ ಸಮ್ರಾಟರ್॥
ಸಲಹಿದ ದಳದಾಳ್ಗಳ್ ದು-
ರ್ಬಲರೋ ಬಲಯುತರೊ? ಪೇಳ್ಗೆ ಕನ್ನಡದರಿಗಳ್॥

ನೀ. ಮು.

ಶ್ರೀ ಶಾರದಾ ವಿಲಾಸ ಮಂದಿರದ ಕುಸುಮಗಳು.

(ಲ. ಅ. ಶಿರಹಟ್ಟಿ ಕೃತ)

೧ ಚಾಲುಕ್ಯ ವಿಕ್ರಮ
(ಅರಳುವದು.)

೨ ಚಿತ್ತೂರಿನ ಪುನರುದ್ಧಾರ ಬೆಲೆ ೦-೩-೦

ಚಿಕ್ಕ ಐತಿಹಾಸಿಕ ಕಾದಂಬರಿ; ಮುಸಲ್ಮಾನರಿಂದ ಚಿತ್ತೂರನ್ನು ತಿರುಗಿ ಗೆದ್ದ ರಾಣಾಹಮೀರ ಸಿಂಹನ ಶೌರ್ಯ ಚಾತುರ್ಯಗಳ ನಿದರ್ಶಕವಾಗಿದೆ.

೩ ನೀತಿಮುಕ್ತಾವಲಿ (ಚಿಕ್ಕ ಕಾವ್ಯ) ಬೆಲೆ ೦-೨-೬

ಇದು ಸರಕಾರದ ಬುಕ್ಕ ಕಮೀಟಿಯವರಿಂದ ಇನಾಮಿಗೂ, ವಾಚನಾಲಯಗಳಿಗೂ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆ, ಟ್ರೇನಿಂಗ ಸ್ಕೂಲ ಇವುಗಳಲ್ಲಿ ಉಪಯೋಗಿಸುವದಕ್ಕೂ ಮಂಜೂರ ಮಾಡಲ್ಪಟ್ಟಿದೆ. ಇದರ ಬಗ್ಗೆ ಮಹನೀಯರ ಅಭಿಪ್ರಾಯಗಳನ್ನು ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿದೆ.

೪ ಕನ್ನಡಿಗನ ಕಲಿತನ (ನಾಟಕ) ಬೆಲೆ ೦-೧೨-೦

ಕರ್ನಾಟಕ ಚಕ್ರವರ್ತಿ ಚಾಲುಕ್ಯ ಸಾರ್ವಭೌಮ ಪುಲಿಕೇಶಿ ಮಹಾರಾಜನು ಉತ್ತರ ಭಾರತದ ಸಾರ್ವಭೌಮ ಹರ್ಷವರ್ಧನ (ಶಿಲಾದಿತ್ಯ) ನನ್ನು ಸೋಲಿಸಿದ ಕಥಾಸಂದರ್ಭವು; ಕನ್ನಡಿಗರ ಅಭಿಮಾನಕ್ಕೆ ತಕ್ಕುದಾಗಿದೆ.

ಇವು ದೊರೆಯುವ ಸ್ಥಳಃ— **ಲ. ಅ. ಶಿರಹಟ್ಟಿ ಹೆಡ್ ಮಾಸ್ತರ**
ಕನ್ನಡ ಶಾಳಾ ಜೋರಾಪುರ ಪೇಟೆ ವಿಜಾಪುರ

ಇದಲ್ಲದೆ

ಶ್ರೀ ಸಿದ್ಧರಾಮೇಶ್ವರ ಚರಿತ್ರೆ ೦-೪-೦
(ವಿಜಾಪುರ ಶ್ರೀ ಸಿದ್ಧೇಶ್ವರ ಸಂಸ್ಥೆಯಲ್ಲಿ ದೊರೆಯುವವು.)

ಯೋಗಿರಾಜ ವಿಜಯ ೦-೧೨-೦
(ಧಾರವಾಡ ಜಿಲ್ಲೆಯ ಹಾಳಕೇರಿಯ ಶ್ರೀ ವಿರಕ್ತ ಮಠದಲ್ಲಿ ದೊರೆವುವು)



ಶ್ರೀಮಂತ ಸುಂದರಾದೇವಿ ರಾಣಿಸಾಹೇಬರು.

ಸಂಸ್ಥಾನ ನವಲಗುಂದ (ಶಿರಸಂಗಿ)

ಪಾತ್ರಗಳ ಪರಿಚಯ.

ಪುಲಿಕೇಶಿ	ಕರ್ನಾಟಕ ಚಕ್ರವರ್ತಿ, ವಾತಾಪಿಪುರದ (ಬಾದಾಮಿಯ) ಚಾಲುಕ್ಯರ ೨ನೇ ಪುಲಿಕೇಶಿ.
ದಿವ್ಯಾನಂದಯೋಗಿ	ಪುಲಿಕೇಶಿ ಮಹಾರಾಜನ ಗುರುಗಳು.
ವೀರವರ್ಧನ	,, ಸೇನಾಪತಿ
ರಣಮಲ್ಲ	,, ಸರದಾರ
ಬಲರಾಯ	,, ,,
ರಣರಂಗ	,, ,,
ಸಮರನಂದನ	,, ,,
ರನ್ನ	,, ,,
ಕರಣಿಗ	,, ಕೆಲಸಗಾರ
ಕೊಠಡಿ	,, ,,
ವೀರಣ್ಣ	ವಾತಾಪಿಪುರದ ವಿದ್ಯಾರ್ಥಿ
ಮುದ್ದಣ್ಣ	,, ,,
ವೀರಬಾಲಕ	ರಣಮಲ್ಲನ ಮಗ
ಹರ್ಷವರ್ಧನ	ಉತ್ತರ ಹಿಂದುಸ್ತಾನದ ಸಾರ್ವಭೌಮ ರಾಜನು.
ಹ್ಯುವೆನ್‌ತ್ಸಾಂಗ	ಚೀನದೇಶದ ಬೌದ್ಧ ಪ್ರವಾಸಿ.
ಪ್ರತಾಪರಾಯ	ಉಜ್ಜಯಿನಿಯ ಅರಸು.
ವರುಣ	ಪ್ರತಾಪರಾಯನ ಕಪಟ ಸರದಾರ
ಮೋಹಿನೀ	ಪ್ರತಾಪರಾಯನ ಮಗಳು
ತಾರೆ	ಮೋಹಿನಿಯ ಕಪಟದಾಸಿ
ಲೋಕಾದೇವಿ	ಪುಲಿಕೇಶಿ ಮಹಾರಾಜನ ಪಟ್ಟದ ರಾಣಿ

(ಇವಲ್ಲದೆ ಸೇವಕರು, ದಾಸಿಯರು ಸಾಮಂತರು ಮೊದಲಾದವರು.)

ತಿದ್ದು ಪಡಿ.

(ಅವಶ್ಯವಾಗಿ ತಿದ್ದಿಕೊಳ್ಳಬೇಕಾದ ತಪ್ಪುಗಳನ್ನು ತೋರಿಸಿದೆ.
ಅವುಗಳನ್ನು ತಿದ್ದಿಕೊಂಡೇ ಓದಬೇಕು.)

ಪುಟ.	ಸಾಲು.	ಅಶುದ್ಧ.	ಶುದ್ಧ.
೨	೧೭	ತಂದಿರುವರು.	ತಂದಿರುವರೋ?
೭	೧೪	ಥಾಟ ಮಾತಿಗೆ	ಥಾಟಮಾಟಿಗೆ
೯	೧೭	ಮನದ	ವನದ
೧೦	೧೫	ಕಾ।	ತಾ। ತ್ರಿವಟ
೧೧	೧೬	ಇನ್ನೂ ಬರಲಿಕ್ಕಿಲ್ಲವೇ?	ಇನ್ನೂ ಏಕೆ ಬರಲಿಕ್ಕಿಲ್ಲ?
೧೩	೧	ತಿವಟ	ತ್ರಿವಟ
೧೩	೧೦	ಹೇಳಿರಿ	ಏಳಿರಿ.
೧೫	೨	ಆಲ್ಪ	ಅಲ್ಪ
೧೬	೬	ನೋಡಾರೆಲ್ಲ	ನೋಡಾಕಿಲ್ಲ
೧೭	೮	ಒದೆಯುವನು.)	ಒದೆಯುವನು.
೧೮	೧೦	ಹುಡುಕಿಕೊಂಡು	ಹುಡುಕುತ್ತ
೨೨	೪	ರಾ.	ರಾ. ಪಹಡಿ
೨೨	೭	ಜಲನಿಧಿಯೂಂ	ಜಲನಿಧಿಯಾ
೨೩	೫	ಲವು	ಲನು.
೨೬	೨೩	ರಾ।	ರಾ। ದಾನಿ.
೨೮	೨೫	ಕುಳಿಕುಳಿ	ಕಾಳಿಕಾಳಿ.
೩೯	೧೭	ದಿಷ್ಟೇ?	ದಿಷ್ಟೇ!
೪೦	೧೭, ೧೮	ಸೇನಾಪತಿಗಳು	ಸೇನಾಪತಿಗಳೇ
೫೦	೯	ಪೂಂದುವೆ	ಪೊಂದುವೆ.

ಅರ್ಪಣಂ

[illegible]

ಕನ್ನಡದೇಶೀಯರು ಸದಕ್ಕದ ಪ್ರಸಂಗಗಳಲ್ಲಿ

ಅಭಿಕನವನ್ನು ವ್ಯಕ್ತಮಾಡಿದ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ತಿದ್ದುಪಡಿ.

([illegible])

ಪುಟ.	ಸಾಲು.	ಅಶುದ್ಧ.	ಶುದ್ಧ.
[illegible]	[illegible]	[illegible]	[illegible]
[illegible]	[illegible]	ಘಾಟಿ ಮಾತಿಗೆ	ಘಾಟಮಾಟಿಗೆ
[illegible]	[illegible]	[illegible]	ವನದ
[illegible]	[illegible]	[illegible]	ತಾ। ತ್ರಿವಟಿ
[illegible]	[illegible]	[illegible]	[illegible]
[illegible]	[illegible]	ತಿವಟಿ	ತ್ರಿವಟಿ
[illegible]	[illegible]	[illegible]	ಏಕರಿ.
[illegible]	[illegible]	[illegible]	ಅಪ್ಪಿ
[illegible]	[illegible]	[illegible]	[illegible]
[illegible]	[illegible]	ಒಡೆಯುವನು.)	ಒಡೆಯುವನು.
[illegible]	[illegible]	[illegible]	[illegible]
೨೨	[illegible]	[illegible]	[illegible]
೨೨	೭	[illegible]	ಜಲಸಿಧಿಯಾ
[illegible]	[illegible]	[illegible]	[illegible]
[illegible]	[illegible]	ರಾ।	ರಾ। ದಾನಿ.
[illegible]	[illegible]	ಕೊಳಕೊಳ	[illegible]
[illegible]	[illegible]	[illegible]	ದಿಕ್ಕೇ!
[illegible]	[illegible]	[illegible]	[illegible]
[illegible]	[illegible]	[illegible]	[illegible]

ಅರ್ಪಣಂ

ಹಿಂದೆ

ಕನ್ನಡದೇಳ್ಗೆಯ ಮಹತ್ವದ ಪ್ರಸಂಗಗಳಲ್ಲೆಲ್ಲ

ಕಲಿತನವನ್ನು ವ್ಯಕ್ತಮಾಡಿದ

ಕರ್ನಾಟಕ ವೀರವನಿತೆಯರ ಸಹಜಗುಣದಂತೆ

ಇಂದು

ಅವಶ್ಯವಾದ ಈ ರೀತಿಯಿಂದ

ಕನ್ನಡಿಗನ ಕಲಿತನವನ್ನು ಹೊರ ಹೊರಡಿಸಿದ

ಶ್ರೀಮಂತ ಸುಂದರಾದೇವಿ ರಾಣೀಸಾಹೇಬರು

ಸಂಸ್ಥಾನ ನವಲಗುಂದ (ಶಿರಸಂಗಿ)

ಇವರ ಸನ್ನಿಧಿಗೆ

ಈ ಗ್ರಂಥವು ಅರ್ಪಿಸಲ್ಪಟ್ಟಿದೆ.

ವಿಧೇಯ

ಗ್ರ. ಕ.

ಸಿರಿವೊಂದಿದ, ಭಟರುದಿಸಿದ,
ಪಿರಿಗಬ್ಬಿಗರಿಂ ಪೊಗಳ್ಕೆದಾಳಿದ, ಜಸದಾ-॥
ಳ್ದರಿದರ್ ತಿಳಿವಂ ಬೆಳಗಿದ
ಕರುನಾಡಿನ ಪೆರ್ಮೆಗೊಲಿಯುದವನುಂ ನರನೇಂ?

ನೀ. ಮು.

ಮುನ್ನುಡಿ

ಕರ್ನಾಟಕ ರಂಗಭೂಮಿಯು ನೆರೆಯ ಪ್ರಾಂತಗಳ ರಂಗಭೂಮಿಗಿಂತ ಹಿಂದು ಬಿದ್ದಿದೆಯೆಂದು ಹಲವು ಜನರು ಅಭಿಪ್ರಾಯಪಡುತ್ತಾರೆ. ನಮ್ಮ ಪ್ರಾಂತದಲ್ಲಿ ಮಹಾರಾಷ್ಟ್ರದ ನಾಟಕಸಂಘಗಳು ಮೇಲೆ ಮೇಲೆ ಬರುತ್ತವೆ. ಅವುಗಳಿಗೆ ಹೆಚ್ಚಿನ ಪ್ರೋತ್ಸಾಹನೆಯು ಕೂಡ ದೊರೆಯುವ ಸಂಗತಿಯು ಎಲ್ಲರಿಗೆ ಗೊತ್ತಿದೆ. ಆದರೆ ಮಹಾರಾಷ್ಟ್ರ ರಂಗಭೂಮಿಯು ಬಹುಮಟ್ಟಿಗೆ ಕನ್ನಡರಂಗಭೂಮಿಯ ಅನುಕರಣ ಮಾಡಿರುವದಲ್ಲದೆ ಮಹಾರಾಷ್ಟ್ರ ರಂಗಭೂಮಿಗೆ ಕರ್ನಾಟಕ ರಂಗಭೂಮಿಯು ತಾಯಿಯಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಮಹಾರಾಷ್ಟ್ರದ ವಾತಾವರಣವೂ, ಮರಾಠಿಗರ ಧೈರ್ಯ, ಸಾಹಸ, ಸ್ವಭಾಷಾಪ್ರೇಮ ಮುಂತಾದ ಗುಣಗಳೂ ಮಹಾರಾಷ್ಟ್ರ ರಂಗಭೂಮಿಗೆ ಹೆಚ್ಚಿನ ಬೆಳವಣಿಗೆಯನ್ನಿತ್ತಿರುತ್ತವೆ. ಈ ನಮ್ಮ ಕಥಾನಾಯಕನ ಚರಿತ್ರೆಯನ್ನೊಳಕೊಂಡ ಇತಿಹಾಸದ ಕಾಲದಲ್ಲಿ ವಿಸ್ತಾರವಾದ ನಮ್ಮ ಕನ್ನಡದೇಶಕ್ಕೆ ಮಹಾರಾಷ್ಟ್ರ (ದೊಡ್ಡರಾಜ್ಯ) ವೆನ್ನುತ್ತಿದ್ದ ಹೆಸರೇ ಈಗಿನ ಮಹಾರಾಷ್ಟ್ರಕ್ಕೆ ಬಂದಿರುತ್ತದೆಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಕರ್ನಾಟಕದಲ್ಲಿ ಮೊದಮೊದಲು ಪುರಾಣದ ಕಥೆಗಳ ನಾಟಕಗಳೇ ರಂಗಭೂಮಿಯ ಮೇಲೆ ಬಂದವು. ಆದರೆ ಇತ್ತೀಚೆಗೆ ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳು ಅಲ್ಲಲ್ಲಿ ಬೆಳಕಿಗೆ ಬರಹತ್ತಿವೆ. ವಿಜಯನಗರ ರಾಜ್ಯಸ್ಥಾಪನೆ, ಎಚ್ಚಮನಾಯಿಕ, ಚನ್ನಮ್ಮರಾಣಿ, ರುದ್ರಮ್ಮರಾಣಿ, ನರಗುಂದಬಂಡಾಯ ಮುಂತಾದ ವೀರರಕಥೆಗಳೂ, ಬಸವೇಶ್ವರ, ವಿದ್ಯಾರಣ್ಯ ಮುಂತಾದ ಸಮಾಜ ಸುಧಾರಕರ ಚರಿತ್ರೆಗಳೂ ಅಡಕವಾಗಿರುವ ನಾಟಕಗಳು ರಂಗಭೂ

ಮಿಯ ಮೇಲೆ ಸುಳಿದಾಡಹತ್ತಿವೆ. ಆಧುನಿಕ ಚರಿತ್ರೆಗಳು ಓದುಗರಲ್ಲಿ ಮತ್ತು ಪ್ರೇಕ್ಷಕರಲ್ಲಿ ಕೆಲವರಿಗೆ ಪರಿಚಿತನಾದವುಗಳಿದ್ದುದರಿಂದ ಜನರಲ್ಲಿ ಹೊಸ ಹುರುಪು ಹುಟ್ಟಿಸುವವು. ಇದರಿಂದ ಅವುಗಳಲ್ಲಿ ಜನಸಾಮಾನ್ಯದ ಪ್ರೇಮ ಬಹಳ. ಆದರೂ ಪ್ರಾಚೀನಕಾಲದಲ್ಲಿ ನಮ್ಮ ಈ ನಾಡಿನ ಕೀರ್ತಿಯನ್ನು ಜಗತ್ತಿನಲ್ಲಿ ಮೆರೆಯಿಸಿದ ವೀರರ ಕಥೆಗಳನ್ನು ನಮ್ಮಲ್ಲಿ ಎಲ್ಲಬಗೆಯಾಗಿ ಪ್ರಚಾರದಲ್ಲಿ ತರಬೇಕಾಗಿದೆ. ಕನ್ನಡಶಾಲೆಗಳಲ್ಲಿ ಈಗಿದ್ದ ಇತಿಹಾಸ ಪುಸ್ತಕದಲ್ಲಿ ಕರ್ನಾಟಕದ ಪ್ರಾಚೀನಕಾಲದ ಸಂಗತಿಗಳ ಭಾಗವು ಸ್ವಲ್ಪ ಇದ್ದು ಅದನ್ನು ಕೂಡ ಶಾಲಾಗುರುಗಳೂ ವಿದ್ಯಾರ್ಥಿಗಳೂ ಯೋಗ್ಯರೀತಿಯಿಂದ ಅಭ್ಯಾಸಮಾಡುವದಿಲ್ಲ. ಈ ಕೊರತೆಯನ್ನು ಹೋಗಲಾಡಿಸಿ ಪೂರ್ವದ ರಣಧೀರರೂ, ಚಕ್ರವರ್ತಿಗಳೂ, ಧರ್ಮಸ್ಥಾಪಕರೂ ಮುತ್ಸದ್ದಿಗಳೂ, ಕಲಾಕೋವಿದರೂ ಆದ ನಮ್ಮ ಮುತ್ತಜ್ಜರ ಗುರುತನ್ನು ಮಾಡಿಕೊಡುವ ಎಲ್ಲತರಹದ ಗ್ರಂಥಗಳು ಎಷ್ಟು ತಲೆದೋರಿದರೂ ಕಡಿಮೆಯೇ. ಧಾರವಾಡದಲ್ಲಿ ಮೊದಲು “ಚಲುಕ್ಯರ ಪುಲಿಕೇಶಿ” ಎಂಬ ಪುಸ್ತಕವನ್ನು ಕಾದಂಬರೀ ರೂಪದಿಂದ ಮಿ॥ ಸಬರದ ಇವರು ಬರೆದಿದ್ದಾರೆ.

ಮಿ. ಶಿರಹಟ್ಟಿಯವರು ಕನ್ನಡಸಾಹಿತ್ಯಸೇವೆಯನ್ನು ಹಲವು ಬಗೆಯಿಂದ ಮಾಡಿರುವರು. ಪುರಾತನದಲ್ಲಿ ಕರ್ನಾಟಕದಲ್ಲಿ -ನಮ್ಮ ಈ ಉತ್ತರಕರ್ನಾಟಕದಲ್ಲಿ- ರಾಜಧಾನಿಯುಳ್ಳ ವಿಸ್ತಾರವಾದ ಸಾಮ್ರಾಜ್ಯವನ್ನು ಸ್ಥಾಪಿಸಿ, ಅದರ ವಿಜಯಪತಾಕೆಯನ್ನು ಭರತಖಂಡದ ಬಹುಭಾಗದ ಮೇಲೆ ಮೆರೆಯಿಸಿದ **ಪ್ರತಾಪಶಾಲಿಯಾದ ಪುಲಿಕೇಶಿ ಸಾಮ್ರಾಟನ** ಚರಿತ್ರೆಯನ್ನು ಈ ನಾಟಕರೂಪದಿಂದ ಬರೆದು, ಓದುಗರಲ್ಲಿ ಹೊಸ ಹುರುಪನ್ನು ಹುಟ್ಟಿಸುವದಕ್ಕೆ ಕಾರಣೀಭೂತರಾಗಿ, ನಮ್ಮೆಲ್ಲರನ್ನು ಉಪಕೃತರನ್ನಾಗಿ ಮಾಡಿರುತ್ತಾರೆ. ಮಿ. ಶಿರಹಟ್ಟಿಯವರು ಬಹುಮಟ್ಟಿಗೆ ರೂಢಿಯಲ್ಲಿಯ ಶಬ್ದಸರಣಿಯನ್ನು

ಉಪಯೋಗಿಸಿದ್ದರಿಂದ ಸಾಧಾರಣಪ್ರತಿಯು ಓದುಗರೆಲ್ಲರಿಗೂ ಹಗರು ಮಾಡಿರುವರು. ಕನ್ನಡಿಗರು ಇವರ ಪ್ರಯತ್ನಗಳಿಗೆ ಉತ್ತೇಜನ ಕೊಟ್ಟು ಇವರಿಂದ ಹೆಚ್ಚು ನುಡಿಯ ಸೇವೆಯನ್ನೂ ಜನಸೇವೆಯನ್ನೂ ಮಾಡಿಸಿಕೊಳ್ಳುವರೆಂದು ನಂಬಿರುತ್ತೇನೆ.

ಬೆಳಗಾಂವಿ **ಬಸವಂತಪ್ಪ ಬಾಳಪ್ಪ ಮಮದಾಪುರ**
ತಾ. ೪—೪—೧೯೩೨ ಹೆಡ್‌ಮಾಸ್ತರ
ಗಿಲಗಂಚಿ ಅರ್ಟಾಳ ಹೈಸ್ಕೂಲ.

ಬಿನ್ನಹ

ಅಪರಿಮಿತ ವಿಭೂತಿಸ್ಫೀತ ಸಾಮಂತಸೇನೋ।
ಮುಕುಟಮಣಿಮಯೂಖಾಕ್ರಾಂತ ಪಾದಾರವಿಂದಃ ॥
ಯುಧಿ, ಪತಿತ ಗಜೇಂದ್ರಾನೀಕ ಬೀಭತ್ಸ ಭೂತೋ।
ಭಯವಿಗಲಿತ ಹರ್ಷೋಯೇನ ಚಾಕಾರಿ ಹರ್ಷಃ ॥

(ಐಹೊಳೆಯ ಶಿಲಾಶಾಸನ.)

"ಅಗಣಿತ ಸಂಪತ್ತಿನಿಂದ ಹೊಳೆಯುವ ಸಾಮಂತರಾಜರ ಸೇನೆಯುಳ್ಳ, (ಮಾಂಡಲಿಕರ) ಕಿರೀಟಗಳಲ್ಲಿರುವ ರತ್ನಗಳ ಕಾಂತಿಯಿಂದ ಬೆಳಗಲ್ಪಟ್ಟ ಪಾದಕಮಲಗಳುಳ್ಳ, ಬಿದ್ದ ಮದ್ದಾನೆಗಳ ಸೇನೆಯಿಂದ ಬೀಭತ್ಸನಾದ ಹರ್ಷನು ಯುದ್ಧದಲ್ಲಿ ಯಾವನಿಂದ ಅಂಜಿಹೋದಹರ್ಷವುಳ್ಳವನಾದನೊ"— ಅಂತಹ ಪುಲಿಕೇಶಿ ಸಾರ್ವಭೌಮನ -ಕರುನಾಡಿನ ಸಿರಿಯನು ಬೆಳಿಸಿ ಪೊರೆವ ಹಿರಿಯೊಡೆಯನ- ಹೆಸರನ್ನು ಹಲವರು ಅರಿಯದಿರುವದು ಶೋಚನೀಯವು! ಅಜ್ಞಾನವೆಂಬ ಅತ್ಯಂತ ಗಹನವಾದ ಕತ್ತಲೆಯಲ್ಲಿ ಒಮ್ಮೆ ಶಿಲುಕಿದವರ ಕಣ್ಣುಗಳೇ ಹೋಗಿಬಿಡುವಂತೆ ತೋರುತ್ತದೆ. ಹಾಗೆಯೇ ಕಣ್ಣು

ಹೋದ ನಮ್ಮ ಜನರಿಗೆ, ಕರ್ನಾಟಕದ ಪೂರ್ವದ ವೈಭವ, ಕಲಿತನ, ಕಲಾಕೌಶಲ್ಯ ಮೊದಲಾದವುಗಳಿಗೆ ಸಾಕ್ಷಿಯಾದ ಗ್ರಂಥಗಳೂ, ಶಿಲಾಲೇಖಗಳೂ, ವೀರಗಲ್ಲುಗಳೂ, ಭವ್ಯಕಟ್ಟಡಗಳ ಅವಶೇಷಗಳೂ ಎಷ್ಟು ಪ್ರಯತ್ನಬಟ್ಟರೂ ಕಾಣದಾಗಿವೆ. ಇವು ಸಾರಿಸಾರಿ ಹೇಳುವ ನಮ್ಮ ಪೂರ್ವಜರ ಪ್ರಭಾವಯುಕ್ತ ಚರಿತ್ರೆಗಳನ್ನು ನಮ್ಮ ಜನರ ಮುಂದಿಟ್ಟು ಅವರನ್ನು ಆವರಿಸಿದ ಕತ್ತಲೆಯನ್ನು ಹಿಂಗಿಸಲು ಪ್ರಯತ್ನಿಸುವದು ಬಹಳ ಮಹತ್ವದ ಕಾರ್ಯವಾಗಿದೆ. ಈ ಕಾರ್ಯದ ಕೊಂಚಭಾಗವಾದರೂ ನನ್ನಿಂದಾಗಲೆಂದು ನನ್ನ ತಿಳವಳಿಕೆಯ ಎಳೆತನಕ್ಕೆ ಸರಿಯಾಗಿ ನಾನೀ ನಾಟಕವನ್ನು ಬರೆದಿದ್ದೇನೆ. '**ಸತ್ಯಾಶ್ರಯ**' '**ಶ್ರೀ ಪೃಥಿವೀವಲ್ಲಭ ಮಹಾರಾಜ**' '**ಪರಮೇಶ್ವರ**' ಎಂಬ ಬಿರುದುಗಳನ್ನು ಸ್ವಪರಾಕ್ರಮಗಳಿಂದ ಹೊಂದಿದ **ಕರ್ನಾಟಕ ಚಕ್ರವರ್ತಿಯಾದ ಬಾದಾಮಿಯ ಚಲುಕ್ಯರ ಇಮ್ಮಡಿ ಪುಲಿಕೇಶಿಮಹಾರಾಜ**'ನ ಆಡಳಿತೆಯಲ್ಲಿ ನಡೆದ ಒಂದು ಮಹತ್ಪ್ರಸಂಗವು ಈ ನಾಟಕದ ಕಥಾಭಾಗವು.

ನಾಟ್ಯಶಾಸ್ತ್ರವನ್ನು ನೋಡಿದವನೂ ಅಲ್ಲ, ಹಿರಿಯ ಬರೆಹಗಾರನೂ ಅಲ್ಲ; ನನ್ನ ನಾಟಕವು ಲಕ್ಷಣಬದ್ಧವಾಗಿರುವದೆಂದು ಹೇಗೆ ಹೇಳಲಿ? ಅಥವಾ ಅರಿತವರು ನೆರವನ್ನಿತ್ತುದಕ್ಕೆ ಒಂದು ವೇಳೆ ಇದು ನಾಟಕವೆಂಬ ಹೆಸರನು ಹೊಂದಲು ತಕ್ಕುದಾಗಿದ್ದರೆ ಅದು ನನ್ನ ಸುದೈವವಲ್ಲದೆ ಮತ್ತೇನು? ಸರಿಯಿರಲಿ ಇರದಿರಲಿ, ನಾಟಕವೆಂಬ ಹೆಸರನು ಕೇಳಿದ ಮಾತ್ರಕ್ಕಾದರೂ ಗಮನಿಸಿ ಇದನ್ನು ಓದಿದ ಅಥವಾ ನೋಡಿದ ಜನರಲ್ಲಿ ನಾಟಕದ ಜೀವವಾಗಿರುವ ಕರ್ನಾಟಕಾಭಿಮಾನವು ಕೆಲಮಟ್ಟಿಗಾದರೂ ಹುಟ್ಟಿದರೆ, ಕರ್ನಾಟಕ ಗತವೈಭವವನ್ನೂ ಕನ್ನಡ ನುಡಿಯ ಮೊದಲಿನ ಪ್ರಾಶಸ್ತ್ಯವನ್ನೂ ಅರಿತುಕೊಳ್ಳುವ ಕುತೂಹಲವು ಲೇಶವಾದರೂ ತಲೆದೋರಿದರೆ ನನ್ನ ನಾಟಕದ ಉದ್ದೇಶವು ಕೊನೆಗಂಡಿತೆಂದು ಭಾವಿಸುತ್ತೇನೆ.

ಕರ್ನಾಟಕೇತರ ರಾಗಗಳಲ್ಲಿ ಒಲುಮೆಯುಳ್ಳವರೇ ಈಗ ಹೆಚ್ಚು. ಹೀಗಿರಲು ಕರ್ನಾಟಕೀಯ ರಾಗಗಳುಳ್ಳ ಸಂಗೀತವಿದ್ದರೆ ನಾಟಕವನ್ನು ಲಕ್ಷಿಸುವವರಾರು? ಮತ್ತು ಉದ್ದೇಶವು ಕೈಗೂಡುವದೆಂತು? ಎಂಬಿದೇ ವಿಚಾರದ ಹಿತಸ್ಥರ ಮತವನ್ನು ಲಕ್ಷಿಸಿ ಮನಸ್ಸಿಲ್ಲದಿದ್ದರೂ 'ಗತಾನುಗತಿಕೋ ಲೋಕಃ' ಎಂಬಂತೆ ಜನಮನೋಮೋಹಕ್ಕಾಗಿ ಕರ್ನಾಟಕೇತರ ರಾಗಗಳನ್ನು ಈ ನಾಟಕದಲ್ಲಿ ಉಪಯೋಗಿಸಬೇಕಾಯಿತು.

ನಾಟಕ ಕಥೆಯ ಮುಖ್ಯಾಂಶವು ಐತಿಹಾಸಿಕವು; ಕಲ್ಪಿತವೆಂಬ ದೋಷವು ಅದಕ್ಕೆ ತಿಲಮಾತ್ರ ತಟ್ಟದು; ಸಂಬಂಧಗೊಳಿಸಿದ ಉಳಿದ ಸಂಗತಿಗಳು ಸ್ವಕಪೋಲಕಲ್ಪಿತವಾದವುಗಳು. ಪ್ರಾಚೀನ ಕರ್ನಾಟಕದ ಇತಿಹಾಸದ ಬಹುಭಾಗವು ಇನ್ನೂ ಹೊರಬೀಳದಿರುವದರಿಂದ ಐತಿಹಾಸಿಕ ನಾಟಕಗಳನ್ನು ಬರೆಯಹೋದರೆ ಉಪಪಾತ್ರಗಳಿಗೆ ಸ್ವತಂತ್ರವಾದ ಹೆಸರಿಡುವದಲ್ಲಿ ಬೆನ್ನು ಬಿಡುವದು? ಹಾಗೆಯೇ ಈ ನಾಟಕದಲ್ಲಿಯಾದರೂ ಇತಿಹಾಸ ಪ್ರಸಿದ್ಧ ರಾಜರನ್ನುಳಿದು ಬೇರೆಯವರ ಹೆಸರುಗಳನ್ನು ಕಲ್ಪಿಸಿಡಲೇಬೇಕಾಯಿತು. ಸರಿ, ಇನ್ನುಳಿದುದೇನು? ತಮ್ಮ ಕೈಯಲ್ಲಿ ಕೊಟ್ಟ ಈ ಪುಟ್ಟ ಹೊತ್ತಿಗೆಯನ್ನು ಕನ್ನಡಿಗರು ಕರಭೂಷಣವನ್ನಾಗಿ ಮಾಡಿಕೊಳ್ಳಲೆಂದು ಬಿನ್ನವಿಸಿಕೊಳ್ಳುವದೊಂದೇ ಕೊನೆಯದು.

ಈ ನಾಟಕ ಗ್ರಂಥವನ್ನು ಕಾಣಿಕೆಯಾಗಿ ಸ್ವೀಕರಿಸಲೊಪ್ಪಿದುದಕ್ಕಾಗಿ, ಕೈ. ವಾ. ಶ್ರೀ ಲಿಂಗರಾಜರ ಧರ್ಮಪತ್ನಿಯವರಾದ **ಶ್ರೀಮಂತ ಸುಂದರಾದೇವಿ ರಾಣೀಸಾಹೇಬರು** ಸಂಸ್ಥಾನ ನವಲಗುಂದ (ಶಿರಸಂಗಿ) ಇವರಿಗೆ ಮಾತೃದೇವತಾ ಭಕ್ತಿಯಿಂದೊಡಗೂಡಿ ಅಭಿವಂದಿಸುತ್ತೇನೆ. ಹಾಗು **ಶ್ರೀಮಂತ ವಿಠಗೌಡ ಉರ್ಫ ಬಾಬಾಸಾಹೇಬ ಲಿಂಗರಾಜ ಸರದೇಸಾಯಿ** ಸಂಸ್ಥಾನ ನವಲಗುಂದ (ಶಿರಸಂಗಿ) ಈ ಮಹನೀಯರು ಈ ನಾಟಕದ ಬರೆಹಕ್ಕೆ

ಪ್ರೋತ್ಸಾಹಿಸಿ, ಜರ್ಢಿಥ ಜ್ಞಳಿಕ ಇದನ್ನು ರಾಣೀಸಾಹೇಬರ ಅವಗಾಹನೆಗೆ ತಂದು ಅವರ ಆದರಕ್ಕೆ ಪಾತ್ರವನ್ನಾಗಿ ಮಾಡಿದುದಲ್ಲದೆ ಮುದ್ರಣಕ್ಕೆ ಹತ್ತುವ ಸಂಪೂರ್ಣ ಹಣವನ್ನು ಉದಾರಮನಸ್ಸಿನಿಂದ ಕೊಟ್ಟರು. ಇವರಿಗೆ ನನ್ನ ಅಂತಃಕರಣಪೂರ್ವಕವಾದ ವಂದನೆಯು.

ಸಂಗೀತದ ಗಂಧವನ್ನೇ ಅರಿಯದ ನನಗೆ, ಪದ್ಯರಚನೆಯಲ್ಲಿ ರಾಗಗಳ ಬಗ್ಗೆ ಸಹಾಯಮಾಡಿದ ಮಿತ್ರ ಬಳವಂತ ಚುಟ್ಟೋ ಕುಲಕರ್ಣಿ (ತೊರವಿ) ಇವರಿಗೆ ಉಪಕೃತನಾಗಿದ್ದೇನೆ. ನನ್ನ ವಾಙ್ಮಯಸೇವೆಯಲ್ಲಿ ಆಗಾಗ ತಕ್ಕ ನೆರವನ್ನೀಯುವ ಪಂಡಿತ ಶ್ರೀ ಬಸವರಾಜ ಶಾಸ್ತ್ರಿಗಳು ಕೋಡಿಕೊಪ್ಪ ಮಠ ಇವರಿಗೂ, ಈ ನಾಟಕವನ್ನು ಸಂಶೋಧನೆಗೊಳಿಸಿದ ಪಂಡಿತ ಶ್ರೀ. ಕೇಶವ ಶರ್ಮಾ ಗಲಗಲಿ ಇವರಿಗೂ, ಅಚ್ಚುಕಟ್ಟಾದ ಮುನ್ನುಡಿಯಿಂದ ಕನ್ನಡಿಗರಿಗೆ ನನ್ನ ಕೃತಿಯು ಪರಿಚಯಮಾಡಿಕೊಟ್ಟ ಶ್ರೀ ಬಸವಂತರಾವ ಮುಮದಾಪುರ ಹೆಡ್‌ಮಾಸ್ತರ ಜಿ. ಎ. ಹಾಯಸ್ಕೂಲ ಬೆಳಗಾಂವಿ ಇವರಿಗೂ, 'ಪ್ರೂಫು' ಗಳನ್ನು ನೋಡುವವರಲ್ಲಿ ಸೌಕರ್ಯವನ್ನೊದಗಿಸಿ ಅಚ್ಚುಕಟ್ಟಾಗಿ ಅಚ್ಚುಹಾಕಿಕೊಟ್ಟ ಹಿತಚಿಂತಕ ಮುದ್ರಣಾಲಯದ ಒಡೆಯರಿಗೂ ಅತ್ಯಂತ ಋಣಿಯಾಗಿದ್ದೇನೆ.

ಸಂವತ್ಸರ ಪ್ರತಿಪದೆ
ಶಕೆ ೧೮೫೪.
ತಾ. ೬—೪—೧೯೩೨

ವಿದ್ವಜ್ಜನ ವಿಧೇಯ
ಲ. ಅ. ಶಿರಹಟ್ಟಿ.
ಗ್ರಂ. ಕ.

ಓಂ

ಸಿರಿಗನ್ನಡ ನೆಲದಮ್ಮಳಿಗೆ ಪೊಡಮಡುವೆಂ.

ಕನ್ನಡಿಗನ ಕಲಿತನ.

ಅಂಕ ೧

ಈಶ ಸ್ತವನ.

ರಾಗ—ಹಮೀರ. ತಾಳ—ತ್ರಿವಟ. [ಧಾಟಿಃ— ನಮನೆ ನಟವರಾ]

ನಮಿಪೆವಘಹರಾ। ಸುಜನೋದ್ಧಾರಾ। ಭವ ಭಯದೂರಾ। ಹೈಮವತಿ ವರಾ॥

ಮುದದಿಂದ ಸುರನು! ಸುಕೃತರ ಪೀಡಿಸೆ। ಸದೆದಿಕ್ಕಿದವರ। ಪರಮೇಶ್ವರನೆ॥ ನಿನ್ನನು ಪೊಗಳಿದ। ಮಾನವನಾಗಲೆ। ಧನ್ಯನು ಲೋಕದಿ। ಮಾನ್ಯನು ಪರದಲಿ॥ ೧॥

ನೆರೆದಿರೆ ಬುಧರಿಗೆ। ಕರ್ಣಾನಂದವಾ। ಕರೆವುದು ಬಾಲರ। ಸವಿ ನುಡಿಯಿಂದಲಿ॥ ೨॥

೧ ನೇ ನೋಟ.

(ದೇವದುರ್ಗದ ಒಂದು ಭಾಗ. ಹರ್ಷವರ್ಧನನು ವಿಕಾರನಾಗಿ ಬರುತ್ತಾನೆ.)

ಹರ್ಷವರ್ಧನ:—ವೈಭವದಿಂದ ಅದೆಷ್ಟು ಮದಾಂಧನಾಗುವನು ನೋಡಿದೆಯಾ ಮನುಷ್ಯನು? ಉಳಿದವರ ಗಣನೆಯೇ ಅವನಿಗೆ!! ಆದರಲ್ಲಿಯೂ ಮಧ್ಯದಲ್ಲಿ ಪಡೆದ ಅಲ್ಪ ಬಲ ಅಲ್ಪ ವೈಭವವುಳ್ಳವರ

ಉಬ್ಬನ್ನಂತೂ ಹೇಳಲಾಸಲ್ಲ! ಹಾಗೆಯೇ ಮದಾಂಧನಾದ ಆ ಪುಲಿಕೇಶಿಯು ಈ ಹರ್ಷ ಸಾರ್ವಭೌಮನ ಬಲವನ್ನೇ ಅರಿಯದೆ ಉದ್ಧಟತನದಿಂದ ಅತಿಕ್ರಮಿಸಿ ನಡೆದಿರುವನು. ಎಲೋ ಪುಲಿಕೇಶಿ, ತೀವ್ರವೇ ಪಡೆಯುವೆಯಂತೆ ಇದರ ಪ್ರತಿಫಲವನ್ನು! ಬಲಿಷ್ಠರೊಡನೆ ಮಾಡುವ ವಿರೋಧವು ವಿಪತ್ತಿಗೆ ಕಾರಣವೆಂಬದನ್ನು ಅರಿಯೆಯಾ? ಇಷ್ಟರಲ್ಲಿಯೇ ನಮ್ಮ ದುರ್ಗವು ನಮ್ಮ ವಶವಾಯಿತು; ಇನ್ನು ಕ್ಷಣಮಾತ್ರದಲ್ಲಿ ರಸಾತಲಕ್ಕೆ ತಳ್ಳಲ್ಪಡುವದು ನಿನ್ನ ಆ ವಿಜಯಪತಾಕೆಯು! ಈಗೇನೋ ನಿನ್ನ ಮಾಂಡಲಿಕನಾಗಿರುವ ಉಜ್ಜಯಿನಿಯ ಪ್ರತಾಪರಾಯನು ಒಂದೇ ಹೊಡತಕ್ಕೆ ಬಂದು ಬೀಳುವನು ನನ್ನ ಪಾದಕ್ಕೆ!! ಆ ಮೇಲೆ ಈ ಹರ್ಷ ಸಾರ್ವಭೌಮನು ನಿನ್ನನ್ನು. ದಕ್ಷಿಣದ ಕಾಡಿನ ಪುಂಡನನ್ನು ನಾಶಮಾಡದೆ ಇರುವನೇ?

ದೂತಃ— (ಪ್ರವೇಶಿಸಿ ಸ್ವಗತ) ಅಬ್ಬಬ್ಬ ಎಂಥ ಭಯಂಕರರಾಗಿರುವರಲ್ಲ!

ಹ. ವ.ಃ— (ನೋಡಿ) ಯಾಕೆ ಪಡಿಯರ!

ದೂತಃ— (ನಮಸ್ಕರಿಸಿ) ಮಹಾರಾಜ,

ಹ. ವ.ಃ— ಹಿಡಿಯಲ್ಪಟ್ಟ ಆ ಚಾಲುಕ್ಯಯೋಧರನ್ನು ಕೊತ್ತಳದ ಮೇಲೆ ತಂದಿರುವರು.

ದೂತಃ— ಹೌದು ಮಹಾಪ್ರಭು; ಈಗ ತಮ್ಮ ಮಾರ್ಗವನ್ನೇ ನೋಡುತ್ತಿರುವರು.

ಹ. ವ.ಃ— ಇದೋ ನಾನು ಬಂದೆನು. ನೀನು ವಸುಗುಪ್ತನಾಯಕನಿಗೆ ಕೂಡಲೆ ಅಲ್ಲಿಗೆ ಬರಹೇಳು. ಹೋಗು ಬೇಗ. (ಹೋಗುವನು) ಆಗಲಿ. ಹರ್ಷರ ಪ್ರಬಲ ಪ್ರತಾಪವನ್ನು ಆ ಚಾಲುಕ್ಯರು ಕಣ್ಣಾರೆ ಕಾಣಲಿಂದು.

॥ಪದ॥ ರಾಗ—ಅಢಾಣಾ, ತಾ—ಝಂಪಾ, (ಧಾಟಿ— ಧಿಕ್ಕಾರವನುಸಹಿಲಾ)

ಧಿಕ್ಕಾರವನು ತೋರುವಾ ॥
ಅರಿಪಟವನಿಕ್ಕುತೆ। ತೋರಿಸುವೆ ಶೌರ್ಯವಾ।
ಹಳಿಯುವೆನು ಗೈಯುತೆ। ಭಟರಿಗಪಮಾನವಾ ॥ಧಿಕ್ಕಾರ॥

(ಹೋಗುವನು. ಹಿಂದಿನಿಂದ ಮಂತ್ರಿಯು ವಿಚಾರಿಸುತ್ತ ಬರುವನು.)

ಮಂತ್ರಿಃ—- (ಆಲೋಚಿಸಿ) ಮಂತ್ರಿತನವೆಂದರೆ ಕೇವಲ ಹೊಟ್ಟೆಯ ಪಾಡಿಗಾಗಿ ಅರಸರ ಇಚ್ಛೆಯಂತೆ ಕುಣಿಯುವದಲ್ಲ! ಅಲ್ಲವೇ ಅಲ್ಲ! ಮಂತ್ರಿತನವೆಂದರೆ ಜನಹಿತದ ರೀತಿಯನ್ನು ಅರಸನಿಗೆ ಉಪದೇಶಿಸುವದಿರುತ್ತದೆ. ಅಂದ ಮೇಲೆ ಅರಸನು ಅಡ್ಡ ಹಾದಿಯನ್ನು ಹಿಡಿದರೆ ಅದನ್ನು ಪ್ರತಿಬಂಧಿಸುವದು ಕೂಡ ನಮ್ಮ ಕೆಲಸವಾಗಿರುತ್ತದೆ. ಈಗ ನಮ್ಮ ಹರ್ಷವರ್ಧನ ಮಹಾರಾಜರು ಪರರ ಮನವನ್ನು ನೋಯಿಸಿ ಪ್ರಜಾಕ್ಷೋಭವನ್ನು ಕಟ್ಟಿಕೊಳ್ಳುವ ಕಾರ್ಯಕ್ಕುದ್ಯುಕ್ತರಾಗಿರುವರು. ಸುಮ್ಮನಿರುವದು ಹೇಗೆ? ನೋಡುವಾ ಹೇಳಿ ಏನನ್ನುವರು? (ಹೋಗುವನು)

೨ನೇ ನೋಟ.

(ಕೊತ್ತಳದ ಮೇಲೆ ಚಾಲುಕ್ಯ ಸೆರೆಯಾಳುಗಳನ್ನು ಸಾಲಾಗಿ ನಿಲ್ಲಿಸಿರುವರು. ಕರ್ನಾಟಕ ಧ್ವಜಭಂಗದ ಪ್ರಯತ್ನ. ಮಂತ್ರಿಯು ಧಾವಿಸಿ ಬಂದೊದಗುವನು.)

ಮಂತ್ರಿಃ— ಮಹಾರಾಜರೆ, ತಡೆಯಿರಿ. ಇದನ್ನೇನು ಮಾಡುವಿರಿ? ಬೇಡಿರಿ. ನಿಮ್ಮ ಕೀರ್ತಿಗೆ ಕುಂದನ್ನುಂಟು ಮಾಡುವ ಈ ಹೊಲ್ಲದ ಕೆಲಸವನ್ನು ಮಾಡಬೇಡಿರಿ! ಹೃದಯದ್ರಾವಕವಾದ ಈ ಕೃತಿಯನ್ನು ನಿಮ್ಮ ಕೈಯಿಂದಾಗಗೊಡಬೇಡಿರಿ!!

ಹ. ವ.ಃ— ಇಲ್ಲ, ಮಂತ್ರಿಗಳೆ ಹಿಂದೆಗೆಯುವದಿಲ್ಲ. ಸ್ವಬಲ ಪರಬಲಗಳ ತಾರತಮ್ಯದ ವಿಚಾರವೂ ಪರರ ಯೋಗ್ಯತೆಯ ವಿಚಾ

ರವೂ ಇಲ್ಲದ ಆ ಮದಾಂಧನಾದ (ಸೆರೆಯುವರನ್ನು ತೋರಿಸಿ) ಈ ನೀಚರ ಅರಸನಾದ ಆ ಪುಲಿಕೇಶಿಗೆ ಈ ಹೃದಯದ್ರಾವಕ ಸಂಗತಿಯಿಂದಲೇ ಹರ್ಷರ ಪ್ರತಾಪವನ್ನು ತೋರಿಸುವೆನು.

ಮಂತ್ರಿ:— ತಮ್ಮ ಪ್ರತಾಪವು ಹೆಸರಾಗಿಯೇ ಇದೆ. ತಮ್ಮ ಈ ಗೆಲುವಿನಿಂದ ತಿಳಿಯದೇ ಅದು ಪುಲಿಕೇಶಿಗೆ? ಮಹಾನುಭಾವರು ಸೋತವರನ್ನು ಪುನಃ ಪೀಡಿಸುವದಿಲ್ಲ. ಇವರಿಗಾಗುವ ಈ ಅಪಮಾನವು ಹಿಂಸಾತ್ಮಕವಾಗಿರುವದಲ್ಲವೇ?

ಹ. ವ.:— ಮಂತ್ರಿಗಳೇ, ನೀವು ಸಾವಿರ ಹೇಳಿರಿ. ಇದನ್ನು ಮಾಡಿದ ಹೊರ್ತು ಶಾಂತವಾಗದು ನನ್ನ ಮನಸ್ಸು!

ಮಂತ್ರಿ:— ತಾಳಿರಿ. ಇದರಿಂದ ನಿಮಗೇ ಹಾನಿಯುಂಟು. ನಾನು ನನ್ನಂಥ ಅಸಂಖ್ಯ ಸೇವಕರು ತಮ್ಮಲ್ಲಿ ಭಕ್ತಿಯನ್ನಿಟ್ಟಿರುವಂತೆ, ಇವರೂ ತಮ್ಮ ಒಡೆಯನಲ್ಲಿ ಭಕ್ತಿಯುಳ್ಳವರಾದರೆ ತಪ್ಪೇನು? ಇವರಿಗೆ ತಮ್ಮ ಮಾತೃಭೂಮಿಯ ರಾಷ್ಟ್ರಧ್ವಜದ ಅಭಿಮಾನವಿರುವದು ಸಹಜವಲ್ಲವೇ? ಈ ತಮ್ಮ ಅಪಜಯದಿಂದ ಇವರಿಗೆ ದುಃಖವಾಗಿರಲಿಕ್ಕಿಲ್ಲವೇ? ಇವರೆದುರಿನಲ್ಲಿಯೇ ಇವರ ಪತಾಕವನ್ನು ಅಪಮಾನಗೊಳಿಸಿ ದುಃಖಗೊಂಡ ಇವರ ಹೃದಯಕ್ಕೆ ಬರೆಕೊಟ್ಟಂತೆ ಮಾಡುವದೇ? ದುಃಖಿತನು ವೈರಿಯಾಗಿದ್ದರೂ ಅವನನ್ನು ಪೀಡಿಸಬಾರದೆಂದೂ ಹಾಗೆ ಮಾಡುವವನು ನೀಚನೆಂದೂ ನೀತಿಶಾಸ್ತ್ರವು ಹೇಳುತ್ತದೆ. ಪ್ರಭುಗಳೇ ವಿಚಾರಿಸಿರಿ. ನೆರೆಹೊರೆಯ ರಾಜರಲ್ಲಿರುವ ನಿಮ್ಮ ಗೌರವಕ್ಕೆ ಕುಂದು ಬರಲಿಕ್ಕಿಲ್ಲವೆ ಇದರಿಂದ?

ಹ. ವ.:— (ಸಿಟ್ಟು) ಹಾ ವೃದ್ಧ ಮಂತ್ರಿಗಳೇ ತಡೆಯಿರಿ; ನಿಮ್ಮ ನೀತಿಶಾಸ್ತ್ರವನ್ನು ಕೇಳುವ ಅವಶ್ಯಕತೆಯಿಲ್ಲ ನನಗೀಗ? ಮತ್ತು ನಿಮ್ಮ ಅಬದ್ಧ ತರ್ಕವನ್ನು ಇಷ್ಟಕ್ಕೆ ಸಾಕುಮಾಡಿರಿ.

ಮಂತ್ರಿ:— ಮಹಾರಾಜರೆ, ನನ್ನ ಮಾತು ಅಪ್ರಿಯವಾಗಿ ಕಂಡರೂ ನಿಮಗೆ ಹಿತವನ್ನು ಮಾಡುವದು. ಕೇಳುವವರಿಗೆ ನಿಷ್ಟು

ರವಾದರೂ ಹಿತವನ್ನೇ ಹೇಳುವವರು ಅಪ್ತರೆನಿಸುತ್ತಾರೆ. ನನಗೆ ತಿಳಿದದ್ದನ್ನ ಹೇಳಿದೆನು ನಾನು!

ಹ. ವ.ಃ— ಬೇಡಿರಿ. ಇದೊಂದು ಸಾರೆ ನೀವು ಹೇಳಬೇಡಿರಿ. ನಾನು ಕೇಳಲಾರೆನು.

ಮಂತ್ರಿಃ— ತಮ್ಮ ಇಚ್ಛೆ! ನಾನು ಹೊರಟೆನು. (ಸ್ವಗತ) ದೇವಾ, ಈ ವರೆಗೆ ಘನತೆಯಿಂದ ಮೆರೆಯುತ್ತ ಬಂದ ಹರ್ಷ ಸಾಮ್ರಾಜ್ಯಕ್ಕೆ ಕುಂದೊದಗುವದನ್ನು ಈ ಕಣ್ಣುಗಳಿಗೆ ಕಾಣಗೊಡದಿರು. (ಹೋಗುವನು.)

ಹ. ವ.ಃ— ಹೋದರೆ ಹೋಗಲಿ, ಇದರಿಂದೊಂದು ಕಾಟವಾದರೂ ತಪ್ಪೀತು! (ಧ್ವಜವನ್ನು ಕಿತ್ತಿ ಒದೆದು ಚಲ್ಲಿ ಸೆರೆಯಾಳುಗಳಿಗೆ) ಎಲೋ ನೋಡಿರಿ ಮೊಳಗಲಿನ್ನು ನಿಮ್ಮ ವಿಜಯ ದುಂಧುಭಿಯು! ಅದರಿಂದ ಈ ನಿಮ್ಮ ರಾಷ್ಟ್ರಧ್ವಜದ ಅವಸ್ಥೆಯನ್ನು ನಿಮ್ಮ ಆ ದುರುಳ ಅರಸನು ಚನ್ನಾಗಿ ತಿಳಿಯಲಿ.

ಸಮರನಂದಃ— ಮದೋನ್ಮತ್ತನಾದ ಅರಸೇ, ನಮ್ಮ ವಿಜಯ ದುಂದುಭಿಯು ದಿಗಂತದಲ್ಲಿ ಮೊಳಗುವದು. ನಿನ್ನಂತಹನಿಂದ ಅದಕ್ಕೆ ಕುಂದೇನು? ಆದರೆ ಮದಾಂಧ! ನಿನ್ನ ಈ ದುರ್ವರ್ತನವು ಚಾಲುಕ್ಯ ಸಾರ್ವಭೌಮನ ಕೋಪಾಗ್ನಿಯನ್ನು ಪ್ರಜ್ವಲಗೊಳಿಸಿ ನಿನ್ನ ಅಖಿಲ ವೈಭವವನ್ನು ವಿಧ್ವಂಸಪಡಿಸದೆ ಬಿಡಲಿಕ್ಕಿಲ್ಲ! ಇದು ನಿಶ್ಚಯ!!

ಹ. ವ.ಃ— ಎಲೋ ಖೂಳ, ನಿನಗೆ ಮರಣದ ಅಂಜಿಕೆ ಇರುವದಿಲ್ಲವೇ?

ಸಮರನಂದಃ— ಹಃ ಹಃ ಮರಣವೇ? ಮರಣಕ್ಕೆ ನೀನು ಬಹಳ ಮಹತ್ವವನ್ನು ಕೊಟ್ಟಿರಬಹುದು. ನಿಸರ್ಗ ಸಿದ್ಧವಾದ ಈ ಮರಣವು ಈ ವೀರರಿಗೆ ಸಹಜವು! ಹೇಡಿಗಳು ಮರಣಕ್ಕೆ ಅಂಜುತ್ತಾರೆ. ವೀರರು ಅದರ ಸವಿ ತಕ್ಕೊಳ್ಳುತ್ತಾರೆ. ಸ್ವಾಮಿ ಕಾರ್ಯದಲ್ಲಿ ಸಾಯು

ವದು ಪರಮಧರ್ಮವು. ದೇಶಾಭಿಮಾನಿಯಾದವನಿಗೆ ಮರಣವು ಪ್ರೇಮದ ಅತಿಥಿಯೆಂಬದನ್ನು ಲಕ್ಷದಲ್ಲಿಡು. ನಮ್ಮ ಮರಣವೇನೋ ನಿನ್ನ ಕೈಯಲ್ಲಿರಬಹುದು. ಆದರೆ ಅಭಿಮಾನವು, ಉಜ್ವಲವಾದ ದೇಶಾಭಿಮಾನವು ಮತ್ತು ಶೌರ್ಯವು ನಮ್ಮಾಧೀನವಾಗಿವೆ. ಅರಸೆ, ನಿಶ್ಚಯವೆಂದು ತಿಳಿ. ಚಾಲುಕ್ಯ ಚಕ್ರವರ್ತಿಯ ಕೋಪಾಗ್ನಿಯು ನಿನ್ನ ಸರ್ವಸ್ವವನ್ನು ಸುಡದೆ ಎಂದೂ ಬಿಡಲಿಕ್ಕಿಲ್ಲ!

ಹ. ವ:— ಎಲೋ ಈ ಮೂರ್ಖನ ಬಾಯಿ ಮೇಲೆ ಹೊಡೆಯಿರಿ. ಈ ಪಶುಗಳನ್ನು ಬೇಗನೆ ಒಯ್ದು ಸೆರೆಮನೆಗೆ ಕಾಣಿಸಿರಿ. (ಒಯ್ಯುವಾಗ ಸಿಟ್ಟಿನಿಂದ ನೋಡುವನು.)

ದೂತ:— ಮಹಾಪ್ರಭು ವಸುಗುಪ್ತ ನಾಯಕರು ಬಂದರು.

ಹ. ವ:— (ಹೊರಳಿ) ಬಾ, ನಾಯಕಾ ನೀನು ನಮ್ಮ ವಿಶ್ವಾಸದ ಸೇವಕನಲ್ಲವೇ?.

ವಸು:— (ಕೈ ಮುಗಿದು) ಅಥವಾ ಏನಾದರೂ ಅಪರಾಧವಾಗಿದ್ದರೆ ಈ ಸೇವಕನನ್ನು ಕ್ಷಮಿಸಬೇಕು.

ಹ. ವ:— ಅದೇನಿಲ್ಲ! ಅಂತೇ ಈ ಮಹತ್ತರ ಪ್ರಸಂಗದಲ್ಲಿ ನಿನ್ನನ್ನು ಕರಿಸಿದ್ದೇವೆ.

ವಸು:— ಈ ಸೇವಕನು ಯಾವುದಕ್ಕು ಸಿದ್ಧನಿದ್ದಾನೆ.

ಹ. ವ:— ನೀನು ಈಗಲೇ ಹೊರಟು, ವೇಷಾಂತರದಿಂದ ಚಾಲುಕ್ಯರ ಸೈನ್ಯವನ್ನು ಸೇರಿ, ಅವರೊಡನೆ ಸಂಚರಿಸುತ್ತ ಅಲ್ಲಿಯ ಮಹತ್ವದ ಸಂಗತಿಗಳನ್ನು ನಮಗೆ ತಿಳಿಸುತ್ತಿರು.

ವಸು:— ಅವಶ್ಯವಾಗಿ ಮಾಡುವೆನು.

ಹ. ವ:— ಹಾಗಾದರೆ ನಡೆ. ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಂಡು ಹೊರಡು. ಬೇಗ ನಡೆ. (ಹೋಗುವರು.)

೩ ನೇ ನೋಟ.

(ಉಜ್ಜಯಿನಿಯ ಅರಮನೆಯ ಭಾಗ, ಸುಗಂಧದ್ರವ್ಯದ ಪೆಟ್ಟಿಗೆ ಯೊಡನೆ ಶೈಲೆ ಯೆಂಬೊಬ್ಬದಾಸಿಯು ಬರುವಳು.)

ಶೈಲೆ:— ಬರಬರುತ್ತ ಕಾಲವು ಬಿಕ್ಕಟ್ಟಿನದಾಗುತ್ತ ಬಂತು. ಆತ್ತ, ಕಾಳಗವು ನಡೆದದ್ದರಿಂದ ನಮ್ಮ ಈ ಉಜ್ಜಯಿನಿಯ ಜನರಲ್ಲೆಲ್ಲ ಚಿಂತೆಯ ಕೋಲಾಹಲವಾಗಿದೆ. ನಮ್ಮ ಅರಮನೆಯಲ್ಲಿ ಅವ್ಯವಸ್ಥೆಯು ಕೋಲಾಹಲವಾಗಿದೆ. ಇಂಥದರಲ್ಲಿ ನಮ್ಮ ಮಹಾರಾಣಿಯವರು ನನಗೆ, ಮೋಹಿನೀದೇವಿಯವರ ಹತ್ತರ ನೀನೇ ಇರಬೇಕು, ಅವರ ಸೇವೆಯನ್ನು ನೀನೆ ಮಾಡಬೇಕು, ಎಂದು ಒತ್ತಾಯದಿಂದ ಹೇಳುತ್ತಿರುವರು. ಆದರೆ (ಅಳುತ್ತ) ನನಗೆ ಒಳ್ಳೇ ಸಂಕಟ. ನಮ್ಮವ್ವಾ ಆಂ ಆಂ (ತಡೆದು) ಆ ಹೊಸದಾಗಿ ಬಂದಿರುವಳಲ್ಲ ಬಿಂಕಿನ ಬಡಿವಾರಿ, ಒನಪಿನ ಒಯ್ಯಾರೀ. ಆ ತಾರೆ ತಾನೆ ಮುಂದೆ ಮುಂದೆ ಓಡಾಡಿ ಮೋಹಿನಿ ದೇವಿಯವರ ಸೇವೆಗೆ ನಿಲ್ಲುವಳು. ಇವಳ ಥಾಟಮಾತಿಗೆ ಮೆಚ್ಚಿ ಮೋಹಿನಿಯವರಾದರೂ ಅವಳನ್ನೇ ಕರೆಯುವರು. ಆದೂ ಸರಿಯೇ! ನಮ್ಮಂಥ ಮುಗ್ಧ ಮುದುಕೆಯರ ರೀತಿಯು ಹೊಸಬಾಲಿಕೆಯಾದ ರಾಜಕುಮಾರಿಗೆ ಹೇಗೆ ಸರಿಕಂಡೀತು? ತಾರೆಯಂಥ ಕುಹಕೆಯರೇ ಬೇಕು. ಏನ ಹೆಣ್ಣೆ. ನಮ್ಮವ್ವಾ! ತುಸವಾದರೂ ಅಂಜಿಕೆ, ಲಜ್ಜೆ, ಇರಬಾರದೆ? ಅಕೋ ಬಂದಳೇ ಮತ್ತೆ ಅವಳು ನನ್ನ ಸಲುವಾಗಿ! ಈ ಸಾರೆ ಏನು ಮಾಡಿದರೂ ಕೊಡಬಾರದು ಈ ಸುಗಂಧದ ಪೆಟ್ಟಿಗೆಯನ್ನು. (ಮುಚ್ಚುವಳು)

ತಾರೆ:— (ಪೆಟ್ಟಿಗೆ ಹಿಡಿದು ಜಗ್ಗುತ್ತ) ಒಳ್ಳೇ ಅವಸರಮಾಡಿದ್ದಾಳೆ ಮುದುವಿ.

ಶೈಲೆ:— ಹೌದೇ ನೀನು ಹರೆಯದ ಹುಡುಗೆ. ಬಿಡುವದಿಲ್ಲ ನಾನಿದನ್ನು! ನೀನೇ ಏನು ಪೂರ್ವದ ಪ್ರೀತಿಯ ದಾಸಿ?

ತಾರೆ:--ಬಿಡೇ ಬಿಡು. (ಜೋರಿನಿಂದ ಕಸೆದುಕೊಂಡು) ಮೋಹಿನೀದೇವಿಯ ಕೋಮಲ ಕೇಶ ಕಲಾಪಕ್ಕೆ ಕೈಹಚ್ಚುವ ಯೋಗ್ಯತೆ ಯಾದರೂ ನಿನಗಿರುವದೇ? (ಬಾಯಿಗೆ ಕೈತಿವಿದು) ಒರಟು ಹೆಂಗಸು ನಡೆಯತ್ತ! (ನೂಕಿ ಹೋಗುವಳು.)

ಶೈಲೆ:--- (ಅಳುತ್ತ) ಯಾವಾಗಲೂ ಹೀಗೆಯೇ ಮಾಡುವಳೂಂ ಊಂ. (ತಡೆದು) ಇವಳು ಮೋಹಿನೀದೇವಿಯ ಮನವನ್ನೊಲಿಸಲಿಕ್ಕೆ ಇಷ್ಟೊಂದು ಪ್ರಯತ್ನವನ್ನೇಕೆ ಮಾಡುತ್ತಿರುವಳು? ಇವಳೇನು ಈ ಊರವಳೇ ನಾಡಿನವಳೇ? ಹೊಟ್ಟಿಗಾಗಿ ಸ್ವಲ್ಪ ದಿವಸಗಳ ಕೆಳಗೆ ಸೇರಿಕೊಂಡವಳು. ಇವಳ ಈ ತೋರಿಕೆಯ ಭಕ್ತಿಯ ಉದ್ದೇಶವಾದರೂ ಏನಿರಬಹುದು? ಈ ನೀಚಳು ಏನಾದರೂ ಅನರ್ಥವನ್ನುಂಟು ಮಾಡಿದರೆ? ಇದರ ಸುಳಿವೇನಾದರೂ ಮಹಾರಾಣಿಯವರಿಗೆ ಹತ್ತಿರಬೇಕೆಂತೇ, ಮೋಹಿನೀದೇವಿಯವರ ಹತ್ತರ ಯಾವಾಗಲೂ ನಾನೇ ಇರಬೇಕೆಂದು ಹೇಳುವರು. ಆದರೆ ನಾನು ಮೋಹಿನೀದೇವಿಯವರ ಸಮೀಪಕ್ಕೆ ಹೋದೊಡನೆ, ಈ ಜೆಡಗಿನ ಭಾಮಿನಿ ಕೈತಿರುವುತ್ತ ಹಸಿದ ಹುಲಿಯಂತೆ ಮೈಮೇಲೆ ಬಂದು ಹುಚಾಪುಚಾ ಮಾಡಿ ನೂಕಿಹಾಕುವಳು. ಈ ನಟಿಯು ಮೋಹಿನೀದೇವಿಗೆ ಏನು ಮಂತ್ರ ಮಾಡಿರುವಳೋ ಏನೋ. ಅವರು ಬಾಯಿ ಬೆಳ್ಳಗಾಗಿ ತಿರುಗುವ ನನ್ನನ್ನು ನೋಡಿ (ಅಳುತ್ತ) ಮುಗುಳು ನಗೆ ನಕ್ಕು ಈ ಕುಟಿಲೆಯನ್ನೇ ಸನ್ಮಾನಿಸುವರು. ಪರತಂತ್ರದ ಈ ಅರಮನೆಯ ವಾಸಕ್ಕಿಂತ, ಬಡವರಾಗಿ ನಮ್ಮಷ್ಟಕ್ಕೆ ನಾವು ನಮ್ಮ ಗುಡಿಸಲಿನಲ್ಲಿ ಬೀಳುವದು ಒಳ್ಳೇದವ್ವಾ. (ಕಣ್ಣಿಗೆ ಸೆರಗು ಹಚ್ಚಿ ಹೋಗುತ್ತಿರುವಾಗ ಪ್ರತಾಪರಾಯನು ಬರಲು ಬೆಚ್ಚಿ ತಿರುಗುವಳು.)

ಪ್ರತಾಪರಾಯ:--- ಏನು ಶೈಲಮ್ಮ ಅಳುವಿಯೇನು?

ಶೈಲೆ:--- ಇಲ್ಲ ದೊರೆಗಳೆ, ಕಣ್ಣಲ್ಲಿ ಹರಳು ಬಿದ್ದಂತಾಯಿತು. ಒರಿಸಿದೆನಿಷ್ಟೇ?

ಪ್ರತಾಪರಾಯಃ— ಹೀಗೋ? ಮುಗ್ಧಭಾವದವಳು ನೀನು. ಯಾರಾದರೂ ನಿನಗೆ ಬಿರುನುಡಿಗಳನ್ನು ಆಡಿದರೋ ಏನೋ ಎಂದು ತಿಳಿದಿದ್ದೆನು. ಇರಲಿ. ಶೈಲಮ್ಮ ಅರಮನೆಯ ಜನರೆಲ್ಲ ನೀವು ಜಾಗ್ರತರಾಗಿರ್ರಿ. ನಾವು ಚಾಲುಕ್ಯರಾಜನ ಮಾಂಡಲಿಕರಾದುದನ್ನು ಕೇಳಿ ಹರ್ಷವರ್ಧನನು ಸಿಟ್ಟಾಗಿ ನಮ್ಮ ಈ ಉಜ್ಜಯಿನಿಯನ್ನು ತೆಗೆದುಕೊಳ್ಳಬೇಕೆಂದು ಮುತ್ತಿಗೆ ಹಾಕಿರುವನು. ಪ್ರಸಂಗವು ಹೇಗೆ ಬರುವದೋ ಏನೋ ತಿಳಿಯಿತೇ? (ಶೈಲೆ ತಲೆದೂಗುವಳು) ಈಗ ನನ್ನ ಮಗಳು ಮೋಹಿನಿ ಎಲ್ಲಿ? ಅವಳನ್ನು ಮಾತನಾಡಿಸಿ ಯುದ್ಧ ಕಾರ್ಯಕ್ಕೆ ತೆರಳಬೇಕಾಗಿದೆ.

ಶೈಲೆಃ— ಉಪವನದಲ್ಲಿರುವರು. ಮಹಾರಾಜರು ಇತ್ತ ಬರಬೇಕು. (ಹೋಗುವರು.)

೪ನೇ ನೋಟ

[ಉಪವನದಲ್ಲಿ ಚಿಂತಾತುರಳಾದ ಮೋಹಿನಿಯು]

ಮೋಹಿನಿಃ— ದುರ್ದೈವಿಯಾದ ನನಗೆ ಈ ವನವಿಹಾರವೂ ಬೇಸರವಾಯಿತು.

ಪದ॥ ರಾಗ ಯಮುನ ತಾಳ ತ್ರಿವಟ [ದಾಟಿ ಟಕಮುಕಪಾಹಿ ಸೂರ್ಯರಾ]

ಮನದ ವಿಲಾಸಾ। ಮಾನಸವಿರಸವು।ಬೇಸರೀಗಹಾ॥
ಮಾನಸ ತಾಪಾ ಬಳೆಯಿತಕಟ ಹಾ॥ಪ॥
ಸಹಿಸೆ ನೀ ದೇಹಾಲಂಕಾರ ವ್ಯರ್ಥವಿದು ಭಾರ ಮಂದವಾಯು
ವಿಂದೀ ದೇಹಕೆ ತಾಪ ಹಾ॥

ನನ್ನ ಹೃದಯೇಶ್ವರನ ಸಮಾಗಮ ಸುಖವು ಎಂದು ದೊರೆಯುವದು?

ಪದ॥ ರಾಗ ಬಾಗೇಸರಿ, ತಾಳ ಝಂಪಾ [ಧಾಟಿ ಯಾರೀ ಮನೋಹಾರಿ]

ಶ್ರೀ ರಾಜರಾಜೇಂದ್ರ ತೋರಿಸದೆ ಚಂದ್ರಾಸ್ಯ। ಮಾರಾಂಬುಗಳಿಗೀಡು॥ ಹಾಗಮಣ ಮಾಡಿದೆಯಾ॥

ಪ್ರಾಣಪ್ರಿಯಾ ನಿನ್ನ। ಪಾದಾರವಿಂದದಲಿ। ಪ್ರಾಣವನೆ ನೀಡಿಹೆನು।
ಮಾನಿಸದೆ ಸೈತಿರುವೆ॥

(ತಾರೆಯು ಬಂದು ತೆರೆಯಾಗಿ ನಿಂತುಕೊಳ್ಳುವಳು.)

ಅಂತರಂಗದ ವಿಯೋಗದಾಹವನ್ನು ಹೇಗೆ ಸಹಿಸಲಿ? (ಗದ್ದುಗೆಯ ಮೇಲೆ ಕುಳಿತು) ಚಾಲುಕ್ಯ ಮಹಾರಾಜನು ಇನ್ನೊಮ್ಮೆ ಉಜ್ಜಯಿನಿಗೆ ಬರಲಿಕ್ಕಿಲ್ಲವೇ? ಆತನು ಪ್ರಜೆಗಳಾದ ನಮ್ಮೆಲ್ಲರಿಗೆ ಇನ್ನೊಮ್ಮೆ ದರ್ಶನವನ್ನೀಯಲಾರನೇ? ಇದೀಗ ನನ್ನ ತಂದೆ ಹೇಳಿದಂತೆ ಆ ನನ್ನ ಹೃದಯೇಶ್ವರನು ನಮ್ಮವರ ಸಹಾಯಕ್ಕೆ ಒಮ್ಮೆ ಇಲ್ಲಿಗೆ ಬಂದರೆ ಸಾಕು; ಆತನು ನನ್ನನ್ನು ಪರಿಗ್ರಹಿಸಲಿ ಪರಿಗ್ರಹಿಸದಿರಲಿ!! ನಾನು ಮಾತ್ರ ನನ್ನ ಮನೋಗತವನ್ನು ತಿಳಿಸಿ, ಮುಂದಿನ ಮಾರ್ಗವನ್ನು ಕಂಡು ಕೊಳ್ಳುವೆನು. ಇದೋ ಪ್ರಾಣನಾಥನೆ ಇದು ನನ್ನ ನಿಶ್ಚಯವು! ಆದರೆ ನೀನೊಂದು ವೇಳೆ ತಿರುಗಿ ಮುಖವನ್ನೇ ತೋರಿಸಲಾರೆಯೇನು? ಹೀಗೆ ನಿನ್ನ ವಿರಹದಿಂದ ಮರುಗಿ ಸಾಯುವದೇ ನನ್ನ ಹಣೆಬರಹದಲ್ಲಿರುವದೇನು? ಪ್ರಿಯಕರಾ.

ಪದ॥ ರಾಗ॥ ದರ್ಬಾರಿ ಕಾನಡಾ, ತಾ। (ಧಾಟಿಃ ಪ್ರಭುವರ ಪೊರೆವುದು ತವಭಕ್ತರಾ)

ನೆನೆಯುದು ಪೆರತೊಂದನು ಮನ್ಮನಾ। ತವಪದವನುಳಿದು ಮೋಹನಾ॥
ಪ್ರಾಣಾಧಿನಾಥ ದಯಾಳಾ ಮನೋಹರಾ। ಪದಾಂಬುಜ ವನಾಸದಾ ಸ್ಮರಿಪೆ॥

ತಾರೆಃ-- (ಸ್ವಗತ) ಮತ್ತೇನಿದೆ? ಚಾಲುಕ್ಯರಾಜನ ಹಂಬಲದ ಬಡಬಡಿಕೆ! ಕಾಣುವೆಯಂತೆ ಆ ಚಾಲುಕ್ಯ ರಾಜನನ್ನು! ನೆನೆಯುವೆಯಂತೆ ನಿನ್ನ ಆ ಪ್ರಿಯಕರನನ್ನು! ಆ ದುರಾತ್ಮನ ಪಾರುಪತ್ಯವನ್ನು ನಿನ್ನ ಕಿವಿಯಿಂದ ಕೇಳಿದರೆ ಸೈ!! ನೀನು ಆ ಪುಲಿಕೇಶಿಯನ್ನು ಕೂಡುವದೆಂದರೆ ನಾನೂ ನನ್ನಣ್ಣನೂ ಮಾಡಿದ ಸಾಹಸಗಳೆಲ್ಲ ನೀರಲ್ಲಿ ಮುಳುಗಬೇಕಾದೀತು ನೀರಲ್ಲಿ! (ಸಮೀಪಕ್ಕೆ ಬಂದು) ದೇವಿಯವರೇ ಹೆಳಲು ಹಾಕಬೇಕೆನ್ನುವೆನು?

ಮೋಃ— ಬೇಡ ತಾರೆ ಬೇಡ. ನನ್ನ ಮನಸ್ಸಿಗೆ ಈಗ ತಿಲ ಮಾತ್ರವೂ ಸೊಗಸಿಲ್ಲ.

ತಾರೆಃ— ಹೇಗೆ ಸೊಗಸಿರಬೇಕು ದೇವಿಯವರೇ? (ಒನಪಿನಿಂದ) ವ್ಯಥೆಯ ಕಾರಣಗಳು ಒಂದೇ ಎರಡೇ...?

ಮೋಃ— ಹೇಳು ನೋಡುವಾ. ಯಾವ ಕಾರಣಗಳಿಂದ ನನ್ನ ಸ್ಥಿತಿಯು ಹೀಗಾಗಿರಬಹುದು?

ತಾರೆಃ— ಸದ್ಯಕ್ಕೆ ನಡೆದ ಯುದ್ಧದ ಚಿಂತೆಯೊಂದು ಎಲ್ಲರನ್ನು ಮುತ್ತಿದೆಯಷ್ಟೇ?

ಮೋಃ— ನಿಜವೇ! ನನ್ನ ತಂದೆಯು ಇದೀಗ ಯುದ್ಧದ ಸ್ವರೂಪವನ್ನು ಹೇಳಿದಾಗಿನಿಂದ ನಮ್ಮೆಲ್ಲರ ಗತಿಯು ಹೇಗೋ ಎಂದು ಮನವು ತಲ್ಲಣಿಸಹತ್ತಿದೆ. ಹರ್ಷವರ್ಧನನು ದೊಡ್ಡ ದಂಡಿನೊಡನೆ ಮುತ್ತಿಗೆ ಹಾಕಿದ್ದಾನೆ. ತಾರೆ, ಚಾಲುಕ್ಯ ಸಾರ್ವಭೌಮನು ನನ್ನ ತಂದೆಯವರ ಸಹಾಯಕ್ಕೆ ಇನ್ನೂ ಬರಲಿಕ್ಕಿಲ್ಲವೇ?

ತಾರೆಃ— ಇದನ್ನೇನು ಹೇಳಬೇಕು ದೇವೀ? ಅವರಿಗೆ ಇನ್ನೂ ಇವರ ವಿಜ್ಞಾಪನೆಯು ಮುಟ್ಟಿರಲಿಕ್ಕಿಲ್ಲ.

ಮೋಹಿನಿಃ— ಅಂತೇ ಹರ್ಷರಾಜನ ಮದೋನ್ಮತ್ತತೆಗೆ ಅನುವಾಗಿದೆ.

ತಾರೆಃ— ಸಂಶಯ ವೇನಿದಕ್ಕೆ?

ಮೋಃ— ಚಾಲುಕ್ಯ ಮಹಾರಾಜನ ಭುಜ ಬಲದ ಬಿರುಗಾಳಿಗೆ ಹರ್ಷವರ್ಧನನು ಹುಡಿಯಾಗಿ ಹಾರದಿರುವನೇ?

ತಾರೆಃ— (ಸ್ವಗತ) ನೋಡಿದೆಯಾ ಎಷ್ಟೊಂದು ಪಕ್ಷಪಾತತನವು ಅವ್ವಾ! (ಪ್ರಕಾಶ) ದೇವೀ ನಿಮ್ಮ ಮನೋ ವ್ಯಾಕುಲಿತೆಯು

ಇನ್ನೊಂದು ಕಾರಣವನ್ನು ಕೇಳಿರಿ; ಆ ಚಾಲುಕ್ಯ ಮಹಾರಾಜರ ಸ-ಮಾ-ಗಮ-ದ...(ನಸುನಗೆ).

ಮೋ:— ನಿಜವೇ ಸಖಿ. ಆ ಮೋಹನರೂಪನ ವಿರಹವು ನನ್ನನ್ನು ಕೊರಗಿಸುತ್ತಲಿದೆ.

ತಾರೆ:— ಸಹಜವಲ್ಲವೇ? ಸರಸ ಗಾತ್ರಳಾದ ನದೀ ವಧುವು, ಕೆರೆಕಟ್ಟೆಗಳೆಂಬ ಅಂಥಿಂಥ ಜಲಾಶಯಗಳನ್ನು ನೆನೆಯದೆ, ಘನ ವಂತನಾದ ಸಮುದ್ರ ರಾಜನನ್ನೇ ಹುಡುಕಿಕೊಂಡು ಹರಿಯುವಂತೆ ಯೌವನವತಿಯಾದ ನೀನು ಅಂಥಿಂಥ ರಾಜಕುಮಾರರನ್ನು ಧಿಕ್ಕರಿಸಿ ಬಲಶಾಲಿಯಾದ ಪುಲಿಕೇಶಿ ಮಹಾರಾಜನಲ್ಲಿ ಅನುರಾಗಿಣಿಯಾದರೆ ಯಾರು ಅಲ್ಲವೆಂದಾರು? ಪರಿಪುಷ್ಟಗಾತ್ರಳಾಗಿದ್ದರೂ ಕುಮುದಿನಿಯು ಚಂದ್ರೋದಯದ ಪೂರ್ವದಲ್ಲಿ ಮುಖ ಮ್ಲಾನಳಾಗಿದ್ದರೆ ದೋಷವೇನು?

ಮೋ:— ಕುಮುದಿನಿಯು ಅಲ್ಪಾವಧಿಯಲ್ಲಿಯೇ ಚಂದ್ರ ದರ್ಶನದಿಂದ ಅರಳುವದು ನಿಶ್ಚಿತವಾದದ್ದು; ಆದರೆ ಆ ಭಾಗ್ಯವು ನನಗೆಲ್ಲಿದೆ?

ತಾರೆ:— ನಿಮಗೂ ಆ ಭಾಗ್ಯವಿದೆ; ದೇವೀ ವಿಚಾರವೇಕೆ? ಸುತ್ತಲು ಮುತ್ತಿದ ಕತ್ತಲೆಯನ್ನು ಹತ್ತೊತ್ತಿ ಚಂದ್ರಮನು ತನ್ನ ಶೀತಲ ಕರಗಳಿಂದ ಕುಮುದಿನಿಯನ್ನು ಮನ್ನಿಸುವಂತೆ, ಚಾಲುಕ್ಯ ರಾಜ ಚಂದ್ರನು ಉಜ್ಜಯಿನಿಯನ್ನು ಮುತ್ತಿದ ಶತ್ರು ಸೈನ್ಯವನ್ನು ಹೊಡೆದೋಡಿಸಿ. ಸುತ್ತಲೂ ಆನಂದ ಚಂದ್ರಿಕೆಯನ್ನು ಬೀರಿ ನಿಮ್ಮ ಪಾಣಿಗ್ರಹಣ ಮಾಡುವನು; ಸಂಶಯವಿಲ್ಲ.

ಮೋಹಿನಿ:— ಗೆಳತೀ ಎಂಥ ಸುವಿಚಾರಿಯೇ ನೀನು? (ಎದ್ದು ಆದರಿಸಿ) ಈ ವರೆಗೆ ಶಾಂತವಾಗದ ನನ್ನ ಮನಸ್ಸಿಗೆ ನಿನ್ನ ನುಡಿಯಿಂದ ಸಮಾಧಾನವಾಗುತ್ತಲಿದೆ ನೋಡು.

ಪದ॥ ರಾಗ ಗರುಡಧ್ವನಿ, ತಾಳ ತಿವಟ, ಧಾಟಿ ಲಲಿಲಾವುನಾನಚ ಅಗಲವ

ಮುದವಾಂತೆ ನಾ ತವಸುವಚನಕೀಗಾ ಚದುರೆ ಸುವಿಚಾರದಾ॥
ಹೃದಯಾನಂದವ ಬಗೆಯುತಾ ಮುದದಿ ಸಖಿ ನಿನ್ನ ಮಾನಿಸುವೆ!
ಮುದವಾಂತೆನಾ

(ಅನುಮಾನಿಸಿ ಹಿಂದೆ ಕುಳಿತುಕೊಳ್ಳುವಳು)

ತಾರೆ:— (ಸ್ವಗತ) ಚನ್ನಾಗಿ ಸಿಲುಕಿದಳು ನನ್ನ ಬಲೆಯಲ್ಲಿ!

ಮೋಹಿನಿ:— ಇದೇನು ಬಲಗಣ್ಣು ಹಾರಹತ್ತಿತು!

ತಾರೆ:— (ತೆರೆನೋಡಿಸ್ವಗತ) ಹಾರದೇನು ಮಾಡೀತು? ಸಮೀಪಿಸಿದೆ ವಿಪತ್ತು!!

ಸರದಾರ ವರುಣನು (ಧಾವಿಸಿ ಬಂದು):— ದೇವಿಯವರೇ ಹೇಳಿರಿ! ಬಲು ಬಿಕ್ಕಟ್ಟಿನ ವೇಳೆಯು ಬಂದಿತು. ಯುದ್ಧದ ಪರಿಣಾಮವು ನೆಟ್ಟಗಿಲ್ಲವಂತೆ; ಉತ್ತರದಿಂದ ಯುವಕನರಿಂದೊಡಗೂಡಿದ ದೊಡ್ಡ ಸೇನೆಯೊಂದು ಉಜ್ಜಯಿನಿಯ ಮೇಲೆ ಸಾಗಿಬರುತ್ತಿರುವದಂತೆ. ಆದ್ದರಿಂದ ಮಹಾರಾಜರು, ಮಹಾರಾಣಿಯವರನ್ನೂ ತಮ್ಮನ್ನೂ ಈಗಲೇ ಹೊರಡಿಸಿ ನಮ್ಮ ಭದ್ರವಾದ ವಿಜಯದುರ್ಗಕ್ಕೆ ಮುಟ್ಟಿಸಬೇಕೆಂದು ಅಪ್ಪಣೆ ಕಳಿಸಿದ್ದಾರೆ ಇನ್ನೂರು ಜನ ಅಂಗರಕ್ಷಕರು ತಮ್ಮ ಸಲುವಾಗಿ ಪಶ್ಚಿಮದ್ವಾರದಲ್ಲಿ ಸಿದ್ಧರಾಗಿ ನಿಂತಿದ್ದಾರೆ. ಮಹಾರಾಣಿಯವರು ಈಗಲೇ ಅಲ್ಲಿಗೆ ದಯಮಾಡಿಸಿದರು. ತಮ್ಮನ್ನು ಬೇಗನೆ ಕರಕೊಂಡು ಬರಲು ಹೇಳಿದ್ದಾರೆ. ಏಳಿರಿ ಬೇಗ. ತಡಮಾಡಿದರೆ ಏನಿರುವದೋ ಏನೊ? (ತೇಂಕುವನು.)

(ಅಷ್ಟರಲ್ಲಿ ಮೇಣೆಯೊಂದನು ತಂದು ಇಳಿಸುವರು)

ಮೋಹಿನಿ:— (ಗಾಬರಿಯಿಂದ ಅತ್ತಿತ್ತ ನೋಡುವಳು.)

ತಾರೆ:— ದೇವಿಯವರೇ ತಡೆಯಿರಿ; ಅರಮನೆಗೆ ಹೋಗಿ ನೋಡಿಕೊಂಡು ಬರುವೆನು (ಅವಸರದಿಂದ ಹೋಗುವಳು.)

ಮೋಹಿನಿಃ— ವರುಣರಾಯರೇ, ಚಾಲುಕ್ಯ ಮಹಾರಾಜನು ಸಹಾಯಕ್ಕೆ ಬರುವನಲ್ಲ! ಇಷ್ಟೊಂದು ಭಯಕ್ಕೆ ಕಾರಣವೇನು?

ವರುಣಃ— ಎಲ್ಲಿಯ ಚಾಲುಕ್ಯ ಮಹಾರಾಜ? ಎಲ್ಲಿರುವದೋ ಅವನ ಸೈನ್ಯ? ನಮ್ಮ ವಿಜ್ಞಪ್ತಿಯನ್ನೇ ಆತನು ಮನ್ನಿಸಿರದಿದ್ದರೆ ಏನುಮಾಡಬೇಕು? ಸದ್ಯಕ್ಕೆ ವಿಪತ್ತು ಬಾಯಿ ತೆಗೆದು ಬೆನ್ನುಹತ್ತಿದೆ!

ಮೋಹಿನಿಃ— ಛೀ, ಛೀ, ಆತನು, ತನ್ನವರ ಕಷ್ಟವನ್ನು ಕೇಳಿ ಎಂದೂ ಸಹಿಸನು.

ವರುಣಃ— ನಾವೂ ಹಾಗೆಯೇ ತಿಳಿದಿದ್ದೆವು. ಆದರೆ ಈವರೆಗೆ ಅವರ ವರ್ತಮಾನವೇ ಇಲ್ಲವೆಂದ ಬಳಿಕ ಏನು ತಿಳಿದುಕೊಳ್ಳಬೇಕು ನೀವೇ ಹೇಳಿರಿ ದೇವಿಯವರೇ?

ತಾರೆಃ— (ಓಡುತ್ತ ಬಂದು) ದೇವಿಯವರೇ, ಮಹಾರಾಣಿಯವರು ನಿಜವಾಗಿಯೂ ಹೋಗಿಬಿಟ್ಟಿದ್ದಾರೆ. ಶೈಲಮ್ಮನು, ನಾವಿಬ್ಬರೂ ಬೇಗಬರಬೇಕೆಂದು ಹೇಳಿದ ಮಹಾರಾಣಿಯವರ ಅಪ್ಪಣೆಯನ್ನು ತಿಳಿಸಲು ಬರುತ್ತಿದ್ದಳು. ನನ್ನನ್ನು ಕಂಡು ಬರಹೇಳಿ ಆಕೆ ಮತ್ತೆ ಹೋದಳು. ಏಳಿರಿ! (ಮುಂದಾಗಿ ಮೇಣೆಯ ಬಾಗಿಲ ತೆರೆಯುವಳು. ಮೋಹಿನಿ ಗಾಬರಿಯಿಂದ ಒಳಗೆ ಕೂಡುವಳು.)

ತಾರೆಃ— (ಮುಗುಳು ನಗೆಯಿಂದ) ಅಣ್ಣಾ ನಿನ್ನ.....

ವರುಣಃ— ಹೇ! (ಸುಮ್ಮನಿರುವ ಸಂಕೇತ)· ಕೂಡು ಬೇಗ ಒಳಗೆ, (ತಿರುಗಿ) ಬೋಯಿಗಳೆ, ಎಚ್ಚರಿಕೆಯಿಂದ ಹೋಗಿರಿ. (ಮೇಣೆಯನ್ನು ಹೊತ್ತುಒಯ್ಯುವರು) ವಾಹವ್ವಾ! ವೀರನೆಂದರೆ ನಾನೇ ಸರಿ! ಭಲೆ ಭಲೆ! ತಂತ್ರಗಳನ್ನು ರಚಿಸುವದರಲ್ಲಿ ನನ್ನ ಬುದ್ಧಿಗೆ ಸರಿಯಿರುವುದೇ? ಶಾಬಾಸ್, ನಾನೂ ನನ್ನ ತಂಗಿಯೂ ಪ್ರತಾಪರಾಯನ ಸೇವೆಯಲ್ಲಿ ನಿಂತದ್ದು ನಮ್ಮುದ್ದೇಶಗಳನ್ನು ಸಾಧಿಸುವದಕ್ಕಲ್ಲವೇ? ತಾರೆಯಾದರೂ ಒಳ್ಳೇ ಜಾಣಳು, ಅವಳು ತನ್ನನು

ನೋಗತವನ್ನು ತಿಳಿಯಗೊಡದೆ ಮೋಹಿನಿಯ ಪ್ರೀತಿಯನ್ನು ಚನ್ನಾಗಿ ಸಂಪಾದಿಸಿ ಕಾರ್ಯವನ್ನು ಸಾಧಿಸಿದಳು. ಆದರೆ ಅಲ್ಪ ಸಂತೋಷಿ ಯಾದ ಆಕೆಯು ಆಗಲೆ ಮರವೆಯಿಂದ "ಅಣ್ಣಾ ನಿನ್ನ ಒಂದು ಇಷ್ಟವು ಕೈ ಗೂಡಿತೆಂದು ಹೇಳಬೇಕೆಂದು ಮಾಡಿದ್ದಳು. ಅಯ್ಯೋ ಇದರಿಂದ ನಮ್ಮ ಗುಪ್ತಕಾರಸ್ಥಾನದ ಸುಳಿವು ಮೋಹಿನಿಗೆ ಹೊಳೆ ದಿದ್ದರೆ ಎಲ್ಲವೂ ಅನರ್ಥ. ಕೈಗೆ ಬಂದ ತುತ್ತು ಬಾಯಿಗೆ ಬರದೆಹೋ ಗುತ್ತಿತ್ತು. ಸಂತೋಷಭರದಲ್ಲಿ ಇದನ್ನು ಮರೆತೇ ಇದ್ದಳು ತಾರೆ. ಕಪ ಟವನ್ನು ನಟಿಸಬೇಕಾದರೆ ರೂಢಿ ಬೇಕಾಗುವದು ರೂಢಿ! ಆದರೂ ತಾರೆಯು ತಕ್ಕಷ್ಟು ಸುಧಾರಿಸಿರುವಳು ಪರವಿಲ್ಲ. ಇನ್ನೇನು ಪುಲಿ ಕೇಶಿಯ ಪದರಿಗೆ ಬೀಳುವ ಈ ಕನ್ಯಾ ರತ್ನವನ್ನು ಅಪಹರಿಸುವ ದಂತೂ ಮುಗಿಯಿತು. ಪುಲಿಕೇಶಿಯ ನಾಶವನ್ನು ಮಾಡುವದೊಂ ದುಳಿದಿದೆ. ಇವೆರಡಕ್ಕಲ್ಲವೇ ನಾನಿಲ್ಲಿ ನಿಂತದ್ದು. ಈ ಮುದಿರಾಜನ ಸೇವೆಯು ನನಗೆಲ್ಲಿ ಬೇಕಾಗಿದೆ ಪುಲಿಕೇಶಿಯ ವಿರುದ್ಧವಾಗಿ ಹರ್ಷ ರಾಜನನ್ನು ಎಬ್ಬಿಸಿ ತಂದು ಎರಡನೇಯ ಕೆಲಸದ ಬಹಳ ಭಾಗವನ್ನು ಕೂಡ ನೆರವೇರಿಸಿದ್ದೇನೆ. ಇನ್ನು ಈ ಪ್ರತಾಪರಾಯನ ಮನದೊಳಗೆ ಪುಲಿಕೇಶಿಯ ಬಗ್ಗೆ ದ್ವೇಷಾರೋಪಣ ಮಾಡಿದರಾಯಿತು ನನ್ನ ಕೆಲ ಸವು. ಈ ಚತುರನು ಅದಕ್ಕೂ ಬಲೆಹಾಕಿದ್ದಾನೆ. ಈ ಅರಸನಿಗೆ ಮಂಕಬೂದಿಯನ್ನು ಹಚ್ಚಿ ಜಿಗಿಯುವದೇ ಕೊನೆಯದು. ಎಲೋ, ಚಾಲುಕ್ಯ ರಾಜ, ನೀಚ ಪುಲಿಕೇಶಿ, ಹಿಂದೆ ಮಾಡಿದ ಅಪಮಾನದ ಸೇಡು ತೀರಿಸದೆ ಬಿಡುವೆನೇ? (ಹೋಗುವನು.)

೫ನೇ ನೋಟ.

ಕಾವಲಿಗಃ—(ನಡಗುತ್ತ ಬಂದು) ಇಸವಾಸಗಾತ ಮಾಡೋ ದಂದ್ರ ನನ್ನ ಮೈಯಾಗ ನಡಗಾನ ಬರತೈತಿ. ಆದರೂ ನೈತ,

ಅರದಾ ಮರದಾ ಮಾಡಿ ಬಿಟ್ಟೆ! ಒಡಲಿಗೆ ಕೊಟ್ಟ ಒಡ್ಯಾನ ಗೋಣ ಮುರ್ದಬಿಟ್ಟೆ!! ಸಾನಾರ ಏನ ಮಾಡ್ಲಿ? ವರುಣಪ್ಪ ಕೊಟ್ಟ ದುಡ್ಡ ನನ್ನ ಬಾಯಾಗ ನೀರ ಬಿಡಿಸ್ತ. ಮೋಹಿನಮ್ಮನವರನ ಹೊತು ಹಾಕಿದ ಮ್ಯಾಗ ನಮ್ಮ ಮಾರಾಣೇರು ನಮ್ಮ ದೊಡ್ಡ ಒಡ್ಯಾರು ನಿನ್ನೆ ಗೋಳಾಡಿದರು. ಈ ಮುಂಗ್ಯಾನ ಮುಗ ಏನ ಮಾಡಿದ್ನಪ? ಅಗೋ ಮತ್ತ ಬಂದ್ರು, ನಮ್ಮೊಡ್ಯಾರ ಮುಕ ಎಷ್ಟು ಸಣ್ಣಾಗಿದೆ ನೋಡಾರೆಲ್ಲ? ಅಯ್ಯಯ್ಯೋ ಇನ್ನ ಗತಿ? (ನಡುಗುವನು)

(ಉದಾಸೀನನಾದ ಪ್ರತಾಪರಾಯನೂ ವರುಣನೂ ಬರುವರು)

ವರುಣಃ— ಎಲೋ ಕಾವಲಿಗ ನಿಜವಾಗಿ ಹೇಳು. ಮೋಹಿನೀದೇವಿಯವರನ್ನು ಅಪಹರಿಸಿಕೊಂಡು ಹೋದವರು ಯಾರಾಗಿರಬಹುದು?

ಕಾವಃ— ಅವರ ಗುರ್ತರೇ ಎಪ್ಪ ನಂಗ? (ನಡುಗುವನು)

ವರುಣಃ— ಇದೋ ಬೆದರಬೇಡ, ಹೇಳು; ಅವರು ಯಾವ ದೇಶದ ಜನರಾಗಿರಬಹುದು? ಅವರ ಉಡಿಗೆ ತೊಡಿಗೆ ನೋಡಲಿಲ್ಲವೇ? ಮಾತು ಗೀತು ಕೇಳಲಿಲ್ಲವೇ?

ಕಾವಃ— ಅವರ್ರೀ, ಅವರು. ಹಿಂದಾಕ ನಮ್ಮಲ್ಲಿ ಚಲುಯಾಕ ದೇವರು ಹೆಸರ ನೆನಪಾಗಲೊಲ್ದು.

ವರುಣಃ— ಚಾಲುಕ್ಯರಲ್ಲವೆ ಬಂದವರು?

ಕಾವಃ— ಹಾಂ. ಅದ ಚಾಲುಕ್ಯರ ದಂಡಿನವರಂಗ ಇದ್ದರೆಪ್ಪ!

ವರುಣಃ— ಅವರೆಷ್ಟು ಮಂದಿ ಬಂದಿದ್ದರು?

ಕಾವಃ— ಮಬ್ಬಾಗಾಕ ಬಂದಿತ್ರಿ, ಐದಾರ ಮಂದಿ ಕಾಣಸತಿದ್ರು.

ವರುಣಃ— ಅವರನ್ನು ನೀನು ತಡೆಯಲಿಲ್ಲವೇಕೆ? ಬೇರೆ ಜನರನ್ನಾದರೂ ಕರೆಯಬೇಕಿತ್ತು?

ಕಾವ:—ಅಟ್ಟರಾಗ ನನ್ನ ಕೈಯ ಕಟ್ಟಿ ಗಿಡಕ ಬಿಗದರ್ರಿ. (ಅಂಜಿಕೆ ನಟನ)

ವರುಣ:— ಕಟ್ಟಿಸಿಕೊಂಡನಂತೆ; ಮಗನೇ ಹೆಂಗಸೇನೋ ಕಟ್ಟಿಸಿಕೊಳ್ಳಲಿಕ್ಕೆ? (ಒದೆಯಹತ್ತುವನು.)

ಪ್ರತಾಪರಾಯ:— ಸರದಾರ ಆ ಬಡಪನನ್ನು ಇನ್ನು ಪೀಡಿಸಿದರೆ ಏನಾಗುವದು?

ವರುಣ:— ಅಥವಾ ನಡೆ. ನಿನ್ನ ಸುಡುಗಾಡ ಮುಸುಡವನ್ನು ತೋರಿಸಬೇಡ (ಮತ್ತೆ ಒದೆಯುವನು.) ಲಟಿಕೆಯಿಂದ ಓಡುವ ಸಂಕೇತ ಮಾಡುವನು. ಕಾವಲಿಗನು ಜಿಗಿಯುವನು. ಬಳಿಕ] ಮಹಾರಾಜ, ನಾನು ಆಗಲೇ ಹೇಳಿದಂತೆ, ಆ ಪುಲಿಕೇಶಿಯು ನಮ್ಮ ದೇವಿಯನ್ನು ಎತ್ತಿಕೊಂಡು ಹೋಗಿರಬಹುದು. ನಮ್ಮ ಜನರು ಮೇಣೆಯು ದಕ್ಷಿಣ ದಿಕ್ಕಿಗೆ ಸಾಗಿದ್ದನ್ನು ನೋಡಿದ್ದಾರೆ. ಮತ್ತು ಜನರನ್ನು ಗುರ್ತಿಸಿದ್ದಾರೆ. ಅವರ ಹೇಳಿಕೆಗೂ ಈ ಕಾವಲುಗಾರನ ಹೇಳಿಕೆಗೂ ಸರಿಗೂಡುತ್ತದೆ. ಚಾಲುಕ್ಯರೇ ಈ ನೀಚ ಕಾರ್ಯವನ್ನು ಮಾಡಿರಬಹುದು. ಸಂಶಯವೇ ಇಲ್ಲ.

ಪ್ರತಾಪರಾಯ:— ಪುಲಿಕೇಶಿಯು ಹೀಗೆ ವರ್ತಿಸಲಿಕ್ಕೆ ಕಾರಣವೇನು?

ವರುಣ:— ಕಾರಣವೇನು? ಹರ್ಷರಾಜನು ಪ್ರಬಲವಾದ ದಂಡಿನೊಡನೆ ಸಾಗಿ ಬಂದಿರಲು ಅವನೆದುರಿಗೆ ನಿಲ್ಲಲು ಆತನಿಗೆ ಧೈರ್ಯವಿಲ್ಲವೆಂಬಂತೆ ತೋರುತ್ತದೆ. ಇಲ್ಲವಾದರೆ ಇಷ್ಟರಲ್ಲಿ ನಮ್ಮ ಸಹಾಯಕ್ಕೆ ಬರುತ್ತಿದ್ದನು. ನಿಜವಾಗಿಯೂ ಆತನು ಹರ್ಷರಾಜನಿಗೆ ಅಂಜಿದ್ದಾನೆ. ತೀವ್ರವೇ ತನ್ನ ರಾಜಧಾನಿಗೆ ಓಡಿ ಹೋಗುವ ಹಂಚಿಕೆಯಲ್ಲಿರಬಹುದು. ಅದಕ್ಕಾಗಿ ಮೊದಲೇ ದುರಾಶೆಯಿಂದ ಈ ಕನ್ಯಾಮಣಿಯನ್ನು ಅಪಹರಿಸಿ ತಮ್ಮ ಕೀರ್ತಿಗೆ ಕುಂದು ಕೊಟ್ಟನು.

ಹಿಂದೆ ತಾವು ಆತನನ್ನು ಕರೆದು ಸನ್ಮಾನಿಸಿದರಷ್ಟೆ? ಆಗ ಮೋಹಿನೀ ದೇವಿಯುವರನ್ನು ನೋಡಿ ಆತನ ಬಾಯಲ್ಲಿ ನೀರಿಳಿದಿದ್ದವೆಂಬಂತೆ ಕಾಣುತ್ತದೆ.

ಪ್ರತಾಪರಾಯಃ— (ಉದಾಸೀನತೆಯಿಂದ) ಹಾಗೂ ಆಗಿರ ಬಹುದು.

ವರುಣಃ— ಸಂಶಯುವೇನು? ದೊರೆಯೇ ಹಾಗೇ ಆಗಿರುವದು.

ಪ್ರತಾಪಃ— ಅಂತೂ ನನ್ನ ಮನಸ್ಸು ಚಲವಿಚಲಿತವಾಯಿತು. ಯಾವದನ್ನು ಮಾಡಬೇಕೆಂಬುದು ತಿಳಿಯದಾಗಿದೆ.

ದೂತಃ— (ಪ್ರವೇಶಿಸಿ) ಮಹಾರಾಜ, ಚಾಲುಕ್ಯರ ಕಡೆಗೆ ಹೋದ ರಾಹುತರಿಬ್ಬರು ತಮ್ಮನ್ನು ಹುಡುಕಿಕೊಂಡು ಬರುತ್ತಲಿದ್ದಾರೆ.

ಪ್ರತಾಪಃ— ನಾನಿಲ್ಲಿರುವದನ್ನು ತಿಳಿಸಿ ಬರಹೇಳು.

ವರುಣಃ— ಪ್ರಭು, ಅನಾಯಾಸವಾಗಿ ಏನಿದ್ದುದು ತಿಳಿಯುವದು ನೋಡಿರಿ.

[ರಾಹುತರಿಬ್ಬರು ಬಂದು ನಮಸ್ಕರಿಸುವರು.]

ಪ್ರತಾಪಃ— ಚಾಲುಕ್ಯ ಮಹಾರಾಜನು ಏನಂದನು?

ರಾಹುತಃ— ಒಡೆಯರೆ, ತಾವು ಕೊಟ್ಟ ಪತ್ರಿಕೆಯನ್ನು ಆತನು ತಿರುಗಿ ನಮ್ಮ ಮೋರೆಯ ಮೇಲೆ ಒಗೆದನು.

ಪ್ರತಾಪಃ— (ಸಿಟ್ಟಿನಿಂದ) ಹಾಂ,

ರಾಹುತಃ— ಹೌದು ಮಹಾಪ್ರಭು. ನಿಜವಾಗಿಯೂ ತಿರುಗಿ ಒಗೆದನು. ಇದೋ ತಾವು ಕೊಟ್ಟ ಪತ್ರಿಕೆಯೇ ಇದು. (ಕೊಡುವನು.)

ವರುಣಃ— ಮುಂದೆ.

ರಾಹುತಃ--- ಇನ್ನು ಇವರ ಸಲುವಾಗಿ ನಾವು ಬಲಾಢ್ಯನಾದ ಹರ್ಷವರ್ಧನನೊಡನೆ ಯುದ್ಧ ಮಾಡೋಣವೇ? ಎಂದು ಧಿಕ್ಕರಿಸಿ 'ಸಾಕುಹೋಗಿರಿ' ಎಂದು ಅಪ್ಪಣೆಕೊಟ್ಟನು. ಕೂಡಲೆ ನಾವು ಹೊರಟೆವು.

ವರುಣಃ— ನೋಡಿರಿ ನನ್ನ ತರ್ಕವು ನಿಜವಾಯಿತಷ್ಟೇ?

ಪ್ರತಾಪಃ— ನಿಜ ನಿಜ. ಆತನನ್ನು ನಂಬಿದ್ದೇ ನಮ್ಮ ಮೂರ್ಖತನವು!!

ವರುಣಃ— ಅಲ್ಲದೆ ಮತ್ತೆ?

ರಾಹುತಃ— ಮಹಾರಾಜ ಕೇಳಿರಿ, ಮೋಹಿನೀ ದೇವಿಯವರು ಅದೃಶ್ಯವಾದದ್ದನ್ನು ಇಲ್ಲಿ ಬಂದ ಮೇಲೆ ಕೇಳಿ ನಮಗೆ ದುಃಖವಾಯಿತು. ಸಿನ್ನೆ ನಾವು ಭರದಿಂದ ಮಾರ್ಗಕ್ರಮಣ ಮಾಡುವಾಗ ೨೦ ಜನರು ಒಂದು ಮೇಣೆಯೊಡನೆ ಬೆಳದಿಂಗಳ ರಾತ್ರಿಯಲ್ಲಿ ನಮಗೆದುರಾದರು.

ವರುಣಃ— ಹೂಂ ಹೂಂ.

ರಾಹುತಃ— ನೀವಾರೆಂದು ನಾವು ಕೇಳಿದೊಡನೆಯೇ ಅವರಲ್ಲಿ ನಾಲ್ಕಾರು ಜನರು ನಮ್ಮೊಡನೆ ಹೊಡೆದಾಟಕ್ಕೆ ನಿಂತರು. ನಮ್ಮೊಳಗಿನ ಇಬ್ಬರು ಮೃತಪಟ್ಟರು. ನಾವು ಮಾತ್ರ............

ಪ್ರತಾಪಃ— ಸಾಕು ಸಾಕು! ತಿಳಿಯಿತು ಆತನ ನೀಚತನವು. ಎಲೋ ಪುಲಿಕೇಶಿ ಅಥವಾ ಇಂದು ನನ್ನ ಮಗಳನ್ನು ಪೈಶಾಚಿಕ ರೀತಿಯಿಂದ ಎತ್ತಿಕೊಂಡು ಹೋಗಿ ನನಗೆ ಅಪಮಾನವನ್ನುಂಟು ಮಾಡಿದೆಯಾ? ಆವುದೋ ಕಾರಣದಿಂದ ನಿನ್ನಿಂದ ಸೋತ ನಾನು ನಿನ್ನನ್ನು ದಕ್ಷಿಣಾಧೀಶ್ವರನೆಂದು ಗೌರವಿಸಿ, ಸಾರ್ವಭೌಮನೆಂದು ತಿಳಿದದ್ದಕ್ಕೆ ಇದೇ ಫಲವೇ? ಇನ್ನು ಇದರ ಸೇಡು ತೀರಿಸದೆ ಬಿಡುವೆನೇ?

[ವರುಣನೂ ರಾಹುತರೂ ಪರಸ್ಪರ ನೋಡಿ ನಸುನಗೆ ಕಣ್ಣುಸನ್ನೆ]

ವರುಣಃ— ಈ ಅಪಮಾನಾಗ್ನಿಯನ್ನು ಚಾಲುಕ್ಯರ ರಕ್ತದಿಂದಲೇ ಆರಿಸದೆ, ಮಾಳವದ ಸರದಾರರು ಅದೆಂತು ಶಾಂತರಾಗುವರು? [ಖಡ್ಗಹಿರಿಯುವರು. ರಾಹುತರ ನಸುನಗೆ]

ಪ್ರತಾಪಃ— ನೋಡುವಾ ಸರದಾರರೇ ನಿಮ್ಮ ಶೂರತನವನ್ನು! ಮೊದಲು ಹರ್ಷರಿಗೂ ನಮಗೂ ಒಡಂಬಡಿಕೆಯು. ಆಮೇಲೆ ಹರ್ಷರೊಡನೆ ಕೂಡಿ ಚಾಲುಕ್ಯರೊಡನೆ ಯುದ್ಧ!! ಬನ್ನಿರಿ ಬೇಗ ಮುಂದಿನ ಕಾರ್ಯ (ಹೋಗುವರು.)

ವರುಣಃ— (ಹಿಂದೆ ಹೋಗ ಹೋಗುತ್ತ) ಹೇಗೆ ನಾಟಿತು ನನ್ನ ಮಂತ್ರ? ಪುಲಿಕೇಶಿಯ ಹಾನಿಯಾದಷ್ಟಾಯಿತು; ಯಾರೇ ಗೆದಯಲಿ, ಯಾರೇ ಸೋಲಲಿ, ನನಗೇನು? ಮೋಹಿನಿಯಂತೂ ನನ್ನ ಬಲೆಯಲ್ಲಿ ಸಿಕ್ಕಳು. ಇನ್ನು ಬೇಗನೆ ಇಲ್ಲಿಂದ ಜಾರಿ ವಿಂಧ್ಯಾದ್ರಿಯ ಕಾಡೊಳಗಿನ ನನ್ನ ಗುಪ್ತ ಸ್ಥಳವನ್ನು ಸೇರಿ, ಅವಳನ್ನು ಒಲಿಸಿಕೊಂಡು ಸುಖಬಡೋಣ. ಮೋಹಿನಿಯು ತಾರೆಯನ್ನು ಬೈಯುತ್ತಿರಬಹುದು; ತಾರೆ ನನ್ನ ಮಾರ್ಗವನ್ನು ನೋಡುತ್ತಿರಬಹುದು. ಏನು ಗೋಳೋ ಏನು ಕತೆಯೋ? ಬೇಗ ಹೋಗುವಾ! (ಹೊರಟು ತಡೆದು) ಈ ಮುದಿರಾಜನ ದರ್ಶನವಾದರೂ ಏಕೆ ಇನ್ನು? ನಾವು ಇತ್ತೀ ಹೊರಟು ಪಾರಾದರಾಯಿತು. (ತಿರುಗಿ ಹೋಗುವನು.)

ಅಂಕ. ೨

೧ ನೇ ನೋಟ.

(ಅರಣ್ಯ ಮಾರ್ಗದಲ್ಲಿ ಚಾಲುಕ್ಯ ದೂತನು ಬರುತ್ತಿರುವನು.)

ದೂತಃ— ಬಹಳ ಎಚ್ಚರದಿಂದ ಮಾರ್ಗಕ್ರಮಣ ಮಾಡಬೇಕಾಗಿದೆ. ನನ್ನನ್ನು ಇತ್ತ ಹೋಗಗೊಡಬಾರದೆಂದು ವೈರಿಗಳು ಎಷ್ಟು ಸಾಹಸ ಮಾಡಿದರು? ಎಲ್ಲಿಯವರಿಗೆ ಬೆನ್ನಟ್ಟಿದರು ಅಬಬ! ನಾನು ಗುಡ್ಡಗುಡ್ಡಗಳನ್ನೆಲ್ಲ ಅಡ್ಡಾಡಿ ಅಡ್ಡದಾರಿಗಳನೆಷ್ಟೊ ದಾಟಿ, ಅವರ ಕಣ್ಣು ತಪ್ಪಿಸಿದೆನು. ಅಂತು ದೇವದುರ್ಗದ ಸೆರೆಯೊಳಗಿಂದ ಪಾರಾಗಿ ಬಂದದ್ದೆಂದರೆ ನಮ್ಮ ಮಹಾರಾಜರ ಪುಣ್ಯದಿಂದಲೇ ಸರಿ. ನಮ್ಮ ನಾಯಕನಾದ ಸಮರನಂದನನ ಚಾತುರ್ಯವು ಮೇಲಾದದ್ದು! ನಾವು ಮಾಡಿದ ಯುಕ್ತಿಗಳನ್ನು ನೆನಿಸಿದರೆ ಅವು ಕೊನೆಗಂಡದ್ದು ನಮ್ಮ ಪುಲಿಕೇಶಿ ಮಹಾರಾಜರ ಸತ್ವಭಾವದಿಂದಲೇ ಎಂದು ಹೇಳಬಹುದು. ಧನ್ಯ ಧನ್ಯ!! ನಮ್ಮ ಮಹಾರಾಜರ ಪುಣ್ಯವೇ ಅಂಥದಿದೆ. [ನೋಡಿ] ಓಹೋ ಇದೇನು ವಿಚಾರವನ್ನು ಮಾಡುತ್ತ ಮಾಡುತ್ತ ನಮ್ಮ ಮಹಾರಾಜರ ಸೈನ್ಯದ ಛಾವಣಿಯನ್ನೇ ಸಮೀಪಿಸಿದೆನು. ನಾನು ಹಾದಿಯನ್ನು ನಡೆದದ್ದು ನನಗೆ ಗೊತ್ತೇ ಇಲ್ಲ. (ನೋಡಿ) ನೋಡಿದೆಯಾ ಹೇಗೆ ಕಂಗೊಳಿಸುವದು ನಮ್ಮ ಅದ್ಭುತವಾದ ಸೇನಾತಾಣವು! ಸುತ್ತಲಿನ ಕಡೆಯ ಹತ್ತು ಡೇರೆಯ ಗುಂಪುಗಳು ಮಹಾರಥಿಗಳ ಸೈನ್ಯದವಾಗಿರುವವು. ಇವರ ಅಂಕಿತದಲ್ಲಿರುವದು ಹತ್ತು ಹತ್ತು ಹನ್ನೆರಡು ಹನ್ನೆರಡು ಸಾವಿರ ಸೈನ್ಯವು! ಆನೆ ಕುದುರೆ ರಥಗಳಿಗೂ ಲೆಕ್ಕವೇ ಇಲ್ಲ. ಅಹಹಾ! ಮಧ್ಯಭಾಗದಲ್ಲಿ ಗೋಪುರದಿಂದೊಡಗೂಡಿದ ಅರಮನೆಯಂತೊಪ್ಪುವ ನಮ್ಮ ಮಹಾರಾಜರ ಸ್ವಂತ ಡೇರೆಯೂ ಸಭಾಲಯಗಳೂ ಎಷ್ಟು ಭವ್ಯವಾಗಿರುವವಲ್ಲ! ಸೈ, ಸೈ,

ನಮ್ಮ ಸೈನ್ಯದ ಬಿಡಾರವು ಸುಂದರವಾದ ದೊಡ್ಡ ಪಟ್ಟಣದಂತೆ ಕಂಗೊಳಿಸುವದು. ನಮ್ಮ ಮಹಾರಾಜರ ವೈಭವವನ್ನು ವರ್ಣಿಸಲು ಯಾರಿಗೆ ಸಾಧ್ಯ! ಧನ್ಯ ಧನ್ಯ!

ಪದ, ರಾ. ತಾ, ಗಜಲ. (ಧಾಟಿ, ಪರವಶತಾ ಪಾಶದೈವೆ)

ನೃಪವರ ಚಾಲುಕ್ಯರಾಜಾ। ರಾಜಾಧಿಪಾ ಭೂನುತಾ ॥ಪ॥
ಮೆರವನಹಾ! ವಸುಧಾ ತಲದಿ। ಪರಮಧನ್ಯ ನೀತಾ॥೧॥
ಜಲನಿಧಿಯೊಂ ನೆರೆನೀರುವೊಲು। ಬೆಳೆದಕೀರ್ತಿವಂತಾ॥೨॥
ಹಗೆಗಳ ಹಾರವಭೂಷಿತನು। ಸುಜನತೋಷದಾತಾ॥೩॥

ಇನ್ನು ಬೇಗನೆ ಮಹಾರಾಜರನ್ನು ಕಾಣುವಾ.

೨ ನೇ ನೋಟ.

(ಛಾವಣಿಯ ಭಾಗದಲ್ಲಿ ಪತ್ರಹಿಡಿದ ಪುಲಿಕೇಶಿಯೂ ಸೇವಕನೂ ಬರುವರು)

ಪುಲಿಕೇಶಿಃ— ಅಂತು ಹರ್ಷ ರಾಜನು ಹೀಗೆ ಅಪಮಾನವನ್ನು ಮಾಡಿದನೊ?

ಪದ, ರಾ. ಮಾಲಕಂಸ. ತಾ. ಝಂಪಾ. (ಧಾ. ಪುರಾವೀಟ ಆಲಾನಧಾರಾ)

ಕನೋಜಾಧಿ ರಾಜಾ। ಮಹಾವೀರನೆಂತೊ। ಅಪಮಾನವಾ ಹಿಂದೆ। ಗೈಯ್ವಾ ಕುಮನುಜಾ॥ಪ॥

ರಣಶೌರ್ಯ ತೋರದೆ। ಹೀನತೆ ಯನೆಸಪುದೆ॥ ಬಲು ಹೇಡಿತಾ ಮರೆಗೆ ಕೊರಳ್ಗೊಯ್ವ ಮನುಜಾ॥

ದೂತಃ— ಮಹಾರಾಜ, ಇನ್ನೇನು ಹೇಳಲಿ! ಚಾಲುಕ್ಯಚಕ್ರವರ್ತಿಗಳ ಗೌರವಕ್ಕೆ ಕುಂದು ಬಂದುದನ್ನು ಹೇಳಲಿಕ್ಕೆಂದು ಬಂದ ನನ್ನ ಕೈಕಾಲುಗಳು ಅಲ್ಲಿಯೇ ಕಳಚಿ ಬೀಳಲಿಲ್ಲವೇಕೆ?

ಪುಲಿಃ— ಎಲೋ ನೀನೆಷ್ಟು ಕಳವಳಗೊಳ್ಳುವೆ? ಮುಂದಿನದನ್ನು ವಿಚಾರಿಸುವೆನಲ್ಲವೇ? ದೈವವೊಂದು ಅನುಕೂಲವಿದ್ದರಾಯಿತು.

ಯಿತು. ಅದಿರಲಿ, ನೀನು ದಾರಿಯ ದಣುವಿನಿಂದ ಬಳಲಿರುವೆ. ಹಸಿವೆಯೂ ಆಗಿರಬಹುದು. ಈಗ ಊಟಮಾಡಿ ಶಾಂತನಾಗಿ ತುಸು ವಿಶ್ರಮಿಸು.

ದೂತಃ— (ಸ್ವಗತ) ಅಹಹ! ನಮ್ಮಪ್ಪನದೆಂತಹ ಪ್ರಜಾವತ್ಸಲವು ನೋಡಿದೆಯಾ? ಸಂಕಟದಲ್ಲಿಯಾದರೂ ಈ ಮಹಾರಾಜನ ಉಲ್ಹಾಸವೃತ್ತಿಯೂ ದಯಾ ಮಮತೆಗಳೂ ಮರೆಯಾಗುವವೇ? ದೇವಾ, ಈ ಮಹಾರಾಜನ ಆಳಿಕೆಯು ನಮ್ಮ ಮೇಲೆ ಚಿರಕಾಲವಾಗಿರಲಿ.

ಪುಲಿಃ— ಯಾಕೆ ನಿನ್ನ ವಿಚಾರವು ಇನ್ನೂ ಬಿಡಲಾರದೇ?

ದೂತಃ— ಮಹಾರಾಜ, ಇದೋ ಹೊರಟೆನು. (ಹೋಗುವನು)

ಪುಲಿಃ— ಇಂತಹ ಸ್ವಾಮಿಹಿತಚಿಂತನೆಯ ಸೇವಕರ ಬಲದಿಂದಲ್ಲವೇ ನಾನೀ ರಾಜ್ಯವನ್ನಾಳುವದು? ಇಂಥ ಪ್ರಜಾಪರಿವಾರದಿಂದೊಡಗೂಡಿದ ನಾನು ಧನ್ಯನೇ? ಮಾತೆ, ಕರ್ನಾಟಕ ಭೂಮಾತೆ? ನನಗಾಗಿ ಇಂಥ ನಿಷ್ಕಲಂಕ ಚಿತ್ತವೃತ್ತಿಯ ಹಲವು ವೀರಪುತ್ರರನ್ನು ಹೆತ್ತ ನಿನ್ನ ಉದರವು ಪುಣ್ಯಮಯವಾದದ್ದು. ಮಾತೇ ನಿನ್ನೀ ಉಪಕಾರವನ್ನು ಹೇಗೆ ತೀರಿಸಲಿ ನಾನು? ನನ್ನ ಅಲ್ಪ ಸೇವೆಯು ನಿನಗೆ ತೃಪ್ತಿಯನ್ನು ಉಂಟುಮಾಡುವದೇ? ಅದನ್ನಾದರೂ ನನ್ನಲ್ಲಿರುವ ನಿನ್ನ ಪ್ರಭಾವಮಯವಾದ ಅಭಿಮಾನದಿಂದಲೇ ಮಾಡುವೆನು. ಆದ್ಯಾ ಪ್ರಸ್ತುತಕ್ಕೆ ನಿನ್ನ ಮಾನಕ್ಕೆ ಹಾನಿಯೊದಗುವ ಕಾಲವಿದೆ. ಇದರ ನಿವಾರಣೆ ಮಾಡುವ ಸಾಮರ್ಥ್ಯವನ್ನಾದರೂ ನೀನೇ ಕೊಡಬೇಕಲ್ಲವೇ? ದಯಪಾಲಿಸು ಅಂಥ ಬಲವನ್ನು ದಯಪಾಲಿಸು. (ನಮಿಸಿ, ತಡೆದು ಪತ್ರವನ್ನು ನೋಡಿ) ನೋಡುವಾ ಹರ್ಷವರ್ಧನನನ್ನು, ಲೋಕದಲ್ಲೆಲ್ಲ ತಾನೇ ಬಲ್ಲಿದನೆಂದು ಬಗೆದಿರುವನು. ಮದಾಂಧರು ತಮ್ಮ ನಡತೆಯ ಫಲವನ್ನು ಅನುಭೋಗಿಸಲೇಬೇಕು. ಚಾಲುಕ್ಯರ ಪ್ರತಾಪಕ್ಕೆ ಧರ್ಮಬಲವು ಜೋಡಾದರೆ ಹರ್ಷರಾಜನು

ಅರಗಳಿಗೆಯಲ್ಲಿ ಮಣ್ಣುಪಾಲಾಗನೇ? (ಸೇನಾಪತಿ ವೀರವರ್ಧನನು ಬರಲು) ಸೇನಾಪತಿಗಳೇ ಎಲ್ಲ ಸೇನಾಭಾಗಗಳ ನಾಯಕರನ್ನು ಕರೆಯು ಕಳುಹಿದಿರಾ?

ವೀರವರ್ಧನಃ— ಹೌದು ಮಹಾರಾಜರೇ.

ಪುಲಿಃ— ಏನೆಂದು ತಿಳಿಸಿದಿರವರಿಗೆ?

ವೀ. ವ.ಃ— ಹೀಗೆ ಬರೆದ ಪತ್ರಗಳನ್ನು ಕಳಿಸಿರುವೆನು (ಕೊಡುವನು)

ಪುಲಿಃ— (ನೋಡಿ) ಏನು? ಚಾಲುಕ್ಯಸಾಮ್ರಾಜ್ಯದ ಅಪಮಾನ' ಎಂಬದಿಷ್ಟೇ? (ತಡೆದು) ಚಾ-ಲು-ಕ್ಯ ಸಾಮ್ರಾಜ್ಯದ ಅ-ಪ-ಮಾನ' ಸರಿಸರಿ, ತಿಳಿಯಿತು ನಿಮ್ಮ ಬರಹದ ಹೊಲಬು. ಇದರಲ್ಲಿ ನೀವು ಆ ಸೇನಾಧಿಕಾರಿಗಳ ಮನೋ ನಿಶ್ಚಯವನ್ನು ಪರೀಕ್ಷಿಸಬೇಕೆಂದಿರುವಿರಿ. ತಿಳಿಯಿತು ನಿಮ್ಮ ಯುಕ್ತಿಯು ಚನ್ನಾಗಿದೆ.

ವೀ. ವ.ಃ— ಏನೋ ಅಲ್ಪ ಬುದ್ಧಿಗೆ ತಿಳಿದಂತೆ ಮಾ ....

ಪುಲಿಃ— ಆದೇಕೆ ಸೇನಾಪತಿಗಳೇ ನಿಮ್ಮ ಯುಕ್ತಾಯುಕ್ತ ವಿಚಾರವನ್ನು ನಾನು ಅರಿಯೆನೇ? ಚಾಲುಕ್ಯ ಸಾಮ್ರಾಜ್ಯಮಂದಿರಕ್ಕೆ ನಿಮ್ಮಂಥಹರೇ ಆಧಾರಸ್ತಂಭರೆಂದು ನನ್ನ ಮನವು ಸಾರಿ ಹೇಳುತ್ತಲಿದೆ. ಸಂಶಯವಿಲ್ಲ. ಇರಲಿ. ಮಿತ್ರ ಈಗ ಮಾತ್ರ ನಮಗೆ ಸರಿಯಾದ ಸಂಕಟವೊದಗಿದೆ ನೋಡು.

ವೀ. ವ.ಃ— ಆದರೇನು ಮಹಾರಾಜ, ಯುದ್ಧವು ನಿಶ್ಚಿತವೇ?

ಪುಲಿಃ— (ಗಾಂಭೀರ್ಯದಿಂದ) ಅದು ಹೇಗಾದೀತು?

ವೀ. ವ.ಃ— ಹೇಗೆ! ಪ್ರಭು ಅಪ್ಪಣೆಕೊಟ್ಟು ನೋಡಿರಿ. (ಖಡ್ಗವನ್ನು ಹಿರಿದು) ಆ ಹರ್ಷರಾಜನ ದರ್ಪವನ್ನು ಹೇಳಹೆಸರಿಲ್ಲದಂತೆ ಅಡಗಿಸಿ ಬಿಡುತ್ತೇನೆ. ಆತನು ಬಲು ಬಲ್ಲಿದನೆಂಬ ಗೊಳ್ಳು ಪ್ರಸಿದ್ಧಿಗೇನೇ ಅಂಜಿ ಆ ದುಷ್ಟನಾದ ಹರ್ಷವರ್ಧನನ ಸೊಕ್ಕಿನ ನಡತೆಯ ಸೇಡು ತೀರಿಸದೆ ಬಿಟ್ಟರೆ ಮುಂದೆ ನಮ್ಮನ್ನು ಮಾತಾಡಿಸುವವ

ರಾರು? ತಾಯ್ನಾಡಿನ ತೇಜವು ಅಡಗದಂತೆ ಕಾಯುವದು ನಮ್ಮ ಕೆಲಸವಲ್ಲವೇ?

ಪುಲಿಃ— ವೀರವರ್ಧನ, ನಿನ್ನ ಉತ್ಸಾಹವನ್ನು ಕಂಡು ಬಲು ಆನಂದವಾಗುವದು. ಆಗಲಿ. ವಿಚಾರಿಸೋಣ ನಡೆ. ಸಭಾಲಯಕ್ಕೆ ಸೇನಾನಾಯಕರು ಬರುತ್ತಿರಬಹುದು. (ಹೋಗುವರು.)

೩ನೇ ನೋಟ

[ಛಾವಣಿಯ ಮುಂಭಾಗದಲ್ಲಿ ಹರ್ಷರ ಗುಪ್ತಚಾರನು ಭಿಕ್ಷುಕನ ವೇಷದಿಂದ ಬರುವನು.]

ಗುಪ್ತಚಾರಃ— (ಪದ)

ಭಿಕ್ಷೆಯ ಬೇಡುತ ಮನೆಯಿಂ ಮನೆಗೆ। ತಿರುಗುತಲಿರುವೆವು ಸಂಜೆಯವರೆಗೆ
ಕುಡಿಯಲು ಹರಿಯುವ ನೀರೊಂದಿರಲಿ। ನೆರಳಿನ ಮರವೇ ಮನೆಯಾಗಿರಲಿ॥
ಅನ್ನವನಿತ್ತರು ಪಾಯಸವಿತ್ತರು। ರಾಗಿಯ ಅಂಬಲಿ ಗಂಜಿಯ ಕೊಟ್ಟರು॥
ಎಲ್ಲವ ಕೂಡಿಸಿ ಬಾಯೊಳಗಿಡುವೆವು। ಸಾಂಬಶಿವಾಹರ ಸಾಂಬಶಿವೇಶಾ॥

ಗುಪ್ತಃ— ನಿನ್ನೆ ಮೊನ್ನಿನ ವೇಷಗಳಲ್ಲೆಲ್ಲ ಯಶಸ್ಸು ದೊರಕಿತು. ಇಂದೇನಾಗುವದೋ ನೋಡುವಾ! ನಿಜವಾಗಿಯೂ ನಾನು ಭಿಕ್ಷುಕನಂತೆ ಕಾಣುವೆನು. ವೇಷವು ಚನ್ನಾಗಿ ಸಾಧಿಸಿದೆ. ಪರಿಪುಷ್ಟವಾದ ನನ್ನ ದೇಹವು ಮಾತ್ರ ಸ್ವಲ್ಪ ಸಂಶಯವನ್ನುಂಟುಮಾಡುವಂತಿದೆ. (ಸಂಕೋಚ) ಚನ್ನಾಗಿ ಮುಚ್ಚಿದರಾಯಿತು. (ಸಾವರಿಸಿ ನೋಡಿ) ಅದೋ ರಾಹುತರು ಬರಹತ್ತಿದರು. ಇಲ್ಲಿ ನೆರಳಿಗೆ ಬಿದ್ದು ನಿದ್ರೆಯನ್ನು ನಟಿಸುತ್ತ ಏನೇನು ನಡೆಯುವದೋ ತಿಳಿದುಕೊಳ್ಳುವಾ (ಮಲಗುವನು)

ರಣರಂಗಃ—(ಬಂದು ಕಾಗದ ನೋಡಿ) ಚಾಲುಕ್ಯ ಸಾಮ್ರಾಜ್ಯದ ಅಪಮಾನವೇ? ಅದಾವ ಖೂಳನು ಇಂಥ ಸಾಹಸಕ್ಕೆ ಕೈ ಹಾಕಿದವನು? ಚಾಲುಕ್ಯ ಚಕ್ರವರ್ತಿಯು ಕೀರ್ತಿಯು ನಿರಾತಂಕ ವಾಗಿದ್ದರೂ, ಚಾಲುಕ್ಯ ಸೈನ್ಯವು ಸನ್ನದ್ಧವಾಗಿದ್ದರೂ ಚಾಲುಕ್ಯ ಸಾಮ್ರಾಜ್ಯದ ಅಪಮಾನವೇ? ನಾನು, ನಾನು, ಜೀವಿಸಿರುವಾಗ ಚಾಲುಕ್ಯ ಸಾಮ್ರಾಜ್ಯದ ಅಪಮಾನವೇ? ನನ್ನ ಮಾತೃಭೂಮಿಗೆ ಕುಂದೇ? ಆಗದು. ನನ್ನ ಜೀವವು ಖಡ್ಗದ ಮೇಲಿರುವಾಗಲೂ ತಾಯ್ನಾಡಿನ ಸೇವೆಯೇ ನನ್ನ ಧ್ಯೇಯವು. ನೋಡುವಾ ಮಹಾರಾಜರ ಅಪ್ಪಣೆಯೇನಿದೆ? (ಜಿಗಿಯುವನು.)

ಗುಪ್ತಚಾರಃ—(ಏಳುತ್ತ) ಅಬಬ, [ಬಲರಾಯನನ್ನು ಕಾಣಿಸಿಕೊಳ್ಳಲು ಮತ್ತೆ ಗುರಕಿ]

ಬಲರಾಯಃ—[ಬಂದು] ಮಲಗಿದ ಕೇಸರಿಯು ಕೆಣಕಿ ಬದುಕುವವನುಂಟೆ? ಮೃತ್ಯುವಿನ ಮುಖದಲ್ಲಿ ಧುಮ್ಮಿಕ್ಕಿ ಬಾಳ್ವೆನೆಂಬವನು ಮೂರ್ಖನಲ್ಲವೆ? ಹಗೆಗಳಂತಕನಾದ ನಾನು ಪ್ರತ್ಯಕ್ಷವಾಗಿರಲು ಚಾಲುಕ್ಯ ಸಾಮ್ರಾಜ್ಯಕ್ಕೆ ಕುಂದೆ? ಎಲ್ಲಿ ಮಹಾರಾಜರು? [ಜಿಗಿಯುವನು.]

ರಣಮಲ್ಲಃ—[ಬಂದು] ಯುದ್ಧವನ್ನು ಮಾಡ ಮಾಡುತ್ತಲೇ ನನ್ನ ಮೀಸೆಗಳು ಬೆಳ್ಳಗಾದರೂ ಒಬ್ಬನಾದರೂ ನನಗೆದುರಾಗಿ ಬಾಳಲಿಲ್ಲ. ಹೀಗಿದ್ದರೂ ಚಾಲುಕ್ಯ ಚಕ್ರವರ್ತಿಯನ್ನು ಕೆಣಕುವ ಮದಾಂಧನುಂಟೆ? ಆ ಖೂಳನು ಯಮಪುರದ ಮಾರ್ಗವನ್ನು ನೋಡುತ್ತಿರುವನೇನು. ಅಥವಾ ಚಾಲುಕ್ಯರ ವೈರಿಗಳಿಗೆಲ್ಲ ನಾನೇ ಕೃತಾಂತನಾಗಿರಲು ಈತನಿಗೆ ಬೇರೆ ಯಮ ಪುರದ ನಿರೀಕ್ಷಣೆಯೇಕೆ?

ಪದ. ರಾ। ತಾ। ತ್ರಿವಟ (ದಾಟಿ. ರಣಗಗನ ಸದನಸಮು)

ಕಳುನೆಲದ ಘನತೆಯನು ಹಳಿವಾ, ದುರುಳರಿಗೇ। ಶಿರತರಿಯುವ ಯಮನಿರುವೆನು ಪೆರತಿಹ ಯಮನಿರುವನೆ ನೆರೆಕೊಲುವಾ ॥ಪ॥

ದೇವವಿಸುತ ಘನತೆಯುಲಿ ಕರುನೆಲ। ಸೊಬಗಿನಸದನಾ ನೆಲುವಿನನಾಡ॥ ಬಲುವೆುರೆವುದಲಾ। ಕರುನೆಲದ ಘನತೆಯುನು ಹಳಿವಾ

ಆ ಮೂಢನು ಭೂಗರ್ಭವನು ಸೇರಿದರೂ ಬಿಡದೆ ಆತನ ನಾಶವನ್ನು ಮಾಡದೆ ಹೋದರೆ ನನ್ನ ಹೆಸರು ರಣಮಲ್ಲನೇ? ಕಾಣುವಾ ಮಹಾರಾಜರನ್ನು! (ಹೋಗುವನು)

(ಗುಪ್ತ ಚಾರನು ಮುಖವೆತ್ತಿ ನೋಡುತ್ತಿರಲು ಸೇನಾಪತಿಯು ದೂತ ನೊಡನೆ ಬರುವನು; ಅದನ್ನು ಕಂಡು ಕೂಡಲೆ ಮಲಗಿ ಗುರಕೀ ಹಾಕು ವನು. ಆದರೆ ಸೇನಾಪತಿಯು ಇದನ್ನು ನೋಡಿರುವನು)

ವೀ. ವ:-- ಎಲಾ ಇದೇನು? ಏಳತೊಡಗಿದ ಇವನು ನನ್ನನ್ನು ನೋಡಿ ಪುನಃ ಮಲಗಿದನು. ಇವನೇನು ನಿಜವಾಗಿಯೂ ಭಿಕ್ಷುಕ ನೋ ಅಥವಾ ಹರ್ಷರ ಗುಪ್ತಚಾರರೇನಾದರೂ ಹೀಗೆ ವೇಷಾಂ ತರದಿಂದಿರುವರೊ? (ಸಮೀಪಕ್ಕೆಹೋಗಿ) ಅಲಲಾ! ಇಷ್ಟರಲ್ಲಿ ಯೇ ನಿದ್ರೆ ಹತ್ತಿದವನಂತೆ ಗುರುಗುಡುವನು ನೋಡಿದಿಯಾ?

ದೂತ:-- (ಕೇಳಿ) ಹೌದು ನೋಡಿರಿ ಬುದ್ಧೀ, ಈತನ ನಿದ್ದೆಯ ಸದ್ದು ಕೆರಳಿದ ನಾಯಿಯ ಗುರುಕೆಯಂತೆಯೇ ಕೇಳುವದು.

ವೀ. ವ:--ಇವನೇನೋ ತನ್ನನ್ನು ಯಾರೂ ನೋಡಿಲ್ಲವೆಂಬಂತೆ ತಿಳಿದುಕೊಂಡಿದ್ದಾನೆ.

ದೂತ:-- ಏ ತಿರುಕಾ, ಎಲೆ ತಿರುಕರವನೇ (ಉರುಳಾಡಿ ಸುವನು. ಏಳದಿರಲು ಇಬ್ಬರೂ ಕಿವಿಗಳನ್ನು ಹಿಡಿದು ಎತ್ತಿ ನಿಲ್ಲಿಸುವರು)

ವೀ. ವ:-- ಅಲಲಾ! ತಿರುಕನೇ ಇವನು? ಇವನ ಪುಷ್ಟ ವಾದ ದೇಹವನ್ನೂ ತಿರುಗಿದ ಮುಂಡೆಗಳನ್ನೂ ನೋಡಬಾರದೇ? ನಿಜ ವಾಗಿಯೂ ಈತನು ಯೋಧನು. ಹರ್ಷರ ಗುಪ್ತ ಚಾರನಾಗಿಯೇ ಬಂದಿದ್ದಾನೆ.

ದೂತ:-- ಹೌದೇನಯ್ಯಾ? ನೀನಾರು ಹೇಳು ಸುಮ್ಮನೆ?

ಗು. ಚಾರಃ- (ಮಾತು ಬರುವದಿಲ್ಲೆಂಬ ಸಂಕೇತ ಮಾಡುವನು)

ವೀ. ಮಃ— ಭಲೆ, ಇದೊಂದು ವೇಷದ ವಿಶಿಷ್ಟತನವು. ಹೀಗೆಯೇ ಮಾತಾಡುವನೇನು? ನೀನು ಇವನನ್ನು ನೋಡಿಕೊಂಡಿರು. ನಾನು ಮತ್ತೆ ನಾಲ್ವರನ್ನು ಕಳಿಸುತ್ತೇನೆ. ಬಳಿಕ ಹೆಡಮುರಿಗೆ ಬಿಗಿದು ಮಹಾರಾಜರೆದುರಿಗೆ ತನ್ನಿರಿ. ಅಂದರೆ ತಾನೇ ಹೇಳುವನು ಎಲ್ಲವನ್ನು! (ಹೋಗುವನು. ಗುಪ್ತಚಾರನು ನಿಗ್ಗರದ ನೋಟದಿಂದ ನೋಡಿ ತಿರುಗಿ)

ಗುಪ್ತಚಾರ:— ಏನಯ್ಯಾ.

ದೂತಃ— ಏನಯ್ಯಾ! ಮಾತು ಬಂದುವೇ ಈಗ?

ಗುಪ್ತಚಾರಃ— ಬಾರದೇನು? ನೀನು ಕಾವಲಿಗನೋ? [ಅತ್ತಿತ್ತ ನೋಡುವನು.]

ದೂತಃ— ಹೌದು; ದಾಟಿ ಹೋಗಬೇಕೆನ್ನುವೆಯೇನು?

ಗುಪ್ತಚಾರಃ— ದಾಟಿ ಹೋಗದಿದ್ದರೂ ಪಾರಾಗಿ ಹೋಗಬಹುದು. ಒಳ್ಳೇದು ನನ್ನನ್ನು ಏಕೆ ಕಾಯ್ದುಕೊಂಡಿರುವೆ?

ದೂತಃ — ಇದೀಗ ಕೇಳಲಿಲ್ಲವೇನು? ಮಹಾರಾಜರ ಕಡೆಗೆ ಒಯ್ಯಲಿಕ್ಕೆ! ಬಾಯಿಯೊಡನೆ ಕಿವಿ ಕೂಡ ಹೋಗಿದ್ದವೇನು?

ಗುಪ್ತಚಾರಃ— ನಿಜ. ಆದಕ್ಕಿಂತೇ ಆ ಜನರು ಇತ್ತ ಬರುತ್ತಿರುವರೇನು?

ದೂತಃ— ಬಂದರೇನು? [ನೋಡುವನು.]

ಗುಪ್ತಚಾರಃ— ನೋಡತ್ತ. ಅವರೇ ಅಲ್ಲವೇ ಒಬ್ಬನ ಕೈಯಲ್ಲಿ ಹಗ್ಗವಿದೆ.

ದೂ.ಃ— [ಹುಬ್ಬುಗೈಯಿಕ್ಕಿ ನೋಡಹತ್ತುವನು. ಇತ್ತ ಈತನು ಜಿಗಿಯುವನು. ಬಳಿಕ ತಿರುಗಿನೋಡಿ] ಎಲಎಲಾ, ನೀಚ ಓಡಿದೆಯಾ! ಕುಳಿ ಕುಳಿ.

[ಓಡಿಹೋಗುವನು. ಕೊಂಬು ಊದುವರು. ಗೊಂದಲದ ಸದ್ದು ನಾಲ್ವರು ಹಿಡಿದು ನೂಕುತ್ತ ತಂದು ಹಾಯ್ದುಹೋಗುವರು. ಗುಪ್ತ ಚಾರನು ಜುಲುಮೆಯಿಂದ ಕೆಡಕನ್ನು ವ್ಯಕ್ತಮಾಡುತ್ತ ಹೋಗುವನು.]

೪ನೇ ನೋಟ.

[ಸಭಾಲಯದಲ್ಲಿ ಪುಲಿಕೇಶಿಯೂ ವೀರವರ್ಧನನೂ ಆಸನದಲ್ಲಿ ಕುಳಿತಿರುವರು.]

ವೀರವರ್ಧನಃ— ಹರ್ಷವರ್ಧನನು ಪ್ರಬಲಪ್ರತಾಪದ ಚಾಲುಕ್ಯರನ್ನು ಇಂತು ತಿರಸ್ಕರಿಸಿದನೇ?

ಪುಲಿಃ— ತಿರಸ್ಕರಿಸಲಿ, ವೈರಿಗಳಿಗೆ ಮೀರಿದ ವೀರ್ಯಸಂಪತ್ತುಳ್ಳ ಪುರುಷನಿಗೆ ವೈರಿಗಳಿಂದ ಬಂದ ತಿರಸ್ಕಾರವು ಪುರಸ್ಕಾರವೇ ಆಗುವದು. ಇದರಿಂದ ನಾವು ವಿಷಣ್ಣರಾಗುವದೇಕೆ?

ವೀ. ವ.ಃ— ಅದು ನಿಜವೇ. ಈ ಪುರಸ್ಕಾರದ ಫಲವನ್ನು ಆ ವೈರಿಯು ಭೋಗಿಸಲೇಬೇಕಲ್ಲವೆ?

ಪುಲಿ.ಃ— ಫಲಗಳು ದೈವಾಧೀನವಾದವುಗಳು.

ಪದ. ರಾ. ದೇಶ, ತಾ. ತ್ರಿವಟ [ಧಾಟಿ—ಸಂಶ್ರಯುವೇ ಸುಖವೇ]

ಕೈವಶವೇ ನಮಗೇ ಫಲಾಫಲ। ದೊರೆವುದು ದೈವದಲೇ ದಳಪತಿ॥ ಪ॥
ದೇಶದ ಪ್ರೇಮವ। ತಾಳುತೆ ಭುವದಿ। ಓಸರಿಸದೆ ಯುಭಿಮಾನಾ॥
ಲೋಕವು ಪೊಗಳಲು। ರಣದಲಿ ಶೌರ್ಯದಿ। ಕಾದುವದೇ ಸ್ವಾಧೀನಾ॥
ದಳಪತಿ॥

ಎಲ್ಲ ಸೇ. ನಾಯಕರುಃ—(ರಣರಂಗ ಬಲರಾಯ ರಣಮಲ್ಲ ಹಿರಿದ ಖಡ್ಗದೊಡನೆ ಬಂದು) ಪ್ರಭುವರ, ಸಾಮ್ರಾಜ್ಯದ ಕೀರ್ತಿಗೆ ಕಲಂಕವನ್ನುಂಟು ಮಾಡುವ ಅಧಮನು ಯಾವನು? ನಮ್ಮ ದೇಹದಲ್ಲಿ

ಜೀವವಿರುವ ವರೆಗೆ ಇಂಥ ಕರ್ಣಕಠೋರವಾದ ಸಂಗತಿಯನ್ನು ಕೇಳಿ ಸಹಿಸೆವು. ಏನಿದ್ದುದನ್ನು ಹೇಳಿರಿ ಮೊದಲು. [ಖಡ್ಗ ಝಳಪಿಸುವರು.]

ಪುಲಿ.:-- ವೀರರೇ ಶಾಂತರಾಗಿರಿ. ಉತ್ಸಾಹವು ಕ್ಷಾತ್ರಬಲದ ತವರ್ಮನೆ; ನಿಮ್ಮ ಉತ್ಸಾಹದ ವರ್ತನವು ಈಗಿನ ವೇಳೆಯಲ್ಲಿ ಶುಭಲಕ್ಷಣವೇ ಸರಿ. ಈಗ ಸಾಮ್ರಾಜ್ಯಕ್ಕೊದಗಿದ ಗಂಡಾಂತರವನ್ನು ನಿಮ್ಮ ಮುಂದಿಡುವೆನು. ಆಮೇಲೆ ಮಾಡಬೇಕಾದುದನ್ನು ನಾವೆಲ್ಲರೂ ನಿಶ್ಚಯಿಸೋಣ. ಕೇಳಿರಿ; ದೇವದುರ್ಗದಲ್ಲಿದ್ದ ಸಮರನಂದನು ಕಳಿಸಿದ ಪತ್ರಿಕೆಯನ್ನು ಸೇನಾಪತಿಗಳು ಓದುವರು ಕೇಳಿರಿ.

[ಎಲ್ಲರೂ ನಮಸ್ಕರಿಸಿ ಖಡ್ಗಗಳನ್ನು ಒರೆಗಾಣಿಸಿ ಕೂತುಕೊಳ್ಳುವರು.]

ವೀ. ವ.:-- [ಪತ್ರ ಓದುವನು] "ಶ್ರೀ ಮದ್ರಾಜಾಧಿರಾಜ, ಚಾಲುಕ್ಯ ಮಹಾರಾಜರ ಚರಣ ಸನ್ನಿಧಿಯಲ್ಲಿ:-- ಸೇವಕನ ವಂದನೆಗಳು. ಮಹಾರಾಜರೆ, ಸಾಮ್ರಾಜ್ಯದ ಕೀರ್ತಿಗೆ ಕಲಂಕವನ್ನು ತಗಲಿಸುವ ಸಂಗತಿಯನ್ನು ತಮ್ಮ ಸನ್ನಿಧಿಯಲ್ಲಿ ತಿಳಿಸುವ ಹೊತ್ತು ಬಂದುದಕ್ಕಾಗಿ ಅತ್ಯಂತ ದುಃಖವಾಗುವದು. ನಾಚಿಕೆಯಿಲ್ಲದೆ ಇಂಥ ಅವನತ ಸ್ಥಿತಿಯನ್ನು ತಮ್ಮಲ್ಲಿ ಹೇಳುವ ನನ್ನನ್ನು ಪ್ರಭುಗಳು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇನೆ. ಪ್ರಭುಗಳೆ, ಉತ್ತರ ಹಿಂದುಸ್ತಾನದ ಮೇಲಿನ ತಮ್ಮ ಅಭಿಗಮನದಿಂದ ಹರ್ಷವರ್ಧನನು ರೊಚ್ಚಿಗೆದ್ದು ದಕ್ಷಿಣವನ್ನೇ ಗೆದೆಯುತ್ತೇನೆಂದು ಆರ್ಭಟಿಸುತ್ತ ಎರಡು ಲಕ್ಷಕ್ಕಿಂತ ಹೆಚ್ಚು ಸೈನ್ಯದೊಡನೆ ಹೊರಟು ಬಂದಿರುವನು.

ಎಲ್ಲರುಃ-- ಬರಲಿ! ಅವನಿಗೂ ಒಂದು ಸಲ ನಮ್ಮ ಅನುಭವವಾಗಲಿ!

[ಪ] "ಆದರೆ ಆತನು ಎಂಥ ಬಲಾಢ್ಯನಾದರೂ, ಮಹಾರಾಜರ ಅತುಲಪ್ರತಾಪದ ಮುಂದೆ ಆತನ ಆಟವು ನಡೆಯದೆಂಬದನ್ನು

ಬಲ್ಲೆನು. ಪೇವದುರ್ಗವು ಮಾತ್ರ ಆತನ ವಶವಾಯಿತು. ಸದ್ಯಕ್ಕೆ ಆತನು ದುರ್ಗದಲ್ಲಿಯೂ ಸುತ್ತಲೂ ಬೀಡು ಬಿಟ್ಟಿರುವನು.

ಎಲ್ಲರುಃ— [ಆತುರದಿಂದ] ಅದು ಹೇಗೆ? ಚಾಲುಕ್ಯ ಸೈನಿಕರ ಗತಿಯೇನು?

ಪುಲಿಃ— ಆದನ್ನೂ ಕೇಳಿರಿ ಮುಂದೆ.

[ಪ] ಹರ್ಷರು ದುರ್ಗಕ್ಕೆ ಮುತ್ತಿಗೆಯನ್ನು ಹಾಕಿ ಬಾಗಿಲವನ್ನು ಮುರಿದು ಒಳಗೆ ಪ್ರವೇಶ ಮಾಡತೊಡಗಿದರು. ಆದರೆ ತಮ್ಮ ಪಾದ ಸೇವಕರಾದ ನನ್ನ ಐನೂರು ಜನರು ತಮ್ಮ ಪ್ರಾಣಾಂತ್ಯದ ವರೆಗೆ ಹರ್ಷರಿಗೆ ಮುಂದೆ ಹೆಜ್ಜೆಯನ್ನೇ ಇಡಗೊಡಲಿಲ್ಲ. ಕನ್ನಡ ವೀರರ ಕಲಿತನವನ್ನು ನೋಡಿ ಹರ್ಷರು ಬೊಟ್ಟು ಕಚ್ಚಿದರು. ತಮ್ಮ ಚರಣ ಪ್ರತಾಪವನ್ನು ಚನ್ನಾಗಿ ಹೊಗಳಿದರು.

ಎಲ್ಲರುಃ— ವಾಹವ್ವಾ ವಾಹವ್ವಾ!

(ಪ) "ಆದಕ್ಕಾಗಿ ನನಗೆ ಒಳ್ಳೇ ಅಭಿಮಾನವೆನಿಸುವದು. ಆದರೆ ಹರ್ಷರ ಮಹಾಸೇನಾಸಾಗರವು ಬೇರೆ ಬೇರೆ ಕಡೆಯಿಂದ ಪ್ರವೇಶಿಸಲು ನಾವೆಷ್ಟು ಹೊತ್ತಿನ ವರೆಗೆ ಈಡಾಗಬಲ್ಲೆವು. ಆದಾಗ್ಯೂ ನನ್ನ ಅಭಿಮಾನಿಗಳಾದ ಶೂರ ಸೈನಿಕರು ಹಿಂಜರಿಯದೆ ಯುದ್ಧ ಮಾಡಿ ಧಾರಾತೀರ್ಥದಲ್ಲಿ ದೇಹವಿಟ್ಟರು. ಕೊನೆಗೆ ಹರ್ಷರು ಹತ್ತು ಜನರೊಡನೆ ನನ್ನನ್ನು ಸೆರೆ ಹಿಡಿದರು. ಬಳಿಕ ನಮ್ಮನ್ನು ಉತ್ತರದ ಕೊತ್ತಳದ ಮೇಲೆ ತೆಗೆದುಕೊಂಡು ಹೋದರು. ಅಲ್ಲಿ ಕರ್ನಾಟಕ ವಿಜಯ ಪತಾಕಿಯು ಚಾಲುಕ್ಯರ ವರಾಹಧ್ವಜದೊಡನೆ ಗಾಳಿಗೆ ಧಡಪಡಿಸುತ್ತಿತ್ತು. ಸದ್ಯಕ್ಕೆ ಅವಕ್ಕೊದಗಿದ ಅವನತ ಸ್ಥಿತಿಯನ್ನು ನೋಡಿ ನಮ್ಮ ಅಂತಃಕರಣಗಳು ತುಂಬಿಬಂದವು. ಮಹಾರಾಜ, ಮುಂದಿನ ದುಃಸ್ಥಿತಿಯನ್ನು ಹೇಳುವದೆಂದರೆ ನನ್ನ ಹೃದಯವು ಬಿರಿಯುವದು. ಮಸ್ತಕದ ಮೇಲೆ ವಜ್ರಾಘಾತವಾದಂತಾಗುವದು. ಹರ್ಷವರ್ಧನನು ನೀಚತನದಿಂದ ಚಾಲುಕ್ಯರಿಗೆ ಮಾಡಿದ ಅಪಮಾನವು

ಸಹಿಸಲಶಕ್ಯವಾದದ್ದು. ಆತನು ಸಾಲಾಗಿ ನಿಲ್ಲಿಸಲ್ಪಟ್ಟ ನಮ್ಮೆದುರಿನಲ್ಲಿ ಕರ್ನಾಟಕ ವಿಜಯಧ್ವಜವನ್ನು ಕಾಲಿನಿಂದೊದೆದು ಕಿತ್ತೊಗೆದನು.

ಎಲ್ಲರುಃ— ಸೇಡು ಸೇಡು (ಖಡ್ಗಹಿರಿದು ಆವೇಶದಿಂದ ಮುಂದುವರಿಯುವರು.)

ಪುಲಿಃ— ವೀರರೇ ಶಾಂತರಾಗಿರಿ. ಪೂರ್ಣವಾಗಿ ಕೇಳಿ ವಿವೇಕದಿಂದ ಕಾರ್ಯಾರಂಭವನ್ನು ಮಾಡಿರಿ. (ಸಿಟ್ಟನ್ನು ಆವರಿಸಿ ಎಲ್ಲರೂ ಮೆಲ್ಲಗೆ ಕೂಡುವರು.)

(ಪ) "ಹರ್ಷಸೇನಾಪತಿಯು ಗಹಗಹಿಸಿ ನಗುತ್ತ ಅದನ್ನು ಎತ್ತಿ ಕಂದಕದಲ್ಲಿ ಚಲ್ಲಿಕೊಟ್ಟನು. ಹಾಯ್! ಹಾಯ್! ವಿಜಯಪತಾಕೆಯು ಅಲೆಯುತ್ತಲೆಯುತ್ತ ಕೆಳಕ್ಕಿಳಿಯುವದನ್ನು ಕಂಡು ನಮ್ಮೆದೆಯು ಸೀಳಿತು; ದುಃಖದಿಂದ ಗೋಳಿಟ್ಟೆವು. ಆದರೆ ಏನು ಫಲ? ಕರ್ನಾಟಕ ವಿಜಯಧ್ವಜದ ಅವನತಿಯನ್ನು ಮಾತೃಭೂಮಿಯ ಅಪಮಾನವನ್ನು, ಚಾಲುಕ್ಯಸಾಮ್ರಾಜ್ಯದ ಅಕಲಂಕ ಕೀರ್ತಿಗೆ ಕುಂದೊದಗಿದುದನ್ನು ಕಣ್ಮುಟ್ಟಿ ನೋಡಿಯೂ ಜೀವಿಸಿರುವ ನಮ್ಮ ಜೀವಕ್ಕೆ ಧಿಕ್ಕಾರವಿರಲಿ. ಮಹಾರಾಜ, ಮಾತೃಭೂಮಿಯು ಈ ಅಪಮಾನದ ದುಃಖವನ್ನು ಸಹಿಸದೆ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ಒಮ್ಮೆ ಯೋಚಿಸಿದೆನು. ಮತ್ತೆ ಇದು ಕೇವಲ ರಾಜದ್ರೋಹವೆಂದೂ, ಮಾತೃಭೂಮಿಯ ಅವನತಿಯನ್ನು ನೋಡಿ ಆತ್ಮಹತ್ಯ ಮಾಡಿಕೊಳ್ಳುವವಕ್ಕಿಂತ ಅದರ ಉದ್ಧಾರಕ್ಕಾಗಿ ಹೆಣಗಿ ಹೊತ್ತು ಬಂದರೆ ಅದಕ್ಕಾಗಿಯೇ ದೇಹಬಿಡುವದು ಯೋಗ್ಯವೆಂದೂ ಆ ವಿಚಾರವನ್ನು ಬಿಟ್ಟುಬಿಟ್ಟೆನು.

ಎಲ್ಲರುಃ— ಯೋಗ್ಯವು, ಇದೇ ಯೋಗ್ಯವಾದ ಮಾರ್ಗವು.

(ಪ) "ಪ್ರಭುಗಳೇ, ನಮ್ಮನ್ನು ಸೆರೆಯಲ್ಲಿಟ್ಟು ಭದ್ರವಾದ ಕಾವಲಿಟ್ಟಿರುವರು. ಆದಗೂ ಆ ಕಾವಲಿಗರ ಕಣ್ಣಿಗೆ ಅಂಜನವನ್ನು ಹಾಕಿ,

ಈ ಯೋಧನನ್ನು ಪಾರುಮಾಡಿ ಕಳುಹಿದ್ದೇನೆ. ಈ ಅಪಮಾನದ ಸೇಡು ತೀರಿಸಲಿಕ್ಕೆ ಕರ್ನಾಟಕ ವಿಜಯಧ್ವಜವನ್ನು ಮೆರೆಯಿಸಲಿಕ್ಕೆ ಸಾಮ್ರಾಜ್ಯದ ಕೀರ್ತಿಯನ್ನು ಭರತಖಂಡದಲ್ಲೆಲ್ಲ ಪ್ರಸ್ಥಾಪಿಸಲಿಕ್ಕೆ ಪ್ರಭುಗಳು ಯೋಗ್ಯ ಕಂಡ ಮಾರ್ಗಗಳನ್ನು ಅನುಸರಿಸಲಿಕ್ಕೆಬೇಕು.

ಎಲ್ಲರೂ:— ನಿಶ್ಚಯವಾಗಿ ಅನುಸರಿಸಲಿಕ್ಕೇಬೇಕು.

(ಪ) "ಸಾಮ್ರಾಜ್ಯದ ಮಾನರಕ್ಷಣೆಗಾಗಿ ಜೀವದ ಮೇಲಿನ ಆಶೆಯನ್ನು ತೊರೆದು ತಮ್ಮ ಅಪ್ಪಣೆಯಂತೆ ನಡೆಯಲು ಸಿದ್ಧರಿರುವೆವು. ಹರ್ಷವರ್ಧನನು ಅಸಂಖ್ಯ ಸೈನ್ಯದೊಡನೆ ಬಂದಿದ್ದರೂ ಇನ್ನೂ ಸಿದ್ಧತೆಯಲ್ಲಿಯೇ ಇರುವನು. ಅವನು ಸ್ವಲ್ಪ ದಿವಸಗಳಲ್ಲಿ ದಕ್ಷಿಣಕ್ಕೆ ಹೊರಡಬೇಕೆಂದು ಮಾಡಿರುವನು ಪ್ರಭುಗಳೇ, ನಾನೂ ನನ್ನ ಅನುಯಾಯಿಗಳೂ ತಮ್ಮ ಚರಣ ಸಾಕ್ಷಿಯಾಗಿ ನಮ್ಮ ಜೀವಗಳನ್ನು ಖಡ್ಗದ ಮೊನೆಯ ಮೇಲೆ ಅಡ್ಡವಾಗಿಟ್ಟು ಕರ್ತವ್ಯವನ್ನು ಅನುಲಕ್ಷಿಸುವೆವು. ಬೇಗನೆ ತಮ್ಮ ಚಿತ್ತಕ್ಕೆ ಯೋಗ್ಯಕಂಡಂತೆ ವ್ಯವಸ್ಥೆಯಾಗಬೇಕೆಂದು ಪ್ರಾರ್ಥಿಸುವೆನು.

"ಪ್ರಭುಗಳ ಚರಣ ಸೇವಕ ಸಮರನಂದ"

ಬಲರಾಯ:— ವೀರರೇ, ವಿಚಾರವೇನಿರುವದಿದರಲ್ಲಿ? ಮಹಾರಾಜರ ಅಪ್ಪಣೆಯೊಂದೇ ಬೇಕು; ಯುದ್ಧವು ನಿಶ್ಚಿತವೇ! ಸರದಾರ ಸಮರನಂದರು ತಮ್ಮ ಪತ್ರದಲ್ಲಿ ಕರ್ನಾಟಕ ವಿಜಯಧ್ವಜದ ಅಪಮಾನವನ್ನು ಮಾತೃಭೂಮಿಯ ಅವನತಿಯನ್ನು ಚಾಲುಕ್ಯ ಸಾಮ್ರಾಜ್ಯಕ್ಕೆ ಕುಂದು ತಗಲಿದುದನ್ನು ಕಣ್ಮುಟ್ಟ ನೋಡಿಯೂ ಜೀವಿಸಿರುವ ನಮ್ಮ ಜನ್ಮಕ್ಕೆ ಧಿಃಕಾರವೆಂದು ತೆಗೆದ ಉದ್ಗಾರವನ್ನು ಕೇಳಿದರಷ್ಟೇ? ನಾವೀಗ ಇಷ್ಟುಜನರು ಈ ಭೂಮಾತೆಯ ಸತ್ವದಿಂದ ಈ ಮಹಾರಾಜರ ಅನ್ನದಿಂದ ಸೊಕ್ಕಿ ಬೆಳೆದೂ, ಈ ಮಾತೆಯ ಹಿತವನ್ನು ಬಯಸದಿದ್ದರೆ ಈ ಮಹಾರಾಜರ ಸೇವೆಯನ್ನು ಮಾಡದಿದ್ದರೆ, ಅಥವಾ ಈ ಅಪಮಾನದ ಸೇಡು ತೀರಿಸದಿದ್ದರೆ, ಇಂಥ ಹೇಡಿಗಳಾದ ನಮ್ಮ

ಜನ್ಮಕ್ಕೆ ಎಷ್ಟೆಂದು ಧಿಃಕಾರವು? ತಾಯ್ನಾಡಿನ ಉಪಕಾರವನ್ನು ತೀರಿ ಸದಂಥ ಹೇಡಿಗಳಾಗಿ ಬಾಳುವದಕ್ಕಿಂತ ಕಡುಗಲಿಯಾದ ಹಗೆಯೊಡನೆ ಹಗೆತನವನ್ನು ಹೂಡಿ ಮಡಿಯುವದು ಒಳಿತಲ್ಲವೇ? ಮಾತೃಭೂಮಿಯ ಅವನತಿಯ ಕಾಲದಲ್ಲಿ ಆದರ ಉದ್ಧಾರಕ್ಕಾಗಿ ಹೆಣಗಿ, ಹೊತ್ತು ಬಂದರೆ ಅದಕ್ಕಾಗಿಯೇ ದೇಹವಿಡುವದು ಯೋಗ್ಯವೆಂದ ಸಮರನಂದರ ದಿವ್ಯೋಕ್ತಿಯನ್ನು ಕೇಳಲಿಲ್ಲವೇ? ಚಾಲುಕ್ಯ ವೀರರೇನು ಹೇಡಿಗಳೇ? ಚಾಲುಕ್ಯ ಮಹಾರಾಜನು ಷಂಡರ ಕೈಯಲ್ಲಿ ಈ (ಹಿರಿದು) ಖಡ್ಗಗಳನ್ನು ಕೊಟ್ಟಿರುವನೇ? ವಿಚಾರಿಸಿರಿ. ಯುದ್ಧಕ್ಕೆ ಅಪ್ಪಣೆಯನ್ನು ಪಡೆಯಿರಿ. (ಒರೆಗಾಣಿಸಿ ನಮಸ್ಕರಿಸಿ ಕೂಡುವನು)

ರಣರಂಗಃ— ಮಹಾರಾಜರ ಸೇವೆಗಾಗಿ ಸ್ವ ಸುಖವನ್ನು ಮಣ್ಣುಪಾಲು ಮಾಡಿ ಕರ್ತವ್ಯವನ್ನು ಅನುಲಕ್ಷಿಸಿ ಮತ್ತೆ ನಮ್ಮೆಲ್ಲರನ್ನು ಕರ್ತವ್ಯದಲ್ಲಿ ದಕ್ಷರನ್ನಾಗಿ ಮಾಡಲು ಯತ್ನಿಸಿದ ಸಮರನಂದರು ನಿಜವಾಗಿಯೂ ಅಭಿನಂದನೀಯರಾಗಿರುವರು. ದೇವದುರ್ಗದ ರಣದಲ್ಲಿ ದೇಹವಿಟ್ಟ ಆತನ ಸೈನಿಕರು ಪರಮಧನ್ಯರು. ಹಲವು ಯುದ್ಧಗಳಲ್ಲಿ ನಮ್ಮ ಭುಜಕ್ಕೆ ಭುಜವನ್ನು ಆನಿಸಿ ಗೆಲುವಿನ ಮೇಲೆ ಗೆಲವುಗಳನ್ನು ಪಡೆದ ನಮ್ಮ ಬಂಧುಗಳಾದ ಆ ವೀರರು ಯಾವ ಪವಿತ್ರಕಾರ್ಯಕ್ಕಾಗಿ ತಮ್ಮ ಪ್ರಾಣಗಳನ್ನು ತ್ಯಜಿಸಿದರೋ ಅದನ್ನು ಪೂರ್ಣಗೊಳಿಸದಿದ್ದರೆ ನಮ್ಮಂಥ ಕೃತಘ್ನರು ಬೇರೆ ಯಾರಿರುವರು? ಸಾಮ್ರಾಜ್ಯದ ಮಾನರಕ್ಷಣೆಯನ್ನು ನಾವು ಮಾಡದೆ ಹೋದರೆ, ಆದಕ್ಕಾಗಿಯೇ ಹೆಣಗಿ ವೀರಸ್ವರ್ಗವನ್ನು ಪಡೆದ ಅವರ ಆತ್ಮಕ್ಕೆ ಶಾಂತಿಯುಂಟಾಗುವದೇ? ಜನರು ನಮ್ಮನ್ನು ಸ್ವಜನಘಾತಕರೆಂದು ಕರೆಯಲಿಕ್ಕಿಲ್ಲವೇ? ಆದ್ದರಿಂದ ಯುದ್ಧವೇ ಈಗಿನ ನಮ್ಮ ಕರ್ತವ್ಯವು! ಮಹಾರಾಜರು ಬೇಗನೆ ಅಪ್ಪಣೆಯನ್ನು ದಯಪಾಲಿಸಬೇಕು. (ವಂದಿಸಿ ಕೂಡುವನು.)

ರಣಮಲ್ಲಃ— ಮಹಾರಾಜ, ಇಂಥ ದುಸ್ಸಹವಾದ ಅಪಮಾನವನ್ನು, ಈ ಹರ್ಷವರ್ಧನನ ಸೊಕ್ಕಿನ ನಡತೆಯನ್ನು ನಾವೆಂದೂ ಸಹಿಸಲಾರೆವು. ಯುದ್ಧವು ನಿಶ್ಚಿತವಾದದ್ದು. ಹ್ಯಾಗೂ ಸಮರನಂದರ ಸೈನಿಕರು ಮಾರ್ಗವನ್ನೇ ತೋರಿಸಿಕೊಟ್ಟಿರುವರು. ಹರ್ಷವರ್ಧನನು ಬಹು ಬಲಾಢ್ಯನಾದರೂ ಕನ್ನಡ ವೀರರ ಕಲಿತನವನ್ನು ಅವನೇನು ಬಲ್ಲನು? ಈಗ ಚನ್ನಾಗಿ ಕೈತೋರಿಸಿಕೊಡೋಣ. ಪ್ರಭು, ಸಾಮ್ರಾಜ್ಯದ ಸತ್ವವೇ ನಮ್ಮ ಜೀವನವು! ಮಾತೃಭೂಮಿಯ ಮಾನರಕ್ಷಣವೇ ನಮ್ಮ ಪರಮ ಕರ್ತವ್ಯವು. ಆ ಮಾತೆಯ ಕೀರ್ತಿಗೆ ಕುಂದು ತಗಲುತ್ತಿರುವಾಗ ತಮ್ಮಡಿಯ ಪ್ರತಾಪವು ಅಗಲುವ ಹೊತ್ತು ಬಂದಿರುವಾಗ ನಾವು ಹಿಂಜರಿಯುವದೇ? ಮಹಾರಾಜ, ತಮ್ಮ ಪ್ರತಾಪದ ಬಲದಿಂದ ನಾವು ಇಲ್ಲಿಯ ವರೆಗೆ ಎಷ್ಟೋ ಜಯಗಳನ್ನು ಸಂಪಾದಿಸಿದೆವು. ಈಗಲೂ ಈ ಪಾದಸೇವಕರ ಬಲದ ಮೇಲೆ ನಂಬಿಗೆಯನ್ನಿಡಬೇಕು. ಈಗೊದಗಿದ ಮಹತ್ಪ್ರಸಂಗದಲ್ಲಿ ಕನ್ನಡ ವೀರರ ಸತ್ವವನ್ನಾದರೂ ಪರೀಕ್ಷಿಸಿರಿ. ಪ್ರಭುಗಳೇ ಅಪ್ಪಣೆ ಕೊಟ್ಟು ನೋಡಿರಿ, ನಾವೆಲ್ಲರೂ ಕರ್ನಾಟಕ ವಿಜಯಧ್ವಜವು ಯಾವನಿಂದ ಪತಿತವಾಗಿರುವದೋ ಆದೇ ಹರ್ಷವರ್ಧನನಿಂದಲೇ ಅದನ್ನು ಎತ್ತಿ ಸ್ಥಾಪಿಸಲಿಕ್ಕೆ ಹಚ್ಚಿದ ಹೊರ್ತು ಎಂದೂ ಖಡ್ಗವನ್ನು ಕೆಳಗಿಡಲಿಕ್ಕಿಲ್ಲ! ಇದು ನಿಶ್ಚಯ ನಿಶ್ಚಯ!!

ಎಲ್ಲರೂ (ಅದರೊಡನೆ ಖಡ್ಗ ಹಿರಿದು)ಃ— ನಿಶ್ಚಯ! ನಿಶ್ಚಯ!! ಜಯ ಚಾಲುಕ್ಯಸಾರ್ವಭೌಮ ಜಯಕರ್ನಾಟಕ ಭೂಮಾತೆ!

ವೀ. ವ.ಃ— ಮಹಾರಾಜ, ಪ್ರಬಲಪ್ರತಾಪದ ಬಲದಿಂದ ಈ ಚಾಲುಕ್ಯಸರದಾರರೂ ಇವರ ಕೈಕೆಳಗಿನ ನನ್ನ ಅತುಲ ಸೈನ್ಯವೂ ಸಾಮ್ರಾಜ್ಯದ ಮಾನರಕ್ಷಣೆಗಾಗಿ ಅಥವಾ ಅದರ ಅಭಿವೃದ್ಧಿಗಾಗಿ ಯುದ್ಧವೆಂದರೆ ಇಂದಿನ ವರೆಗೆ ಎಂದೂ ಹಿಂಜರಿದಿಲ್ಲ. ಅದರಿಂದ ತಮ್ಮಡಿಯ ಸಮೀಪದಲ್ಲಿ ಅಪಜಯದ ಗಾಳಿ ಸಹ ಸುಳಿಯುವದು

ಶಕ್ಯವಿಲ್ಲ. ಹರ್ಷವರ್ಧನನ ಸೊಕ್ಕನ್ನು ಮುರಿಯುವದಕ್ಕೆ ಅಪ್ಪಣೆಯನ್ನು ಕೊಟ್ಟರೆ ನಾನು ನನ್ನ ಈ ಶೂರ ಸರದಾರರ ನಿಶ್ಚಯದ ಬಲದಿಂದಲೂ ಇವರ ಸಹಾಯದಿಂದಲೂ ಆ ಹರ್ಷರಾಜನ ಪಾರುಪತ್ಯವನ್ನು ಮಾಡದೆ ಎಂದೂ ಹಿಂದಿರುಗುವದಿಲ್ಲ. ಇದು ನಿಶ್ಚಯವೆಂದು ತಿಳಿಯಿರಿ.

ಪುಲಿಕೇಶಿ:— (ನಸುನಗೆ) ಸೇನಾಪತಿಗಳೇ. ಈ ವೀರ ಸರದಾರರು ನಿಮ್ಮ ಪರೀಕ್ಷೆಯಲ್ಲಿ ಚನ್ನಾಗಿ ಉತ್ತೀರ್ಣರಾದಂತಾಯಿತು. ಇರಲಿ. ವೀರರೇ, ನೀವು ಮಹಾ ಸಮರ್ಥರೇ ಸರಿ. ನಿಮ್ಮೆಲ್ಲರ ಬಲದಿಂದಲೇ ಸಾಮ್ರಾಜ್ಯವು ಉನ್ನತ ಸ್ವರೂಪವನ್ನು ಪಡೆದಿರುವದು. ಇಂದಾದರೂ ನಿಮ್ಮ ಬಲವನ್ನೇ ನಂಬಿ ಯುದ್ಧವನ್ನು ನಿಶ್ಚಯಿಸುವೆವು. ಯುದ್ಧವು ನಿಶ್ಚಿತವಾಯಿತು.

ದ್ವಾರಪಾಲಕ (ಬಂದು ವಂದಿಸಿ):— ಮಹಾಪ್ರಭು, ಹೊರಗೆ ಹರ್ಷವರ್ಧನನ ದೂತನಂತೆ ಬಂದಿರುವನು. ತಮ್ಮನ್ನು ಕಾಣಲಿಚ್ಛಿಸುವನು.

ಪುಲಿ:— ಅವನನ್ನು ಕಳಿಸಿಕೊಡು.

ವೀ. ವ.:— ಹರ್ಷವರ್ಧನನ ಬಯಕೆಯು ಮತ್ತೇನಿರುವದು?

(ದೂತನು ನಮಿಸಿ ಪತ್ರಕೊಡುವನು. ಅರಸನು, ವೀರವರ್ಧನನಿಗೆ ಕೊಡುವನು. ಅವನು ಓದುವನು. ಎಲ್ಲರೂ ಕೇಳಲು ಆತುರರಾಗುವರು.)

ವೀ. ವ:— (ಓದುವನು). ಶ್ರೀ ವಾತಾಪಿಪುರವರಾಧೀಶ್ವರ ಚಾಲುಕ್ಯ ನೃಪತಿ ಪುಲಿಕೇಶಿಗೆ.

"ಚಾಲುಕ್ಯರಾಜ ನೀನು ವಾತಾಪಿಪುರದೊಡೆಯನು; ಸುತ್ತಲಿನ ನಾಲ್ಕು ಜನ ಅರಸರ ಸ್ನೇಹವು ನಿನಗೆ ಸಾಕು. ಆದರೆ ಈಗ ನೀನು ನಿನ್ನ ನಾಗರಿಕರಿಂದಲೇ ದೊರಕಿಸಿದ ಚಕ್ರವರ್ತಿಯೆಂಬ ಗೊಳ್ಳು ಪದವಿಯನ್ನು ಪಸರಿಸಬೇಕೆಂದು ನಿರರ್ಥಕವಾಗಿ ಹವ್ಯಾಸಪಡುವೆ. ಆದರೆ ಅದು ಹೇಗೆ ಸಾಗಬೇಕು? ಏನೋ ಕೇವಲ

ನಿರ್ಜೀವರೂ ನಾಮಮಾತ್ರಕ್ಕೆ ಅರಸರಾದವರೂ ನಿನ್ನ ಬಡಬಡಿಕೆಯನ್ನು ಒಪ್ಪಿದರೆ ಒಪ್ಪಬಹುದು. ಸಮರ್ಥರು ಕೇಳುವರೇ? ನಿನ್ನ ಅತಿಕ್ರಮಣವನ್ನು ನಮ್ಮಂಥವರು ಸಹಿಸುವರೇ? ನಿನ್ನ ಯೋಗ್ಯತೆಯೇನು? ಬಲವೇನು? ಮಲಗಿದ ಭಾರತದ ಸಾರ್ವಭೌಮ ಸಿಂಹವನ್ನು ಬೇಕಂತೆಯೇ ಎಬ್ಬಿಸುವ ನಿನ್ನ ಸಾಹಸಕ್ಕೆ ಏನೆನ್ನಬೇಕು? ಆಗಲಿ, ಆಗದ ಕಾರ್ಯಕ್ಕೆ ಕೈಹಾಕುವದರಿಂದೇನಾಗುವದೆಂಬದನ್ನು ಈ ಸಾರೆ ಚನ್ನಾಗಿ ಕಾಣುವೆ! ಬಹಳವೇನು? ಇನ್ನು ಮುಖ್ಯ ಮಾತನ್ನೇ ಹೇಳುವೆವು. ಕಾರಣವಿಲ್ಲದೆ ನೀನು ನಮ್ಮ ಸಾಮಂತ ರಾಜನಾದ ಉಜ್ಜಯಿನಿಯ ಪ್ರತಾಪರಾಯನ ಮೇಲೆ ದಾಳಿಯನ್ನು ಮಾಡಿರುವೆಯಲ್ಲದೆ ನಮ್ಮ ರಾಜ್ಯದೊಳಗಿನ ಕೋಟೆಯನ್ನು ಹಿಡಿದು ಕೊಂಡಿರುವೆ. ಇದಕ್ಕಾಗಿ ನಿನ್ನ ಮೇಲೆ ಯುದ್ಧವನ್ನು ಸಾರಿರುವೆವು. ಈಗ ಮೊದಲು ಎಚ್ಚರಗೊಡುವೆವು. ಇನ್ನೂ ವಿಚಾರಿಸು; ನಮ್ಮೊಡನೆ ಹಗೆತನವನ್ನು ಹಿಡಿಯುವದು ನಿನ್ನ ಯೋಗ್ಯತೆಯಲ್ಲ. ನಿನ್ನ ಈ ತಪ್ಪನೊಪ್ಪಿಕೊಂಡು ಕ್ಷಮೆಯನ್ನು ಬೇಡಿಕೊಂಡರೆ, ಇನ್ನೂ ರಾಜೋಪಭೋಗಗಳನ್ನು ಉಣ್ಣುತ್ತ ಬಾಳುವೆ. ನೋಡು ವಿಚಾರಿಸಿ. ನಮ್ಮ ದೂತನೊಡನೆ ಉತ್ತರಗೊಡು. "ಹರ್ಷ ಚಕ್ರವರ್ತಿ ಹರ್ಷವರ್ಧನ"

(ಪತ್ರವನ್ನು ಒಗೆದು) ಒಳ್ಳೇ ಬಲ್ಲಿದನಿವನು! ವೀರರೇ ನೋಡಿದಿರಾ ಹರ್ಷನ ಬಾಯಿ ಬಡಾಯಿತನವನ್ನು! ಇವನೇನೋ ಬಲ್ಲಿದನಂತೆ; ನಮಗೆ ಉಪದೇಶ ಮಾಡುವನು. ಇವನ ಶೌರ್ಯವಾದರೂ ಎಷ್ಟಿರಬಹುದು? ಮನಬಂದಂತೆ ಗಳಹುವವರಿಂದೇನಾದರೂ ಆಗಬಹುದೇ?

ಪುಲಿಃ–(ನಗುತ್ತ ಬರೆದು) ಅವನಿಗೆ ಇಷ್ಟು ಉತ್ತರವು ಸಾಕಷ್ಟೇ? (ವೀರವರ್ಧನನಿಗೆ ಕಾಗದ ಕೊಡುವನು. ಅವನು ನೋಡುವನು)

ಎಲ್ಲರುಃ–– ಸೇನಾಪ್ರಭುಗಳೇ ನಮಗಷ್ಟು ತೋರಿಸಿರಿ.

ವೀ. ವ:— ಇಗೋ ಕೇಳಿರಿ. (ಓದುವನು.)

ಶ್ರೀ ಹರ್ಷರಾಜ ಹರ್ಷವರ್ಧನ ಪ್ರತಾಪಿಗೆ:— ಪ್ರತಾಪಶಾಲಿಗಳೇ ನಿಮ್ಮ ದರ್ಪೋಕ್ತಿಗಳೆಲ್ಲ ತಿಳಿದವು. ಸಮರಭೂಮಿಯುಲ್ಲಿಯೇ ಅವುಗಳಿಗೆ ತಕ್ಕ ಉತ್ತರವನ್ನು ಕೊಡುವೆನು. "ಚಾಲುಕ್ಯ ಚಕ್ರವರ್ತಿ ಪುಲಿಕೇಶಿ"

ಎಲ್ಲರು:— ವೈರಿಗಳ ಸಲುವಾಗಿ ಇರುವ ನಮ್ಮ ಮಹಾರಾಜರ ಮರ್ಮೋಕ್ತಿಗಳು ತೀಕ್ಷ್ಣ ಶಸ್ತ್ರಗಳೇ ಆಗಿರುವವು.

ಪುಲಿ:— ಸೇನಾಪತಿಗಳೆ, ಕೊಟ್ಟು ಕಳಿಸಿರಿ ಆ ದೂತನನ್ನು!

ವೀ. ವ:— ಹೋಗಯ್ಯಾ ತೆಗೆದುಕೋ. ಇದು ನಿನ್ನ ಒಡೆಯನಿಗೆ ಉತ್ತರವು!

(ಹರ್ಷದೂತನು ತೆಗೆದುಕೊಂಡು ನಮಿಸಿ ಹೋಗಹತ್ತುವನು.)

ರಣಮಲ್ಲ:— ಏನಯ್ಯಾ ಹರ್ಷದೂತ ಸ್ವಲ್ಪ ತಡೆ.

ಹ. ದೂ:— (ದರ್ಪದಿಂದ ಅದೇಕೆ?)

ರಣ:— ನಿನ್ನನ್ನು ಸ್ವಲ್ಪ ನೋಡಬೇಕಾಗಿದೆ. (ಬರಹತ್ತುವನು.)

ಹ. ದೂ:— ಏನು, ಏಕಾಕಿಯಾದ ನನ್ನ ಮೇಲೆ ಅತಿಕ್ರಮಣವೇ?

ರಣ:— ಬೆದರುವೆಯೇಕೆ? ನಾನು ನಿನ್ನನ್ನು ಸ್ಪರ್ಶಿಸುವದೇ ಇಲ್ಲ. ನಿನ್ನ ಮುಖವನ್ನು ಮಾತ್ರ ನೋಡುವೆನು.

ಹ. ದೂ.:— ಏನೋ ನಿಮ್ಮ ಇಂಗಿತವು ತಿಳಿಯದು. ಆದರೆ ನನ್ನ ಅಪಮಾನವಾದರೆ ಹರ್ಷ ಸಾರ್ವಭೌಮನ ಅಪಮಾನವೆಂಬದನ್ನು ಲಕ್ಷದಲ್ಲಿಡಿರಿ.

ರಣ:— ಸಿಟ್ಟಾಗಬೇಡಯ್ಯಾ. (ನೋಡಿ) ನಿನ್ನ ಮೀಸೆಗಳಿನ್ನೂ ಬೆಳ್ಳಗಾಗಿಲ್ಲವೇ? ಹೋಗಲಿ ಬಿಡು; ನಿಮ್ಮ ಸರದಾರರಲ್ಲಿ ಅಥವಾ

ಸೈನಿಕರಲ್ಲಿ ನನ್ನಂಥ ಬಿಳೀ ಮೀಸೆಯ (ಕೈಹಚ್ಚಿ) ಮುದುಕರಿರುವದಿಲ್ಲೇನು?

ಹ. ದೂಃ— ಹಲವರಿರುವರು; ಆದರೆ?

ರಣಃ— ನನಗಂತೂ ಒಬ್ಬರೂ ಇರುವಂತೆ ತೋರುವದಿಲ್ಲ. ನೀನಂದಂತೆ ಒಂದು ವೇಳೆ ಇದ್ದರೆ ಆ ವೃದ್ಧರು ನಿಮ್ಮ ಅರಸನಿಗೆ ಲೋಕಾಪವಾದವೊದಗುವ ಕಾರ್ಯಮಾಡಲಾಗದೆಂದು ತಿಳಿಹೇಳಲಿಲ್ಲವೇಕೆ?

ಹ. ದೂಃ— (ವ್ಯಗ್ರನಾಗಿ) ಅದೇತಕ್ಕಾಗಿ?

ರಣಃ— ನಿಮ್ಮರಸನು ಶೂರನಾದರೆ ವೈರಿಗೆದುರಾಗಿ ಸೋಲಿಸಬಹುದು. ಆದರೆ ಅಪ್ರತ್ಯಕ್ಷವಾಗಿ ಪರರ ಅಪಮಾನವನ್ನು ಮಾಡುವದೂ, ನೊಂದವರನ್ನು ಪುನಃ ಪುನಃ ದುಃಖಗೊಳಿಸುವದೂ ಹೇಡಿತನವಲ್ಲವೇ? ಆಗದವರ ಪ್ರಾಬಲ್ಯವನ್ನು ಕಂಡು ತಾಳದೆ ಅಬಲೆಯು ಮಾತ್ರ ಹಿಂದೆ ಚಿಟುಕುಮುರಿದು ನಿಂದಿಸುವಳು.

ಹ. ದೂಃ— ಹಾ, ತಡೆಯಿರಿ! ನಿಮ್ಮ ನಾಲಿಗೆಯನ್ನು ಬಿಗಿಹಿಡಿಯಿರಿ!! ಇನ್ನೊಂದು ಮಾತನ್ನಾಡಿದರೆ ಪರಿಣಾಮವು ಕೆಟ್ಟೀತು! ಇಲ್ಲಿ ನಾನೊಬ್ಬನೇ ಇರುವದರಿಂದ ನನ್ನ ಪ್ರಾಣನಾಶವಾಗಬಹುದಿಷ್ಟೇ? ಆದರೆ ಅದೇನು ಮಹತ್ವದ್ದಲ್ಲ.

ಪುಲಿಃ— ರಣಮಲ್ಲ, ಹೋಗಲಿ ಬಿಡು; ಈ ದೂತನೇನು ಮಾಡಿಯಾನು? ಈತನು ಒಳ್ಳೇ ನೀತಿವಂತನಿದ್ದಾನೆ. ಈತನಲ್ಲಿ ಉಜ್ವಲವಾದ ಸ್ವಾಮಿಭಕ್ತಿಯಿರುವದು ಸಹಜವದೆ! ಅದು ಅವನಿಗೆ ಭೂಷಣವೂ ಆಗಿದೆ. ನಮ್ಮ ಬಗ್ಗೆ ನಿಮ್ಮೆಲ್ಲರಿಗೆ ಅಭಿಮಾನವಿರುವದಿಲ್ಲವೋ? ಹಾಗೆಯೇ ಇರಲಿ. ಹೋಗಯ್ಯಾ ನೀನು!

ರಣಃ— (ಸರಿದು) ಸರಿ. ಮಹಾರಾಜರ ವಿಚಾರಕ್ಕೆ ಯಾರು ತಲೆದೂಗರು?

ಹ. ದೂ:—(ಪ್ರಸನ್ನ ಮುಖದಿಂದ ಸ್ವಗತ) ಈ ಮಹಾರಾಜನು ಒಳ್ಳೇ ಗುಣಗ್ರಾಹಿಯೂ ನೀತಿವಂತನೂ ಆಗಿರುವನೆಂಬಲ್ಲಿ ಸಂದೇಹವಿಲ್ಲ. ಅಂತೇ ಇವನ ಕೀರ್ತಿ ದುಂದುಭಿಯು ಭರತಖಂಡದಲ್ಲೆಲ್ಲ ಮೊಳಗುತ್ತಲಿದೆ.

(ಹೋಗುವನು. ಅಷ್ಟರಲ್ಲಿ ಇತ್ತ ಗುಪ್ತಚಾರನನ್ನು ಹಿಡಿದು ತರುವರು.)

ವೀ. ವ:—ಮಹಾರಾಜರೆ, ಈತನು ಹರ್ಷರ ಗುಪ್ತಚಾರನು; ವೇಷಾಂತರದಿಂದ ಇಲ್ಲಿ ಸಂಚರಿಸುವನು.

ಪುಲಿ:—ಹೀಗೋ? ಈತನು ಗುಪ್ತಚಾರನು, ಇದೀಗ ಬಂದವನು ಪ್ರಕಟಚಾರನು. ಚನ್ನಾಗಿದೆ, ಅವನನ್ನೂ ಕರೆಯಿರಿ. ಇಬ್ಬರೂ ಕೂಡಿಕೊಳ್ಳಲಿ (ಒಬ್ಬನು ತೆರೆಯಲ್ಲಿ ಒದರುತ್ತ ಹೋಗುವನು.) ಏನಯ್ಯಾ ನೀನೇಕೆ ಇಲ್ಲಿಗೆ ಬಂದಿರುವೆ?

ಗುಪ್ತಚಾರ:—ನಮ್ಮೊಡೆಯನಾದ ಹರ್ಷಭೌಮನ ಸೇವೆಗಾಗಿ.

ವೀ. ವ:—ಆವ ಕಾರ್ಯ ಮುಖಾಂತರವಾಗಿ ಮಾಡಬೇಕಾದ ಸೇವೆ?

ಗುಪ್ತಚಾರ:—ನಿಮ್ಮಲ್ಲಿಯ ಎಲ್ಲ ಸಂಗತಿಗಳನ್ನೂ ಕಟ್ಟನ್ನೂ ತಿಳಿಯುವದರ ಮುಖಾಂತರವಾಗಿ!

ಪುಲಿ:—ಓಹೋ ಅವಶ್ಯವಾಗಿ ತಿಳಿದುಕೊಳ್ಳಬಹುದು. ಸೇನಾಪತಿಗಳು ಈತನನ್ನು ಬೇಕಾದಷ್ಟು ವೇಳೆ ನಮ್ಮ ಛಾವಣಿಯಲ್ಲಿ ಅಡ್ಡಾಡಗೊಡಿರಿ. ಈತನ ಮುಖಾಂತರವಾಗಿ ನಮ್ಮ ಬಲಾಬಲಗಳು ಹರ್ಷರಿಗೆ ಚನ್ನಾಗಿ ತಿಳಿಯಲಿ.

(ಹೋದ ಹರ್ಷದೂತನು ಮರಳಿಬರುವನು)

ರಣಮಲ್ಲ:—(ನೋಡಿ ಹಾಸ್ಯದಿಂದ) ಬನ್ನಿ, ನಿಮ್ಮಣ್ಣನೊಬ್ಬನಿದ್ದಾನೆ. ಇಬ್ಬರೂ ಕಲೆತು ಹೋಗಬಹುದಾಗಿದೆ. ಬನ್ನಿ. (ಹ. ದೂತನು ಸಿಟ್ಟಿನಿಂದ ನೋಡುವನು.)

ಪುಲಿ.ಃ— ಸೇನಾಪತಿಗಳೇ, ಇವರಿಬ್ಬರು ನಮ್ಮತಿಥಿಗಳು. ಇವರಿಗೆ ಚನ್ನಾಗಿ ಉಪಚಾರವಾಗುವಂತೆ ವ್ಯವಸ್ಥೆಯನ್ನಿಡಿಸಿರಿ. ತಮ್ಮಿಷ್ಟವಿರುವವರೆಗೆ ಇವರು ಇಲ್ಲಿದ್ದು ವಿಶ್ರಾಂತಿಗೊಳ್ಳಲಿ!

ಗುಪ್ತಚಾರಃ—ವೇಷಾಂತರವೆಂದರೆ ಮೋಸದ ಕೆಲಸವು! ನಾನು ಮೋಸದಿಂದ ನಿಮ್ಮ ಅಹಿತವನ್ನು ನೆನೆಯಬಂದ ವೈರಿಯು. ನಿಮ್ಮಾತಿಥ್ಯವನ್ನು ತಕ್ಕೊಳ್ಳಲಾರೆನು.

ಪುಲಿ.ಃ— ವ್ಯವಹಾರಕ್ಕೆ ವೈರತ್ವವಿದ್ದರೂ ನೀತಿಗೇನು ಬಾಧಕವೇ? ಇದೇನು ವಿಚಾರವಯ್ಯಾ ನಿನ್ನದು? ನೀನು ನಿನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳಲೇಬೇಕು. ನಾವು, ನಿಮ್ಮವರಾರೂ ಇಲ್ಲಿ ಇಲ್ಲದ ನಿಮಗೆ ಉಪಚಾರವನ್ನು ಮಾಡಲೇಬೇಕು.

ಗುಪ್ತಚಾರಃ— (ತಮ್ಮೊಳಗೆ) ಈ ಮಹಾರಾಜರು ಎಷ್ಟು ಗೌರವಶಾಲಿಗಳೂ ಉದಾತ್ತ ವಿಚಾರದವರೂ ಇರುವರಲ್ಲ!

ಹ. ದೂಃ— ನಿಜ. ಆಗಲೇ ನನಗೀ ಮಾತಿನ ಮನವರಿಕೆಯಾಗಿದೆ.

ಪುಲಿ.ಃ— ಏನು ಹೇಳಿದಂತಾಯಿತು?

ಗುಪ್ತಚಾರಃ— (ನಮಿಸಿ) ಆಗಬಹುದು ಮಹಾರಾಜ.

ಪುಲಿಃ— ಸಂತೋಷ, ವೀರರೇ ಇನ್ನು ಯುದ್ಧ ವೀಳೆಯನ್ನು ತಕ್ಕೊಂಡು ಸಿದ್ಧತೆಯಲ್ಲಿ ತೊಡಗಿರಿ. (ಸೇನಾಪತಿಯು ಖಡ್ಗ ಹಿರಿದು ನಮಿಸಿ ತಕ್ಕೊಳ್ಳುವನು.)

ಬಲರಾಯಃ— ಹೂ, ರಣಮಲ್ಲನಾಯಕರೇ, ನೀವು ಹಿರಿಯರು, ಮುಂದಾಗಿರಿ.

ರಣ.ಃ— ಓಹೋ ಸಂತೋಷ; ನೀವು ನನಗೆ ಬೆಂಬಲರಾಗಿರ್ರಿ ಅಂದರಾಯಿತು.

ವೀ. ವ.ಃ— ರಣಮಲ್ಲ ನಾಯಕರು ವೃದ್ಧರಾಗಿದ್ದರೂ ಅವರ ಉತ್ಸಾಹವು ತರುಣರಂತೆ ಬಿಸಿಯಾಗಿರುವದು.

ರಣ.ಃ— ಪ್ರಭುಗಳಡಿಯ ಪ್ರತಾಪವಿರುವವರೆಗೆ ಅದು ಹೇಗೆ

ತಣ್ಣಗಾಗುವದು ?

ಎಲ್ಲರುಃ— ನಿಜ ನಿಜ, ಹೇಗೆ ತಣ್ಣಗಾಗುವದು? (ಎಲ್ಲರೂ ವೀಳೆ ತಕ್ಕೊಂಡು ನಮಿಸಿ) ಜಯ ಕರ್ನಾಟಕ ಭೂಮಾತೆ! ಜಯ ಚಾಲುಕ್ಯ ಸಾರ್ವಭೌಮ!

ಪುಲಿ.ಃ— ಸೇನಾಪತಿಗಳೇ, ಸಾಮಂತರಾಜರಿಗೆಲ್ಲ ತಮ್ಮ ಸೈನ್ಯದೊಡನೆ ಬರಲು ಪತ್ರಿಕೆಗಳನ್ನು ಬರೆಯಿಸಿರುವಿರಾ?

ವೀ. ವ.—ಓಹೋ, ಇಷ್ಟರಲ್ಲಿ ಅವರು ಸನ್ನದ್ಧರಾಗುತ್ತಿರಬಹುದು.

ರಣ.ಃ— (ಹರ್ಷದೂತರಿಗೆ) ನೋಡಿದಿರೇನಯ್ಯಾ? ನಿಮ್ಮೊಡೆಯನಿಗೆ ಹೇಳುವಿರಂತೆ ಲಕ್ಷದಲ್ಲಿರಲಿ. ನಡೆಯಿರಿ (ಹೋಗುವರು.)

ಪುಲಿ.ಃ— (ಮುಂದೆಬಂದು ವಿಚಾರಾಸಕ್ತನಾಗಿ ತಡೆದು) ಎಲಾ ಯಾರಲ್ಲಿ? (ದೂತನು ಬರುವನು) ಈ ಕೂಡಲೆ ನನ್ನ ಕುದುರೆಗೆ ಜೀನುಹಾಕಿ ತೆಗೆದುಕೊಂಡು ಬಾ.

ದೂತಃ— ಅಪ್ಪಣೆ.

ಪುಲಿ.ಃ— ಯುದ್ಧವನ್ನು ನಿಶ್ಚಯಿಸುವದು ಸುಲಭವಾಯಿತು; ಮಾಡುವದು ಸ್ವಲ್ಪ ಬಗಿಯದೆ. ವೈರಿಯು ಒಳ್ಳೇ ಬಲಾಢ್ಯನು. ಇದೊಂದು ಗಂಡಾಂತರವೇ! ಇಂಥ ಪ್ರಸಂಗದಲ್ಲಿ ನನ್ನ ಗುರುಗಳೂ ಪರಮ ಯೋಗಿವರ್ಯರೂ ಆದ ದಿವ್ಯಾನಂದ ಮಹರ್ಷಿಗಳ ದರ್ಶನವನ್ನು ಪಡೆದು ಅವರ ಅಭಿಮತವನ್ನು ತಿಳಿಯುವದು ಯೋಗ್ಯವಾಗಿ ಕಾಣುತ್ತದೆ. ಅವರ ಅನುಗ್ರಹವಿದ್ದರೆ ಎಂಥ ಕಾರ್ಯವಿದ್ದರೂ ಸಾಧ್ಯವೇ ಸಂ.

ಪದ. ರಾ। ಭೀಮಪಲಾಸ, ತಾ। ತ್ರಿವಟ. (ಧಾ-—ಭೂಷಣ ಸಂಸಾರಾ.)

ಭಾಸುರ ಯೋಗಿವರಾ। ಸದಯಾ ಮಹಿಮಾಯುತನುತ ಭೀತಿವಿದೂರಾ ॥ಪ॥

ಗೈಯುಲನುಗ್ರಹ। ಸತ್ವದಸಾರಾ। ಬ್ರಹ್ಮತೇಜವಾ। ತಾಳ್ವನು ವೀರಾ ॥

ದೂತಃ— (ಬಂದು) ಪ್ರಭು ಹೊರಗೆ ತೇಜಿಯು ಸಿದ್ಧವಾಗಿದೆ.

ಪುಲಿ.ಃ— ಒಳಿತಾಯಿತು ನಡೆ ಹೋಗುವಾ.

ಅಂಕ ೩.

೧ ನೇ ನೋಟ.

(ಅರಣ್ಯ ಮಾರ್ಗಸ್ಥನಾದ ಪುಲಿಕೇಶಿಯು ಬರುವನು. ನಸುಕಾಗತೊಡಗಿದೆ)

ಪುಲಿ:— ದಿವ್ಯಾನಂದ ಮಹಾಮುನಿಗಳ ಅಭಯಪೂರ್ಣವಾದ ವರಪ್ರದಾನದಿಂದ ನನ್ನ ಉತ್ಸಾಹವು ಇಮ್ಮಡಿಯಾಗಿ ಹೋಗಿದೆ. ತಪಸ್ವಿಗಳ ಉಪದೇಶವು ಸಾಮಾನ್ಯವಾದುದೇ? 'ಹರ್ಷವರ್ಧನನೆಂದರೇನು? ಆವನೊಡನೆ ಯುದ್ಧವೆಂದರೇನು? ಚಾಲುಕ್ಯರೇನು ಸಾಮಾನ್ಯರೇ?' ಎನ್ನುವಂತಾಗಿದೆ. ಭಯದಂಶವಾದರೂ ನನ್ನಲ್ಲಿಹುದೇ? ಆಹಹ! ಮಹಾತ್ಮರ ವಾಣಿಗಳೇನು ಪ್ರಾಪಂಚಿಕ ತಾಪಗಳಿಂದ ಒಣಗಿ ಹೋದ ಬಾಯವರ ಮಾತುಗಳಂತೆ ನಿರರ್ಥಕವಾದವುಗಳೇ? ಈ ಅಮೃತವಾಣಿಗಳಲ್ಲಿ ಸಂಜೀವನವಿರುವುದು ಆಶ್ಚರ್ಯಕರವೇ? ಸರಿ ಸರಿ. ಇನ್ನು ಬೇಗನೇ ಹೋಗುವಾ, ನಸುಕಾಗಬಂತು. (ನೋಡಿ) ನನ್ನ ಕುದುರೆಯೂ ಸಾಕಷ್ಟು ವಿಶ್ರಾಂತಿಯನ್ನು ಹೊಂದಿದೆ. ಛಾವಣಿಯಲ್ಲಿ ಸೇನಾಪತಿಗಳು ನನ್ನ ಮಾರ್ಗನಿರೀಕ್ಷಣಮಾಡುತ್ತಿರಬಹುದು. (ಹೋಗಹತ್ತುವನು. ಆಷ್ಟರಲ್ಲಿ ಕೇಳಿ ತಡೆದು) ಇದೇನು ಸ್ತ್ರೀ ರೋದನವು ಕೇಳುವದಲ್ಲ, (ಹೊರಳಿ ಕಿವಿಗೊಟ್ಟು ಕೇಳಿ) ಕೊಳ್ಳದಲ್ಲಿ ಮತ್ತೂ ಕೋಲಾಹಲವು! ಏನು? "ಹಾಯ್ ಹಾಯ್! ದೇವಾ ನನ್ನ ಮಾನವನ್ನು ರಕ್ಷಿಸು" ನಿಶ್ಚಯ ಯಾವಳೋ ಮಹನೀಯಳು ವಿಪತ್ತಿನಲ್ಲಿ ಸಿಕ್ಕಿರುವದೇ ನಿಶ್ಚಯ! ಕತ್ತಲಾಗಿರುವದಾದರೂ ಹಾಗೆಯೇ ಹೋಗುವದು ಹೇಗೆ? ಪ್ರಜಗಳ ದುಃಖವನ್ನು ತಿಳಿದೂ ತಿಳಿಯದವನಂತಿರುವ ರಾಜನು ರಾಜನೇ? ಆತನು ರಾಕ್ಷಸನು! ನಾನೀಗ ನನ್ನ ಕುದುರೆಯನ್ನು (ಸಾವರಿಸುತ್ತ) ಅತ್ತ ಹೊಡೆಯಲೇಬೇಕು. (ಮತ್ತೆ ಕೇಳಿ) ಎಲಾ ನನ್ನ ರಾಜ್ಯದಲ್ಲಿಯೂ ಅಬಲೆಯರ ಮೇಲೆ ಬಲಾತ್ಕಾರವೇ? (ಹೋಗುವನು.)

೨ ನೇ ನೋಟ.

(ಇಳಿಸಿದ ಒಂದು ಮೇಣೆ ಅರಣ್ಯದಲ್ಲಿ; ಹತ್ತೆಂಟು ಜನರು; ಕತ್ತಲೆ; ವಾದಕ್ಕೆ ಆರಂಭ)

೧ ನೇ ವ್ಯಕ್ತಿಃ— ನೀನು ಎಷ್ಟು ಮಾತ್ರವೂ ಮೇಣೆಯನ್ನು ಮುಟ್ಟಲಾಗದು; ಇದರೊಡೆಯನು ನಾನಿದ್ದೇನೆ.

೨ ನೇ ವ್ಯಕ್ತಿಃ— ನಾನೆಂದಿಗೂ ಕೇಳಲಿಕ್ಕಿಲ್ಲ; ನಮ್ಮೊಡೆಯನ ಸೇವಕರೇ ನಾವೆಲ್ಲರೂ, ಅವನಿಗಾಗಿ ಇದ್ದ ಈ ಕನ್ಯಾರತ್ನವನ್ನು ನಡುವೇ ಅಪಹರಿಸುವ ನಿನ್ನ ಈ ನೀಚತನಕ್ಕೆ ನಾನೆಂದಿಗೂ ಸುಮ್ಮ ನಿರಲಾರೆನು.

೧ ನೇಃ— ನೀಚತನವೋ, ಒಡೆಯನು ನಡೆದದ್ದು ನೀಚತನ ವಲ್ಲವೋ? ಪ್ರತಾಪರಾಯನಲ್ಲಿಯೇ ಇದ್ದು ಅವನನ್ನವನ್ನೇ ಉಂಡು, ಇಲ್ಲದ ತಂತ್ರಗಳನ್ನು ಹೂಡಿ ಅವನನ್ನು ದುಃಖಕ್ಕೆ ಗುರಿಮಾಡಿ ಈ ಹೆಣ್ಣನ್ನು ನೆಗವಿಕೊಂಡದ್ದು ನೀಚತನವಲ್ಲವೇ? ಕಪಟಿಯ ವಿಷಯ ದಲ್ಲಿ ಕಪಟತನವನ್ನು ಮಾಡುವದು ಪಾಪವೇ?

೨ ನೇಃ— ಇದನ್ನೆಲ್ಲ ಕೇಳುವವರಾರು? ಒಡೆಯನ ನಡೆಯನ್ನು ನಿಂದಿಸುವದು ದುಡಿಯುವವರಾದ ನಮ್ಮ ಕೆಲಸವಲ್ಲ. ನಾನೇನು ನಿಮ್ಮಪ್ಪನಿಗೂ ನಿನ್ನ ಮಾತು ನಡೆಯಗೊಡಲಿಕ್ಕಿಲ್ಲ. ಒಡೆಯನು ಹೇಳಿದಂತೆಯೇ ಮೇಣೆಯು ಸಾಗತಕ್ಕದ್ದು.

೧ನೇಃ— ಹಾಗಾದರೆ ತಡೆ ನೋಡುವಾ (ಖಡ್ಗವನ್ನು ಹಿರಿಯು ವನು.)

೨ನೇಃ— ಅನುಮಾನವೇಕೆ ಬಾ ಮುಂದಕ್ಕೆ (ಆತನೂ ಹಿರಿಯು ವನು)

ಮೇಣೆಯಲ್ಲಿಃ— ಭೋ ದಯಾನಿಧೆ, ನನ್ನ ಮಾನವನ್ನು ರಕ್ಷಿಸು.

(ನಿಂತವರಲ್ಲಿ ಹೊಡೆದಾಟ ನಡೆಯುವದು. ಒಬ್ಬಿಬ್ಬರು ಸಾಯುವರು. ಅಷ್ಟರಲ್ಲಿ ಪುಲಿಕೇಶಿಯು ಬರಲು ೧ನೇ ವ್ಯಕ್ತಿಗೆ ಇದಿರಾಗಿ ಯುದ್ಧ ಮಾಡುತ್ತ ತೆರೆಯಲ್ಲಿ ಹೋಗುವನು. ಇತ್ತ ಇವರು ಅವಸರದಿಂದ ಮೇಣೆ ಯನ್ನು ಹೊತ್ತೊಯ್ಯುವರು. ಪುಲಿಕೇಶಿಯು ತಿರುಗಿ ಬಂದು ದಿಟ್ಟಿಸಿ ನೋಡುತ್ತ ಹುಡುಕುತ್ತ)

ಪುಲಿಃ— ಈ ದುಷ್ಟರು ಮತ್ತೆ ಪಾರಾದರೇ? ಎತ್ತ ಹುಡುಕಲಿ? ಗಹನವಾದ ಅರಣ್ಯ, ಸುತ್ತಲೂ ಕತ್ತಲೆ, ಮುಂದಕ್ಕೆ ಸಾಗುವೆನೆಂದರೆ ಗಿಡಗಳ ಝುಡುಪಿನಲ್ಲಿ ದಾರಿಯೆತ್ತ? ಏನು ಮಾಡಲಿ? ಛೀ ನನ್ನಿಂದ ಕೈಕೊಂಡ ಕಾರ್ಯವನ್ನು ಪೂರ್ಣಗೊಳಿಸುವದಾಗಲಿಲ್ಲವಲ್ಲ! ಕಷ್ಟಕ್ಕೀಡಾದ ಅಬಲೆಯನ್ನು ರಕ್ಷಿಸುವದು ನನಗೆ ಅಸಾಧ್ಯವಾಗಬೇಕೇ? ಧಿಕ್ಕಾರ ಧಿಕ್ಕಾರ!! ಈ ನೀಚರು ಯಾವ ಮಹಾತ್ಮಳನ್ನು ಅಪಹರಿಸಿರುವರೋ ಏನೋ? ಯಾವ ಸ್ತ್ರೀಯ ವಿಡಂಬನೆಯಾಗುವದೋ ಏನೋ? ಅಕಟ! ಯಾವನು ಸ್ತ್ರೀ ವಿಡಂಬನೆಯನ್ನು ಮಾಡುವನೋ ಯಾವನು ಅದನ್ನು ಕಂಡು ಕೇಳಿ ಸಹಿಸುವನೋ ಅವರೆಲ್ಲರು ಅಧಃಪತಿತರಾಗರೇ? ಯಾವ ರಾಜ್ಯದಲ್ಲಿ ಅನ್ಯಾಯವಾಗಿ ಸ್ತ್ರೀಯರ ಮೇಲೆ ಬಲಾತ್ಕಾರವು ನಡೆಯುವದೋ ಆ ರಾಜ್ಯವು ಸರ್ವಾಂಗೀಣ ಶಿಥಿಲತೆಯನ್ನು ಹೊಂದದೇ? ಹಾಯ್ ಹಾಯ್! ಎಂಥ ಅನಿವಾರ್ಯ ದುಸ್ಥಿತಿಯಿದು. (ಕಾಲಿಗೆ ಹೆಣಗಳು ಹತ್ತಲು ಕುಳಿತು) ಇದೇನು? ಮನುಷ್ಯರ ದೇಹವು, ರಕ್ತವು ಮುಳುಗಿದೆ, (ಕಿವಿಗೊಟ್ಟು) ಪ್ರಾಣವಿಲ್ಲ ಹೆಣ! ಕಗ್ಗತ್ತಲೆಯಂತೂ ಮುಳ್ಳುಕೊನೆಯನ್ನೂ ಕೊಳ್ಳದು. (ಸರಿದು ಮತ್ತೊಂದಕ್ಕೆ) ಇಲ್ಲಿಯೂ ಹೆಣ! ಏನು ಭಯಂಕರ ಸ್ಥಿತಿಯಿದು? ಈ ನೀಚರ ಪಾಪಕೃತ್ಯಕ್ಕೇನು ಎಣೆಯುಂಟೇ? ದುಷ್ಟರು ತಮ್ಮ ದುಷ್ಟೋದ್ದೇಶಗಳನ್ನು ಸಾಧಿಸುವದಕ್ಕೆ ಎಷ್ಟೋ ಜನರನ್ನು ನಿರರ್ಥಕವಾಗಿ ಬಲಿಗೊಡುವರೆಂಬದಕ್ಕೆ ಸಂದೇಹವೇನು? ದೇವಾ ಜಗನ್ನಿಯಾಮಕಾ, ನಿನ್ನ ಸೃಷ್ಟಿಯಲ್ಲಿ ಇದೇ...... (ಚಕಿತನಾಗಿ) ಇದೇನು ಪ್ರಕಾಶವೆಲ್ಲಿಯದು? (ಹೊರಳಿ) ಇವರಾರು?

(ಎದ್ದು) ಅಲಲಾ! ಈ ಕರಿಯ ಕುಂಡರಾದ ಕಾಡುಜನರು ಕಕ್ಕಡಗಳನ್ನು ಹಿಡಿದು ನನ್ನ ಕಡೆಗೆಯೇ ಬರುವಂತಿದೆ. ನೋಡುವಾ ಈ ಕೊಲೆಪಾತಕಿಗಳನ್ನು!

(ಖಡ್ಗ ಹಿರಿದು ಅದೇ ಕಡೆಗೆ ನೋಡುತ್ತ ನಿಲ್ಲುವನು. ದೀವಟಿಗೆಗಳನ್ನು ಹಿಡಿದ ಇಬ್ಬರೂ ಇನ್ನಿಬ್ಬರೂ ಟೊಣಪರು ಎದುರು ಬರುವರು. ಪುಲಿಕೇಶಿಯು ಮುಂದೆ ಹವಣಿಸುವಷ್ಟರಲ್ಲಿ, ಹಿಂದೆ ಕತ್ತಲೆಯಲ್ಲಿಂದ ಬಂದ ಇಬ್ಬರು ಅವನನ್ನು ಹಿಡಿದು ಖಡ್ಗವನ್ನು ಕಸಿಯುವರು. ಎಲ್ಲರೂ ಹಿಡಿದು ಕಟ್ಟುವರು. ಪುಲಿಕೇಶಿಯು ಚಡಪಡಿಸುವನು.)

ವರುಣ (ಮುಖ್ಯಸ್ಥ):— ತೆಗೆದುಕೊಂಡು ನಡೆಯಿರಿನ್ನು ಈತನನ್ನು! ನಮ್ಮ ಆ ನೆಲಮನೆಯಲ್ಲಿ ದಬ್ಬಿ ಬಾಯಿ ಮುಚ್ಚಿರಿ; ಬೇಡಿ ಬಯಸಿ ಪಡೆದ ಸಾಮ್ರಾಜ್ಯದ ಸುಖವನ್ನು ಉಣ್ಣುತ್ತ ಬೀಳಲಿ!

ಪುಲಿ:— ಅಥವಾ, ನೀನೇ ಆಗಿರಬಹುದಲ್ಲವೇ ಪರಸ್ತ್ರೀಹರಣ ನಿಪುಣನಾದವನು? (ಕೊಸರಿ ಸಾಗಿ ಒದೆಯ ಹೋಗುವನು.)

ವರುಣ:— ಚನ್ನಾಗಿ ಹಿಡಿಯಿರೋ ಹಿಂಪಕ್ಕೆ!

ಪುಲಿ:— ಚನ್ನಾಗಿ ಹಿಡಿಯಿರಿ ಚನ್ನಾಗಿ, ನಿಮ್ಮ ಬಲದಿಂದಲೇ ಈ ಪಾಪಾತ್ಮನ ಪಾಪಕಾರ್ಯಗಳು ನಿರ್ವಿಘ್ನವಾಗಿ ಸಾಗಬೇಕಂತೆ. (ದಿಟ್ಟಿಸಿ ನೋಡಿ) ಮೂರ್ಖಾ, ನಿನ್ನ ಮುಖದ ಮೇಲೆ ಪಾಪಸಾಮ್ರಾಜ್ಯವು ಮೆರೆಯುತ್ತಲಿದೆ; ಆದರಿಂದಲೇ ನಿನ್ನನ್ನು ಗುರ್ತಿಸುತ್ತೇನೆ. ನೀನೇ ಅಲ್ಲವೇ ನಿಮ್ಮಣ್ಣನೊಡನೆ ಗತಿಸಿದ ಚಾಲುಕ್ಯಮಹಾರಾಜರ ಕೊಲೆ ಮಾಡಲು ಯತ್ನಿಸಿದ ಪಾತಕಿಯು?

ವರುಣ (ಆಶ್ಚರ್ಯತೆಯಿಂದ) ಹೌದು ಹೌದು! ಅಂದಿನ ಪ್ರಸಂಗದಲ್ಲಿ ನಿನ್ನಿಂದಾದ ಅಪಮಾನದ ಸೇಡು ತೀರಿಸುವದಕ್ಕಾಗಿಯೇ ನಿನಗೀ ಆವಸ್ಥೆಯನ್ನುಂಟು ಮಾಡಿದೆನು ತಿಳಿಯಿತೇ?

ಪುಲಿ:— ಸೇಡು ತೀರಿಸುವೆಯೋ (ಒದೆಯ ಹೋಗುವನು; ಜಗ್ಗುವರು.)

ಪದ. ರಾ| ಭೂಪ ತಾ| ಝುಂಪಾ [ಧಾಟಿ-- ಅಧನು ಕಿತಿ ಪಾಲಕ]

ಛೀ ಮೂರ್ಖ ನೀ ಸೇಡು ತೀರಿಸುವೆಯೋ| ಕಡುಪಾಪಿಕಪಟಾಧಮಾ!| ಅನ್ನವಿತ್ತೊಡೆಯನನು ಮನ್ನಿಸದೆ ಘಾತಿಸುವ| ನಿನ್ನ ಮೋಸದ ಕಾರ್ಯ ಕಳಕುವೆನೆ ಖೂಳಾ|| ಛೀ ಮೂರ್ಖ|| (ಒದೆಯುಹೋಗುವನು)

ವರುಣಃ— (ಸಿಟ್ಟಿನಿಂದ) ಎಲಾ ಇವನ ಒಡಬಡಿಕೆಯನ್ನೇನು ಕೇಳುವಿರಿ! ನಡಿಯಿರೋ (ಹಿಡಿದೊಯ್ಯುವರು.)

---

೩ ನೇ ನೋಟ.

(ಕಾಡು ಜನರಾಶ್ರಮದ ಭಾಗ, ತಾರೆಯು ಬರುವಳು.)

ತಾರೆಃ— ನಾನು ಹೆಂಗಸಾದರೇನಾಯಿತು? ಜಗನ್ಮೋಹಿನಿಯನ್ನು ಅಪಹರಿಸಿ ತರುವದರಲ್ಲಿ ನಾನು ಒಡ್ಡಿದ ಬಲೆಯು ಗಂಡಸರನ್ನು ಕೂಡ ನಾಚಿಸುವಂಥದಲ್ಲವೇ? ಮನದ ನೆಲೆಯನ್ನು ಇನ್ನೊಬ್ಬರಿಗೆ ತಿಳಿಯಗೊಡದೆ ತಂತ್ರದಿಂದ ಮನದುದ್ದೇಶಗಳನ್ನು ಸಾಧಿಸುವದರಲ್ಲಿ ಹೆಂಗಸರೇ ಬಲವಾದವರೆಂದು ಹೆಂಗಸಾದ ನಾನು ಅಭಿಮಾನದಿಂದೇಕೆ ಹೇಳಬಾರದು? ಆದರೆ ಏನು ಮಾಡಲಿ? ಏನು ಮಾಡಿದರೂ ಮೋಹಿನಿಯು ನಮ್ಮಣ್ಣನನ್ನು ಮದುವೆ ಯಾಗಲು ಒಪ್ಪಲೊಲ್ಲಳು. ಚಾಲುಕ್ಯರಾಜನ ಆ ಹಾಳು ಸ್ಮರಣೆಯೇ ಸ್ಮರಣೆಯು. ಒಮ್ಮೆ ಉಜ್ಜಯಿನಿಯಲ್ಲಿ ಆ ಪುಲಿಕೇಶಿಯನ್ನು ನೋಡಿದಾಗಿನಿಂದ ಅವನ ಸುರೂಪವು ಇವಳ ಕಣ್ಣಲ್ಲಿ ಮೂಡಿಹೋಗಿದೆ ಮೂಡಿ. ಮೂಡದಿರುವದಾದರೂ ಹೇಗೆ? ಚಾಲುಕ್ಯ ಮಹಾರಾಜನೂ ತೇಜಸ್ವಿಯು, ಬಲಿಷ್ಠನು, ಸುಂದರನು; ಆದರೆ ಈ ಚಾಂಡಾಲನು ನಮ್ಮ ಸರ್ವಸುಖವನ್ನು ಮಣ್ಣುಗೂಡಿಸಿದ ವೈರಿಯು. ಈ ವೈರಿಯ ಸ್ಮರಣೆಯನ್ನು ಇವಳ ಮನದೊಳಗಿಂದ ತೆಗೆದು ಹಾಕಿ, ಇವಳನ್ನು ನಮ್ಮಣ್ಣನ ವಶಪಡಿಸದಿದ್ದರೆ ನನ್ನ ಹೇಸರೇ?

ವರುಣಃ-- (ಬಂದು) ಏನಮ್ಮಾ ತಂಗೀ ಒಳ್ಳೇ ಗಹನವಿಚಾರ!

ತಾರೆ:— (ನೋಡಿ) ಅಣ್ಣಾ ವಿಚಾರವೇನಿದೆ? ನಿನ್ನ ಮನೋರಥವು ಹೇಗೆ ಕೈಗೂಡೀತೆಂಬ ವಿಚಾರವೇ ವಿಚಾರವು.

ವರುಣ:— ಅಮ್ಮಾ ಎಷ್ಟು ಕಷ್ಟದಿಂದ ಕೊರಗುತ್ತಿರುವೆಯಲ್ಲ!

ತಾರೆ:— ನನಗೆಲ್ಲಿ ಬೇರೆ ಕಷ್ಟ? ನಿನಗಾಗುವ ಕಷ್ಟವು ಹೇಗೆ ಪರಿಹಾರವಾದೀತೆಂಬುದೇ ನನಗೆ ಕಷ್ಟಕರವಾಗಿದೆ.

ವರುಣ:— ತಂಗೀ ನಿನ್ನ ವಿಚಾರ ಪೂರ್ಣವಾದ ಮಾತುಗಳಿಂದ ನನ್ನ ಹೃದಯುವು ಅರಳುತ್ತಲಿದೆ. ಇರಲಿ, ಮೋಹಿನಿಯ ಅವಸ್ಥೆಯು ಹೇಗಿದೆ? ಅವಳೀಗ ನಮ್ಮ ಅಭಿಪ್ರಾಯವನ್ನು ಒಪ್ಪುವಳೇ?

ತಾರೆ:— ಇಲ್ಲ, ಅವಳ ಮನವಿನ್ನೂ ನಮಗೆ ಅನುಕೂಲವಾಗಿರುವದೇ ಇಲ್ಲ. ಅವಳು ಆ ಪುಲಿಕೇಶಿಯ ಹಂಬಲವನ್ನು ತೊರೆದಿರುವದಿಲ್ಲ.

ವರುಣ:— ಪುಲಿಕೇಶಿಯ ಹಂಬಲವನ್ನು ತೊರೆದಿರುವದಿಲ್ಲ! ಅದಾವಬಗೆಯಿಂದ ಆಕೆಯು, ಆ ನನ್ನ ವೈರಿಯನ್ನು ಕೂಡಬಹುದು? ಅವಳೇನು ನಮ್ಮ ಕೈಯೊಳಗಿಂದ ಪಾರಾಗಿ ಹೋಗಬಹುದೇ?

ತಾರೆ:— ಅದೆಲ್ಲಿಯ ಮಾತು ಅಣ್ಣಾ? ನಮ್ಮ ಪಂಜರದಲ್ಲಿ ಸಿಕ್ಕ ಹಕ್ಕಿಯು ಹಾರಿ ಹೋಗುವದೆಲ್ಲಿ?

ವರುಣ:— ಹಾಂ, ಹಾರಿ ಹೋಗುವದೆಲ್ಲಿ? ಮೋಹಿನಿಯು ಆ ಹಾಳು ಹಂಬಲದಿಂದ ಆ ಪುಲಿಕೇಶಿಯನ್ನು ಹೊಂದುವದನ್ನು ಬಿಟ್ಟು ಬೇಕಾದರೆ, ಈ ಮಹಾವೀರನ ಖಡ್ಗದಿಂದ ಆ ತನ್ನ ಮನದನ್ನನ ಅಂತ್ಯವಾಗುವದನ್ನು ಕಣ್ಣಾರೆ ಕಾಣಲಿ!

ತಾರೆ:— ಸರಿಯೇ ಪುಲಿಕೇಶಿಯ ಅಂತ್ಯವನ್ನು ಕಂಡ ಅವಳ ಆಶೆಯು ಕೂಡಲೆ ಕಳಚಿ ನಿನ್ನನ್ನು ವರಿಸುವದೇ ನಿಶ್ಚಯ.

ವರುಣ:— ನಿಜ ನಿಜ, ಈ ವರೆಗೂ ನಿನ್ನ ಮಾತಿನಿಂದಲೇ ಆ ಮೋಹಿನಿಯು ಹಾದಿಗೆ ಬರಬಹುದೆಂದು ತಿಳಿದು ನಾನವಳ ಎದು

ರಿಗೆ ಹೋಗದಿದ್ದೆನು. ಇನ್ನು ಒಂದೆರಡು ಸಾರೆ ನಾನೂ ತಿಳಿಹೇಳಿ ನೋಡುವೆನು. ಕಡೆಗೆ ನಮ್ಮ ಸೆರೆಯಲ್ಲಿ ಸಿಕ್ಕ ಆ ಪುಲಿಕೇಶಿಯು ಕತ್ತನ್ನು ಆವಳೆದುರಿನಲ್ಲಿಯೇ ಕತ್ತರಿಸಿ ಆ ಕ್ರೂರ ಕೃತ್ಯದಿಂದ ದೃಢವಾದ ಅವಳ ಹೃದಯುವನ್ನು ಭೇದಿಸಿ ನನ್ನೆಡೆಗೆ ಹರಿಸುವೆನು. ಈ ಕಾಡೊಡೆಯುನ ಭಾಗ್ಯಬಲಗಳನ್ನು ಅವಳೇನು ಬಲ್ಲಳು? ತಾರಾ, ಹೇಳು ಹೇಳು ಈಗ ಅವಳೆಲ್ಲಿ?

ತಾರೆ.— ಇಷ್ಟು ಹೊತ್ತಿನ ವರೆಗೆ ಇಲ್ಲಿಯೇ ಬಿದ್ದುಕೊಂಡಿದ್ದ ಆಕೆಯು ಇದೀಗ ಪುಷ್ಕರಿಣಿಯು ಕಡೆಗೆ ಹೋದಂತೆ ಕಾಣುವದು.

ವರುಣ.— ಹಾಗಾದರೆ, ನಾನತ್ತ ಹೋಗುವೆನು. ಈ ಕಾಡು ಜನರು ನಮ್ಮಾಜ್ಞೆಗಳನ್ನು ಮನಃಪೂರ್ವಕವಾಗಿ ಪಾಲಿಸುತ್ತಿರುವರೋ ಇಲ್ಲವೋ ಸೂಕ್ಷ್ಮವಾಗಿ ನಿರೀಕ್ಷಿಸುತ್ತಿರು; ನಡೆ. (ಹೋಗುವಳು. ಅತ್ತ ನೋಡಿ) ಇದೂ ವಿಚಾರಿಸತಕ್ಕ ಮಾತಾಗಿದೆ. ಯಾಕಂದರೆ ನನ್ನ ಸಹಾಯಕ್ಕಿದ್ದ ಬಲಿಷ್ಠರಾದ ಈ ಕಾಡುಜನರು ಒಂದು ವೇಳೆ ನನ್ನ ಮೇಲೆಯೇ ತಿರುಗಿ ಬಿದ್ದರೆ ಏನು ಮಾಡಬೇಕು? ಇವರ ವಿಶ್ವಾಸವಾದರೂ ಏನು? ಅನ್ನವನ್ನಿಕ್ಕಿ ನಂಬಿ ಸಲಹಿದವರನ್ನೇ ಅಪನಂಬಿಗೆಯಿಂದ ಮಣ್ಣುಗೂಡಿಸಿದವನು ನಾನು! ನನ್ನಲ್ಲಿ ಇನ್ನುಳಿದವರ ಬಗ್ಗೆ ವಿಶ್ವಾಸವು ಹುಟ್ಟುವದಾದರೂ ಹೇಗೆ? ಹೋಗಲಿ, ಈ ಹಾಳು ರಗಳೆಯಿಂದ ಈಗ ಪ್ರಯೋಜನವಾದರೂ ಏನು? ಆ ಮೋಹಿನಿಯು ಸಮಾಗಮದ ಸುಖಮಯವಾದ ಕಲ್ಪನೆಯನ್ನು ಮಾಡುತ್ತ ಅತ್ತಸಾಗುವಾ. ಅಹಹಾ! ಏನು ಮೋಹದ ರೂಪವೋ ಅದು!

ಪದ (ಧಾಟಿ— ಸಾವಲಬನ್ ಶೇವಾಲಾನಂದಲಾಲಾ)

ರೂಪವದೆಂತೋ ಪ್ರಿಯೆಯಾ। ಮೋಹಿನಿಯಾ। ಮನೋಹರಿಯಾ। ಸುಂದರಿಯಾ॥

ಮಾರನು ತಾನೀ ದೇಹವ ದಹಿಪಾ। ದಾರುಣಹತಿಯಾ ತಾಳೆನು ತಾಪಾ। ಪೊಂದುವೆನೀಗಳೆ ಪ್ರಿಯೆಯಾ। ಮೋಹಿನಿಯಾ ಮನೋಹರಿಯಾ। ಸುಂದರಿಯಾ ರೂಪವ...... ॥

ಈ ಅದ್ವಿತೀಯ ರೂಪದ ಹೆಣ್ಣನಾಶಿಸಿ ಹಲವು ಜನ ರಾಜಕು ಮಾರರು ಬಾಯಿತೆರೆದು ಬಂದರೆ ಈ ಮೋಹಿನಿಯು ಮುರುಕಿನಿಂದ ತಿರಸ್ಕರಿಸಿ ಬಿಟ್ಟಳು. ಆದರೆ ಈ ವೀರವರುಣನು ಹೇಗೆ ಸುಲಭ ವಾಗಿ ಈ ಕನ್ಯಾರತ್ನವನ್ನು ಎತ್ತಿಹಾಕಿದನು? (ಚಪ್ಪರಿಸಿಕೊಂಡು) ಭಲೆ ವರುಣಾ ನಿನ್ನ ಬುದ್ಧಿಗೆ ಬೆಲೆಯುಂಟೇ? ಸಾಗಲಿನ್ನು ಮುಂದಿನ ಕಾರ್ಯ.

(ಮೇಲಿನ ಪದದ ಮುಂದಿನಭಾಗ)

ಯುವತಿಯು ನಗೆಮೊಗದವಳತಿ ಚದುರೆಯು। ಅವಯುವ ಲಾವಣ್ಯದ ಭಾಮಿನಿಯು। ಪೊಂದುವೆನಾಕೆಯು ಪ್ರಿಯೆಯಾ। ಮೋಹಿನಿಯಾ। ಮನೋ ಹರಿಯಾ। ಸುಂದರಿಯಾ॥ರೂಪವ .... (ಹೋಗುವನು)

---

೪ ನೇ ನೋಟ.

(ಮೋಹಿನಿಯು ಪುಷ್ಕರಣಿಯ ತೀರದಲ್ಲಿ ಕಲ್ಲಮೇಲೆ ದುಃಖಿಸುತ್ತ ಕುಳಿತಿರುವಳು)

ಮೋಹಿನಿ.—(ದುಃಖದೊಡನೆ) ಎಷ್ಟುಪರಿಯಿಂದ ವಿಚಾರಿಸಿದರೂ, ಈ ಸಂಕಟದಿಂದ ಈ ನೀಚನ ಬಂಧನದಿಂದ ಪಾರಾಗುವ ಉಪಾಯವೇ ತೋಚದಲ್ಲ! ಸುಖದ ದಿನಗಳನ್ನು ಕಾಣುವ ಆಶೆಯು ಇನ್ನೆಲ್ಲಿ ಉಳಿಯಿತು? ತಾಯಿತಂದೆಗಳಿರಾ ನೀವೆತ್ತ ಕುಳಿತಿರಿ, ನಾನೆತ್ತ ಬಂದೆನು? ಅಮ್ಮಾ ನನ್ನನ್ನು ಹೊತ್ತ ನಿನ್ನ ಒಡಲತಂಪು ತೀರಿತೇ? ಅಪ್ಪಾ ನನ್ನನೆತ್ತಿ ಮುಂದಲೆಯ ಕಂಪನಾಘ್ರಾಣಿಸಿದ ನಿನ್ನಹಸ್ತ ಪುಣ್ಯವು ಮಣ್ಣುಗೂಡಿತೇ? ನೀಚರ ಮೋಸದಿಂದ ನನ್ನನ್ನು ಕಳೆದುಕೊಂಡಿರಾ? ಚಾಲುಕ್ಯ ಸಾರ್ವಭೌಮನೇ ನಿನ್ನಡಿಯಲ್ಲಿ ನನ್ನ ಪ್ರಾಣ ಮನಗಳನ್ನರ್ಪಿಸಿದೆನಲ್ಲವೇ? ತಿಳಿಯದುದಕ್ಕೆ ನೀನೂ ಬಲಹೀನನಾದೆಯಾ? ಹಾಗಾದರೆ ದೇವಾ ನನಗಿನ್ನು ಗತಿಯು ನೀನೇಅಲ್ಲವೇ?

ಪದ. ರಾ, ಸಾರಂಗ. ತಾ, ಝಂಪಾ

ನೀನೆ ನನಗಾಧಾರ ಪಾಪಕುಲಸಂಹಾರ। ದೀನರಕ್ಷಕನೆಂದು ನಿನಗೆ ಹಿರಿ ವೆಸರಾ॥ಪ॥

ನಿನ್ನ ನಂಬಿದ ಜನರು ಶರಣ ಜನವರದನೇ। ಬನ್ನಬಡುವುದು ಲೇಸೆ ಲೋಕದಾಧಾರಾ॥

ಚಾಲುಕ್ಯ ಮಹಾರಾಜನೇ, ಪ್ರಾಣನಾಥನೆ, ನಿನ್ನ ಪಾದದರ್ಶನವು ನನಗೆ ಎರವಾಯಿತೇ? ಪೂರ್ವಜನ್ಮದ ಕರ್ಮದಿಂದ ಈ ಫಲವನ್ನು ಅನುಭವಿಸಬೇಕಾಯಿತೇ? ಅದಕ್ಕನುಸಾರವಾದ ದುರ್ದೈವದ ದುರ್ವಿಪಾಕವನ್ನು ಉಣ್ಣುವದಕ್ಕಾಗಿಯೇ ನಾನು ಅಂದು ಅಜಾಗ್ರತಳಾಗಿ ಮೋಸಗಾರರ ಬಲೆಗೆ ಸಿಕ್ಕುಬಿದ್ದೆನು. ಉಪಾಯವಿಲ್ಲ. ಮಹಾರಾಜ, ಈ ಜನ್ಮದಲ್ಲಿ ನಿನ್ನ ಚರಣಸನ್ನಿಧಿಯನ್ನು ಸೇರುವ ಆಶೆಯು ಉಳಿಯಲಿಲ್ಲ. ಹೀಗಾದಮೇಲೆ ಇನ್ನು ಈ ನಿರರ್ಥಕವಾದ ಜನ್ಮವನ್ನು ಇಟ್ಟು ಉಪಯೋಗವೇನು? (ಎದ್ದು) ಬೇಡ ಈ ದುಷ್ಟರಿಂದ ನನ್ನ ಪವಿತ್ರವಾದ ಧರ್ಮವನ್ನು ಕೆಡಿಸಿಕೊಳ್ಳುವದು ಬೇಡ!! ಉಜ್ಜಯಿನಿಯ ಪ್ರತಾಪರಾಯನ ಪವಿತ್ರವಾದ ವಂಶಕ್ಕೆ ಕಲಂಕವನ್ನು ತರುವದು ಬೇಡ!! (ನೋಡಿ) ಅದೋ ನೀಚನು ಇತ್ತ ಕಡೆಗೆಯೇ ಬರುತ್ತಿರುವನು; ಇನ್ನೇನುಗತಿ? ದೇವಾ, ಈ ನೀಚನ ಹಿಂಸೆಯಿಂದ ನನ್ನನು ರಕ್ಷಿಸು; ಬೇಗನೆ ಪ್ರಾಣವನ್ನು ತೊಲಗಿಸು. (ಕಣ್ಣಿಗೆ ಸೆರಗು)

ವರು:—(ಬಂದು) ಮೋಹಿನೀ, ಇನ್ನೂ ದುಃಖಿಸುತ್ತಿರುವೆಯಲ್ಲ! ನಿನಗೇನು ಹುಚ್ಚು ಹಿಡಿಯಿತೇ?

ಮೋ.— ಹೌದು ಹಿಡಿದಿದೆ; ಹಾಗಾದರೂ ತಿಳಿದು ಹೋಗಿಬಿಡು. ನಿನಗೆ ನಮಸ್ಕರಿಸುತ್ತೇನೆ. (ಹಾಗೇ ಮಾಡುವಳು.)

ವರುಣ.— ಅಃ ನಾನೇನು ಇಷ್ಟು ಸುಲಭವಾಗಿ ತಿರುಗಿಹೋಗಲು ಬಂದವನಲ್ಲ.

ಮೋ.— ಹಾಗಾದರೆ ಏತಕ್ಕಾಗಿ ಬಂದಿರುವೆ?

ವರುಣ.— ನಿನ್ನಲ್ಲಿ ಪ್ರೇಮಯಾಚನೆಗೆ ಬಂದಿರುವೆನು. ಪ್ರಿಯೇ ನಿನ್ನ......

ಮೋ.— ಬೇಡ, ವರುಣರಾಯಾ, ಇದೋ ನಿನಗೆ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ನನ್ನನ್ನು ನಿನ್ನ ತಂಗಿಯೆಂದು ತಿಳಿ. ತಂದೆಯ ಬಳಿಗೆ ನನ್ನನ್ನು ಕಳುಹಿ ಪುಣ್ಯವನ್ನು ಕಟ್ಟಿಕೋ!

ವರುಣ.— ಛೀ ಛೀ,

ಮೋ.— ಹಾಗೆನ್ನಬೇಡ, ಬಂಧುವೇ ನಿನ್ನ ಕಾಲಿಗೆರಗುತ್ತೇನೆ. ನನ್ನ ತಂದೆ ಪ್ರತಾಪರಾಯನಿಂದ ಮಗನಂತೆ ಸಂರಕ್ಷಿಸಲ್ಪಟ್ಟ ನೀನು ನನಗಣ್ಣನಲ್ಲವೇ? ಗೆಳತಿ ತಾರಮ್ಮನ ಅಣ್ಣನು ನನಗೂ ಅಣ್ಣ......

ವರುಣ.— ತಡೆ, ಮೋಹಿನೀ, ಇದೇನು ಅಭದ್ರ ನುಡಿಯುವೆ? ನಿನ್ನನ್ನು ನನ್ನ ಸಹೋದರಿಯೆಂದೆಂತು ತಿಳಿಯಲಿ? ನೀನು ನನ್ನ ಮನವನ್ನು ಸೆಳೆದ ಮೋಹದ ಮಣಿಯು; ಪ್ರಣಯಪ್ರೇಮದ ಪುತ್ಥಳಿಯು; ನಿನ್ನ ತಂದೆಯು ಸುತನಂತೆ ಸಂರಕ್ಷಿಸಿದ್ದು ನನಗೆ ಬೇಕಾಗಿದ್ದಿಲ್ಲ. ನಿನ್ನ ಸಲುವಾಗಿ ನಾನೇ ಆತನ ಸೇವೆಯನ್ನು ಕೈಕೊಂಡಿದ್ದೆನು. ಬೇಕಾದರೆ ಇನ್ನು ನಿನ್ನ ಸೇವೆಯನ್ನು ಮಾಡುವೆನು. ಕೈಕೊಂಡು ನನ್ನನ್ನು ಧನ್ಯನನ್ನಾಗಿ ಮಾಡು; ನನ್ನ ಮನೋರಥವನ್ನು ಕೈಗೂಡಿಸಿ ಕೊಡು. ನನ್ನ ಮನದ ಅಧಿದೇವತೆಯಲ್ಲವೇ ನೀನು? ಇದೋ ನಿನ್ನೆದುರಿನಲ್ಲಿ ಬದ್ಧಾಂಜಲಿಪುಟನಾಗಿ ಬೇಡಿಕೊಳ್ಳುತ್ತೇನೆ, ನಿನ್ನ ಸಲುವಾಗಿ ಹಲವು ತರದಿಂದ ಸಣ್ಣಾದ ನನಗೆ ಪ್ರೇಮ ಭಿಕ್ಷೆಯನ್ನು ಹಾಕು.

ಮೋ.— (ಕೇವಲ ಮುಖ ಮುಚ್ಚಿ ದುಃಖಿಸುತ್ತ ನಿಲ್ಲುವಳು.)

ವರುಣ.— ಮನೋಹರಿ, ವ್ಯರ್ಥವಾಗಿ ದುಃಖಿಸಿ ಫಲವಿಲ್ಲ; ನೀನು ಈ ಜನ್ಮದಲ್ಲಿ ಬೇರೆ ಸುಖವನ್ನು ಕಾಣಲಾರೆ; ಈ ನೀಚ ಪುಲಿಕೇಶಿಯ ಒಣಹಂಬಲವನ್ನು ಬಿಟ್ಟು ನನ್ನ ಪಾಣಿಗ್ರಹಣವನ್ನು

ಮಾಡು. ಅಂದರೆ ನಿನ್ನ ವೈಭವಕ್ಕೂ ಸುಖಕ್ಕೂ ಕೊರತೆಯೇ ಇಲ್ಲ. (ಕೈ ತೆಗೆಯಿಸ ಹೋಗುವನು.)

ಮೋ.— ಹಾ! ದುಷ್ಟಾ, ಸರಿ ಹಿಂದಕ್ಕೆ! ಮಹಾಪಾತಕಗಳಿಂದ ದೂಷಿತವಾದ ನಿನ್ನ ಹಸ್ತಗಳಿಂದ ನನ್ನನ್ನು ಮುಟ್ಟದಿರು. ಎಲೋ, ಅಶನಕ್ಕೆ ಗತಿಯಿಲ್ಲದ ನಿನಗೆ ಆಶ್ರಯಕೊಟ್ಟು ಕಾಪಾಡಿದ ಪ್ರತಾಪರಾಯನ ಪುತ್ರಿಯು ಈಗ ಪ್ರಸಂಗವಶಾತ್ ನಿನ್ನ ಕಾಲಿಗೆರಗಿ ಬೇಡಿಕೊಳ್ಳುತ್ತಿದ್ದರೂ ಕರಗದ ನಿನ್ನ ಎದೆಯು ಏತರಿಂದ ನಿರ್ಮಿತವಾಗಿದೆಯೋ?

ವರುಣ.— ದುಷ್ಟೆ, ಪಾಷಾಣದಿಂದ ನಿರ್ಮಿತವಾಗಿದೆ ಪಾಷಾಣದಿಂದ, ಅಥವಾ ವಜ್ರದಿಂದ ನಿರ್ಮಿತವಾಗಿರುವದೆಂದು ತಿಳಿ! ಇದೀಗ ನೀನಂದಂತೆ, ನನಗೆ ಅನ್ನವಿಕ್ಕಿದ ನಿನ್ನ ಮುದಿತಂದೆಯನ್ನು ನಿನ್ನ ವಿಯೋಗದಿಂದ ದುಃಖಕ್ಕೀಡುಮಾಡಿದ ನನ್ನೆದೆಯು ಎಷ್ಟು ಕಠಿಣವಾಗಿದೆಯೆಂಬದನ್ನು ಅರಿಯೆಯಾ? ಅದರಲ್ಲಿಯೂ ಆತನಿಗೆ ಚಾಲುಕ್ಯರ ಮೇಲೆ ವಿಕಲ್ಪವನ್ನುಂಟುಮಾಡಿ, ಗಾಯದ ಮೇಲೆ ಬರೆಕೊಟ್ಟಂತೆ ಅವರ ಮೇಲೆ ಯುದ್ಧಕ್ಕೆ ಹೋಗಲು ರೇಗಿಸಿದ ನನ್ನೆದಯು ಎಷ್ಟು ಬಿರಿಸಿದೆಯೆಂಬದನ್ನು ನೋಡು!! ಇದಕ್ಕೂ ಮೊದಲು ನಮ್ಮ ಮನೆತನವನ್ನೇ ಗೌರವದಿಂದ ಕಾಪಾಡಿದ, ವಾತಾಪಿಪುರದ ಚಾಲುಕ್ಯ ಚಕ್ರವರ್ತಿಗಳ ವಂಶದಲ್ಲಿ ವೀರಾಗ್ರಗಣ್ಯನಾದ ಪುಲಿಕೇಶಿಯನ್ನು ನಾನಾ ತಂತ್ರಗಳಿಂದ ಸೆರೆಹಿಡಿದು ಯಾತನೆಗೀಡುಮಾಡಿದ ನನ್ನೆದೆಯು ಇನ್ನೆಷ್ಟು ಕಠಿಣವಾಗಿದೆಯೆಂಬದನ್ನು ತಿಳಿ!!! ಇಗೋ ಮೋಹಿನೀ ನಿನ್ನ ಮನದನ್ನನೆಂದು ನಂಬಿದ ಆ ಪುಲಿಕೇಶಿಯನ್ನು ನಿನ್ನೆದುರಿನಲ್ಲಿ ತಂದು, ನಿನ್ನ ಹಂಬಲವನ್ನು ಬಿಡಿಸುವದಕ್ಕಾಗಿ ಆತನ ಕೊರಳನ್ನು ಕರಕರನೆ ಕೊಯ್ಯುವಾಗ ಬೇಕಾದರೆ ನನ್ನ ಹೃದಯವು ಮತ್ತೂ ಎಷ್ಟು ಕಠಿಣವಾಗಿರುವದೆಂಬದನ್ನು ಮನಗಾಣು!

ಮೋ.— (ಸ್ವಗತ) ಈತನು ಉನ್ಮತ್ತನಾದನು; ಅಂಜಿದರೆ ಕ್ಷಣದಲ್ಲಿ ನನ್ನ ಮಾನಭಂಗವನ್ನು ಮಾಡದೆ ಬಿಡುವದಿಲ್ಲ. ದೇವಾ

ಇವನ ದರ್ಪವನ್ನಡಗಿಸಲಿಕ್ಕೆ ನನಗೆ ನಿಶ್ಚಿತಬುದ್ಧಿಯ ಬಲವನ್ನು ಕೊಡು. ಈತನು ಕುಯಂತ್ರಗಳಿಂದ ಚಾಲುಕ್ಯಸಾರ್ವಭೌಮನನ್ನೂ ವಂಚಿಸಿದಂತೆ ಕಾಣುತ್ತಿದೆ. ಅಂತೇ ಈ ಪ್ರಕಾರ ಇಷ್ಟು ಬಲದಿಂದ ಬೊಗಳುವನು.

ವರುಣಃ— ಏನು, ಮೋಹಿನೀ ಇನ್ನೂ ವಿಚಾರವೇ? ನಿನ್ನ ದೀನ ವಾಣಿಯಿಂದ ನನ್ನ ಹೃದಯವು ಕರಗದೆಂಬದು ತಿಳಿಯಲಿಲ್ಲವೇ?

ಮೋ.— ಛೀ, ಮೂರ್ಖಾ......

ವರುಣ.— ಹಾ, ತಡೆ, ನಾಲಿಗೆಯನ್ನು ಬಿಗಿ ಹಿಡೆ, ಯಾರನ್ನು ನಿಂದಿಸುತ್ತಿರುವೆ?

ಮೋ.— ನಿನ್ನನ್ನು ನಿನ್ನನ್ನು, ಪರಸ್ತ್ರೀಹರಣನಿಪುಣನಾದ ನಿನ್ನನ್ನು!!

ವರುಣ.— ಊಂ (ಹುಂಕರಿಸುವನು.)

ಮೋ.— ಏತಕ್ಕೆ ಇಷ್ಟೊಂದು ನೆಗೆನೆಗೆದು ಬೀಳುವೆ? ಏತಕ್ಕಿಂತು ಕೆಂಗಣ್ಣನಾಗಿರುವೆ? ಮೂಢಾ, ಪತಿವ್ರತೆಯ ನಿಶ್ಚಯಬುದ್ಧಿಯ ಬಲದ ಮುಂದೆ ನಿನ್ನ ಆಟವೇ ನಡೆಯಲಿಕ್ಕಿಲ್ಲ. ವ್ಯರ್ಥವಾಗಿ ತುಟಿಗಳು ತುಂಡಾಗುವಂತೆ ಔಡುಗಚ್ಚಿರುವೆಯೇಕೆ ಮೂರ್ಖಾ ಶಾಂತನಾಗು.

ವರುಣ.— ಛೀ ಮರುಳೆ, ಸಮಸ್ತ ಕಾನನಾಧೀಶ್ವರನಾದ ನನ್ನ ಸಾಮರ್ಥ್ಯವನ್ನು ನೀನೇನು ಬಲ್ಲೆ? ನನ್ನ ತಂತ್ರಗಳಿಂದ ನಿನ್ನ ಮುದಿ ತಂದೆಯೂ ಪುಲಿಕೇಶಿ ಹರ್ಷವರ್ಧನರೂ ಮಣ್ಣು ಮುಕ್ಕಿ ಹೋದರು.

ಮೋ.— ಅಲ್ಲವೇ ನೀನು ಬಲುಗಟ್ಟಿಗನು? ನೀತಿ ಧರ್ಮಗಳನ್ನು ಬದಿಗಿಟ್ಟು, ದಯಾದಾಕ್ಷಿಣ್ಯಗಳನ್ನು ಬಿಟ್ಟುಕೊಟ್ಟು, ಕೃತಜ್ಞತೆಗೆ ತಿಲಾಂಜಲಿಯನ್ನು ಕೊಟ್ಟು, ಪುರುಷತ್ವವಲ್ಲದೆ ಹೇಡಿತನದಿಂದ ಕಪಟಜಾಲವನ್ನು ಹೂಡಿ ಅನ್ಯರನ್ನು ಘಾತಿಸುವ ನೀನು ಗಟ್ಟಿಗನ

ಲ್ಲವೇ? ನಿನ್ನಂಥ ಗಟ್ಟಿಗನನ್ನು ಹುಟ್ಟಿಸಿದ ಬ್ರಹ್ಮನೇ ಬಳಿಕ ನಿನ್ನಿಂದ ಭಯಪಟ್ಟಿರಬಹುದು.

ವರುಣ.—ಮೋಹಿನೀ ವ್ಯರ್ಥವಾಗಿ ಹಗಳಬೇಡ; ನೀನು ನನ್ನ ಆಧೀನದಲ್ಲಿರುವೆ.

ಮೋ.— ಇದು ಬರಿಯ ಭ್ರಮೆ! ನನ್ನ ಕೂದಲಕೊನೆಯು ನಿನಗೆ ಸಿಗಲಿಕ್ಕಿಲ್ಲ.

ವರುಣ.—ನೀನು ಇನ್ನೆಲ್ಲಿ ಜಾರಿಹೋಗುವದು? ನಿನ್ನ ಸೆರೆಯಾಳಾದ ಆ ನನ್ನ ವೈರಿ ಪುಲಿಕೇಶಿಯನ್ನು ನಿನ್ನೆದುರಿನಲ್ಲಿ ಕೊಂದು, ಕ್ಷಣದಲ್ಲಿ ನಿನ್ನನ್ನು ಹಣ್ಣು ಮಾಡುವೆನು; ಪೈಶಾಚಿಕ ರೀತಿಯಿಂದಲಾದರೂ ನಿನ್ನ ಅಂಗಸಂಗವನ್ನು ಪಡೆಯುವೆನು. ಬಳಿಕ ನಿನ್ನೊಡನೆ ಸಂಸಾರವನ್ನು ಮಾಡುತ್ತ ಈ ಸಮಸ್ತ ಕಾಡು ಜನರಿಂದ ಸೇವೆಯನ್ನು ಕೈಕೊಳ್ಳುತ್ತ ಸುಖದಿಂದ ಕಾಲಕಳೆಯುವೆನು. ಇಷ್ಟು ಶ್ರಮಬಟ್ಟುದು ನಿರರ್ಥಕವೇ?

ಮೋ.— ನೀನೇನೋ ಮನೋರಾಜ್ಯದ ಸಿಂಹಾಸನದಲ್ಲಿ ಆನಂದದಿಂದ ಮೆರೆದಾಡುತ್ತಲಿರುವೆ. ಆದರೆ ಮೂಢಾ ಯಮನು ನಿನ್ನ ಸಾಮ್ರಾಜ್ಯದಲ್ಲಿ ಹೇಗೆ ಸ್ವಚ್ಛಂದ ವೃತ್ತಿಯಿಂದ ಕುಣಿದಾಡುತ್ತಿರುವನು ನೋಡಿದೆಯಾ? ನಿನ್ನ ದುಷ್ಟ ಅನುಯಾಯಿಗಳನ್ನು ಹೆಡಮುರಿಗೆ ಕಟ್ಟಿ ಒಯ್ಯ ಹತ್ತಿದ ಯಮನು ಇತ್ತಲೇ ಧಾವಿಸುತ್ತಾನೆ, ಮೂರ್ಖಾ ಹೊರಳಿ ನೋಡು; ಆತನ ಪಾಶವು ನಿನಗೂ ತಪ್ಪಿದುದಲ್ಲ.

ವರುಣ.—(ಖಡ್ಗ ಹಿರಿದು ತಿರುಗಿ) ಅದಾವ ಯಮನವನು ನನ್ನ ಸುಖದಲ್ಲಿ ಮಣ್ಣುಗೂಡಿಸುವವನು? ಮೊದಲು ಆತನನಿಕ್ಕಿ ಬಳಿಕನ್ಯ ವಿಚಾರವು. (ಭ್ರಾಂತದೃಷ್ಟಿಯಿಂದ ಅತ್ತಿತ್ತ ನೋಡುವನು)

ಮೋ.—(ಇತ್ತ ದಿಬ್ಬವನ್ನೇರಿ) ಮಹೇಶ್ವರಾ, ನಿನ್ನಡಿಯಲ್ಲಿ ನನಗೆ ಎಡೆಗೊಡು. ಚಾಲುಕ್ಯರಾಯನೇ, ಪ್ರಿಯನೇ, ನಿನ್ನ ನೆನಹು

ನನ್ನ ಮನದಲ್ಲಿದೆ. ದಯೆಯಿರಲಿ ಇದೋ ಬರುವೆ. (ಎಂದು ಪುಷ್ಕರಿಣಿಯಲ್ಲಿ ಹಾರುವಳು.)

ವರುಣ.—(ಹೊರಳಿನೋಡಿ) ಅಯ್ಯೋ! ನನ್ನ ಮೋಹದರಗಿಳಿಯು ಮರೆಯಾಗುತ್ತಲಿದೆ! ಇನ್ನೇನುಗತಿ? (ಗಡಬಿಡಿಯಿಂದ ಅರಿವೆಗಳೊಂದೆರಡನು ತೆಗೆದಿಟ್ಟು ಹಾರುವನು.) (ತೆರೆ.)

---

೫ ನೇ ನೋಟ.

(ಕಾಡು ಮಾರ್ಗ; ರಣಮಲ್ಲನಾಯಕನು ಬರುವನು)

ರಣಮಲ್ಲ.— ಇದುವೇ ಆ ಕಾಡುಜನರ ನಿವಾಸಸ್ಥಾನವಾದ ಅರಣ್ಯವೆಂಬಂತೆ ತೋರುತ್ತದೆ. ಇದು ಅತ್ಯಂತ ದುರ್ಗಮವಾಗಿರುವದರಿಂದಲೇ ಆ ದುರಾತ್ಮರ ಉಪಟಳಕ್ಕೆ ಒಳ್ಳೇ ಆಶ್ರಯವಾಗಿರುವದು. ದಿವ್ಯಾನಂದ ಮಹರ್ಷಿಗಳು ಸೂಚಿಸಿದಂತೆ ನಮ್ಮ ಮಹಾರಾಜರು ಈ ಕಾಡಿಗರಿಂದಲೇ ಆಪತ್ತನ್ನು ಹೊಂದಿರಬೇಕು. ದಿವ್ಯಾನಂದ ಮಹರ್ಷಿಗಳು ತ್ರಿಕಾಲಜ್ಞರಾದರೂ ಸಾಮಾನ್ಯರಂತೆ ಅನುಮಾನ ಸೂಚನೆಯನ್ನೇ ಮಾಡಿದರು. ವಿಚಾರಿಸಿ ನೋಡಿದರೆ ಇದುವೇ ಮಹಾತ್ಮರ ಲಕ್ಷಣವೂ ಆಗಿದೆ. ಅವರಂದಂತೆ ನಮ್ಮೊಡೆಯರು ಇಲ್ಲಿ ಮೋಸಹೊಂದಿರುವದೇ ನಿಶ್ಚಯ. ಆ ನಮ್ಮ ಮುತ್ತಿನಂಥ ಮಹಾರಾಜರನ್ನು ಕ್ಷಣಹೊತ್ತು ಅಗಲಿರುವದು ಕೂಡ ನಮ್ಮೆಲ್ಲರಿಗೆ ಅಸಹ್ಯವೆನಿಸುತ್ತದೆ. ಸತ್ವಶಾಲಿಗಳೂ, ಮೇಲಾಗಿ ದಿವ್ಯಾನಂದರಂಥ ತಪೋಧನರ ಅನುಗ್ರಹಪಾತ್ರರೂ ಆದ ನಮ್ಮ ಮಹಾರಾಜರ ಪ್ರಾಣಕ್ಕೆ ಆವನಿಂದಲೂ ಭಯವಿಲ್ಲವಾದರೂ ಅವರು ಆಪತ್ತಿನಲ್ಲಿ ಇರಬಹುದಾದಾಗ ನಾವಿಂತು ಸುಮ್ಮನಿರುವದು ಹೇಗೆ? ನಾನಾದರೋ ಈ ಮೊದಲು ಒಬ್ಬರಲ್ಲ ಇಬ್ಬರಲ್ಲ ಮೂರು ಜನ ಚಾಲುಕ್ಯ ಚಕ್ರವ

ರ್ತಿಗಳ ಸೇವೆಯಲ್ಲಿಯೇ ಮುಪ್ಪಾದೆನು. ಆದರೆ ಅವರಲ್ಲೆಲ್ಲ ವೀರ ಮಣಿ, ರಾಜಕುಲಚೂಡಾಮಣಿ, ಕರ್ನಾಟಕ ಭಾಗ್ಯಮಣಿಯಾದ ಈ ಪುಲಿಕೇಶಿಮಹಾರಾಜನ ಪಾದಹಿತಕ್ಕಾಗಿ ಪ್ರಾಣವನ್ನು ಈಡಾಡಲು ಮನವು ಯಾವಾಗಲೂ ಹಾತೊರೆಯುತ್ತಲಿದೆ. ಆಹಾ! ನಮ್ಮೊಡೆಯನು ತರುಣನಾದರೂ ಆರ್ಯಭೂಮಾತೆಯ ಹಿರಿಯ ರಾಜನಾಗಿದ್ದಾನೆ. ಈತನು ಅಧಿಕಾರ ಬಲದಲ್ಲಿ ಎಷ್ಟು ದರ್ಪವುಳ್ಳವನೋ ಅಷ್ಟು ತನ್ನ ಜನರಲ್ಲಿ ವಾತ್ಸಲ್ಯವುಳ್ಳವನು; ರಣರಂಗದಲ್ಲಿ ಎಷ್ಟು ಭೀಕರನೋ ಆಡಳಿತದಲ್ಲಿ ಅಷ್ಟು ಶಾಂತನು; ವೈರಿಗಳಿಗೆ ಎಷ್ಟು ಕ್ರೂರನೋ ಶರಣಾಗತರಿಗೆ ಅಷ್ಟು ದಯಾಸಾಗರನು. ಬಹಳವೇನು, ಈತನು ಕೋಟ್ಯಾನುಕೋಟಿ ಪ್ರಜೆಗಳ ಅರಸನಾಗಿದ್ದರೂ, ಆ ಎಲ್ಲ ಪ್ರಜೆಗಳ ದಾಸಾನುದಾಸನಾಗಿದ್ದಾನೆ. ವಿಚಾರಿಸಿ, ನೋಡಿದರೆ ಅರಸನೆಂದರೆ ಇಂಥವನೇ ಅಲ್ಲವೆ?

ಪದ. ರಾ, ಸಾರಂಗ. ತಾ, ತ್ರಿವಟ.(ಧಾಟಿ—ಮತಿಜರೀಪದಿ ದೃಢಿಝಾಲಿ)

ನರಪನಾತ ತವ ಸಾಮ್ರಾಜ್ಯ। ಪರಿಪಾಲಿಪನೇ ಪೊಂದಿ ತೇಜಾ। ಮೆರೆಯಿಸಿ ಕೀರ್ತಿಯನು ಸಾಜ॥ಪ॥

ವೈರಿಜನರಾ। ತರಿವವೀರಾ। ಸಕಲಪ್ರಜರಾ। ಪೊರೆವಚದುರಾ॥ ಜನಹಿತಗೈಯುವ ವ್ರತವನು ಹಿಡಿಯುತ। ನುತಿಯಂ ಪೊಂದೆ ರಾಜ। ಸನ್ನುತಿಯಂ ಪೊಂದೆ ರಾಜ॥೧॥

(ನೋಡಿ) ಬಲರಾಯನು ಬರುತ್ತಿರುವನು. ಆತನಾವ ಸಂಗತಿಯನ್ನು ತಿಳಿದನೋ ನೋಡುವಾ. (ಬಲರಾಯನು ಬರಲು) ಏನು ಸರದಾರರೇ ಏನಾದರೂ ಸುಳಿವು?

ಬಲರಾಯ.—ಸುಳಿವಷ್ಟೇ ಯಾಕೆ? ಸಂಪೂರ್ಣ ಸಮಾಚಾರವೇ ಗೊತ್ತಾಯಿತು.

ರಣಮಲ್ಲ.—ಹೂ ಹೂ!

8

ಬಲರಾಯ.— ಈ ಕಾಡು ಜನರಲ್ಲೊಬ್ಬ ವರುಣನೆಂಬ ಮುಖ್ಯಸ್ಥನಿಹನಂತೆ, ಆತನು ತನ್ನವರೊಡನೆ ಮೊನ್ನಿನ ದಿವಸ ರಾತ್ರಿ ಆವಳೋ ಒಬ್ಬ ರಾಜಪುತ್ರಿಯನ್ನು ಅಪಹರಿಸಿಕೊಂಡು ಹೋಗುವಾಗ ನಮ್ಮ ಮಹಾರಾಜರು ಆ ಅಬಲೆಯ ಸೆರೆಬಿಡಿಸಲು ಒಬ್ಬರೇ ಅವರ ಮೇಲೆ ಬಿದ್ದು ಮೋಸದಿಂದ ಸೆರೆಯಾಳಾಗಿರುವರಂತೆ.

ರಣಮಲ್ಲ.— ನಿಜ ನಿಜ, ಮುನಿವರ್ಯರು ಸೂಚಿಸಿದುದಕ್ಕೂ ಇದಕ್ಕೂ ಸರಿಹೊಂದಿತು. ನಿಶ್ಚಯವಾಗಿ ಮಹಾರಾಜರ ಗೊತ್ತು ಹತ್ತಿದಂತಾಯಿತು. ನೀವು ಈ ಸಂಗತಿಯನ್ನು ಹೇಗೆ ಗೊತ್ತುಹಚ್ಚಿದಿರಿ?

ಬಲರಾಯ.— ವರುಣನ ದುಷ್ಟತನವು ದಿನದಿನಕ್ಕೆ ಹೆಚ್ಚಾದ್ದರಿಂದ ಅವನ ಅನುಯಾಯಿಗಳೇ ಈಗವನಿಂದ ಬೇರೆಯಾಗಹತ್ತಿದ್ದಾರಂತೆ. ಅಂಥವರಲ್ಲೊಬ್ಬನು ನನಗೀ ಸಂಗತಿಯನ್ನು ಹೇಳಿದನು.

ರಣಮಲ್ಲ.— ಸರಿ ಪ್ರಸಂಗ ಬಂದರೆ ಇಂಥವರ ನೆರವು ಕೂಡ ನಮಗೆ ದೊರೆಯುವದು. ಮುಂದೇನು ಆಲೋಚನೆ?

ಬಲರಾಯ.— ನಾಯಕರ ಆಲೋಚನೆಯಂತೆಯೇ ನಾವು ಸಿದ್ಧರು.

ರಣಮಲ್ಲ.— ಹಾಗಾದರೆ ನೀವೀಗ ಬೇಗನೆ ಛಾವಣಿಗೆ ಹೋಗಿ, ಸೇನಾಪತಿಗಳಿಗೆ ಸರ್ವ ಸಂಗತಿಗಳನ್ನು ತಿಳಿಸಿ, ಇನ್ನೂರು ಜನರುಳ್ಳ ಸೈನ್ಯವನ್ನು ಹೊರಡಿಸಿಕೊಂಡು ಬರ್ರಿ.

ಬಲರಾಯ.— ಆಗಲಿ.

ರಣಮಲ್ಲ.— ಯಾಕಂದರೆ ಇವರಳವು ಎಷ್ಟಿದೆಯೋ ಮೊದಲು ನಮಗೆ ತಿಳಿಯದು. ನೀವು ಬರುವ ವರೆಗೆ ನಾನು ಈ ಗಹನಾರಣ್ಯವನ್ನು ಹೇಗೆ ಪ್ರವೇಶಿಸಬಹುದೆಂಬದನ್ನು ನಿರೀಕ್ಷಿಸುತ್ತ ಸಂಚರಿಸುವೆನು. ಆದ್ದರಿಂದ ನೀವು ಕುದುರೆಯನ್ನು ಹತ್ತಿರಿ; ಹೊರಡಿರಿ. (ಬಲರಾಯ ಹೋಗುವನು.) ನೋಡುವಾ ಈ ದುರಾತ್ಮನನ್ನು!

ಹಸಿದ ದನವು, ಹಸರು ಮುರಿಯುವ ಹೊಲವನ್ನು ಹೊಕ್ಕಂತೆ ಇವರ ತಂಡನ್ನು ಹೊಕ್ಕು ತುಂಡರಿಸಿ, ಈ ಪ್ರದೇಶವನ್ನು ನಿಷ್ಕಂಟಕವನ್ನಾಗಿ ಮಾಡುವಾ.

---

೬ ನೇ ನೋಟ.

(ಸೆರೆಮನೆಯ ಭಾಗ. ಮೋಹಿನಿಯು ದುಃಖಿತಳಾಗಿ ಕುಳಿತಿದ್ದಾಳೆ. ತಾರೆಯು ನಿಂತಿದ್ದಾಳೆ.)

ತಾರೆ.— ಮೋಹಿನೀ ನಿನಗೆಷ್ಟು ಹೇಳಲಿ! ನೋಡಬಾರದೇ! ನಿನ್ನ ಮುಖವು ಮ್ಲಾನವಾಗಿದೆ; ಅಂಗಕಾಂತಿಯು ಅಡಗಿ ಹೋಗಿದೆ; ಶರೀರವು ಕೃಶವಾಗಿದೆ; ಮನೋಹರವಾದ ನಿನ್ನ ನೇತ್ರ ಕಮಲಗಳು ಮುರುಟಿವೆ. ಇದರಿಂದ ನನ್ನ ಕರಳು ಕರಗಿಹೋಗಿದೆ ನಮ್ಮವ್ವಾ!

ಮೋ.— ಅಲ್ಲವೇ ದುರಳೆ, ಮರೆಯಲ್ಲಿ ಕೊರಳು ಕೊಯ್ಯುವ ನಿನ್ನ ಈ ಕರಳು ಕರಗುವಿಕೆಗಾಗಿ ನಾನು ಉಪಕಾರವನ್ನು ಸ್ಮರಿಸ ಬೇಡವೇ? ಅಣ್ಣತಂಗಿಯರು ಇಷ್ಟೊಂದು ದುಷ್ಟರಾಗಲಿಕ್ಕೆ ಬ್ರಹ್ಮನು ಆದಾವ ಘಟನೆಗಳ ಯೋಗದಿಂದ ನಿಮ್ಮನ್ನು ನಿರ್ಮಿಸಿರುವನೋ ತಿಳಿ ಯದಾಗಿದೆ.......

ತಾರೆ.— ಮೋಹಿನೀ, ನೀನು ಬೇಕಾದಷ್ಟು ಸಿಟ್ಟಿಗೇಳು. ನಾನು ನಿನಗೆ ಹಿತವನ್ನೇ ಹೇಳುತ್ತೇನೆ. ವ್ಯರ್ಥವಾದ ದುಃಖವನ್ನು ಬಿಟ್ಟು ಮಹಾವೀರನಾದ ನಮ್ಮಣ್ಣನೊಡನೆ ಸುಖದಿಂದಿರು. ಆತನ ವೈಭವಕ್ಕೂ ಕೊರತೆಯಿಲ್ಲ.

[ಹಿಂದೆ, ಗೋಡೆಯ ಒಂಡಿಯನ್ನು ಸರಿಸಿ ಬಂದ ಪುಲಿಕೇಶಿಯು ನೋಡಿ ಅಡಗಿಕೊಳ್ಳುವನು]

ಮೋ.— ಥೂ, ನಿರ್ಲಜ್ಜಳೇ ಇನ್ನೂ ನನಗೆ ಉಪದೇಶವನ್ನು ಮಾಡಲೆಳಸುವೆಯಾ? ಸಾಕು ಮಾಡು ನೀಚಾತ್ಮಳೇ; ನಿನ್ನನ್ನು ನನ್ನ

ಪ್ರಾಣಕ್ಕಿಂತ ಹೆಚ್ಚೆಂದು ತಿಳಿದು ಸಲಹಿದೆನು ಅದನ್ನು ಬಗೆಯದೆ ನನ್ನ ವಿಧೇಯತನದ ಸೋಗು ಹಾಕಿಕೊಂಡು ಕಪಟದಿಂದ ನನ್ನನ್ನು ಘಾಸಿಗೊಳಿಸಿದ ಪಾಪಿಯೇ ಅದಾವ ಮುಖದಿಂದ ನನಗೆ ಹಿತವನ್ನು ಹೇಳಬರುವೆ?

ತಾರೆ.— ಹೌದು, ನಾನೇನನ್ನಾದರೂ ಮಾಡಿದೆನು ಗಯ್ಯಾಳೀ ನಿನ್ನಪಹರಣಕ್ಕೆ! ಆದರೆ ನಿನಗೂ ವಿಷವನ್ನೆರೆಯದೆ ಹಾಲನ್ನೆರೆಯಲೇ ಯತ್ನಿಸಿರುವೆವಲ್ಲವೇ?

ಮೋ.— ಛೀ, ಮೂರ್ಖಳೇ, ಏನು ಬೊಗಳುವೆ? ನಿನ್ನ ಕೈಯಲ್ಲಿದ್ದ ಈ ಅಧಮತನದ ಕಾರ್ಯವನ್ನಷ್ಟು ಮಾಡಿ ನನ್ನ ಸರ್ವ ನಾಶಕ್ಕೆ ಕಾರಣಳಾಗಿ, ಮತ್ತೆ ಹೀಗೆ ನುಡಿಯುವ ನಿನ್ನ ನಾಲಿಗೆಯು ಎರಡು ಸೀಳಾಗಿ ಹೋಗಲಿ!

ತಾರೆ.— ಹೀಗೆಯೇ ನನಗೂ ನನ್ನ ಅಣ್ಣನಿಗೂ ಎಷ್ಟೋ ಜನರು ಶಾಪಗಳನ್ನು ಕೊಟ್ಟು ಕೊಟ್ಟು ದಣಿದು ಹೋಗಿದ್ದಾರೆ ದಣಿದು.

ಮೋ.— ಆ ಎಲ್ಲ ಶಾಪಗಳ ಫಲಿತವನ್ನು ತೀವ್ರವೇ ಭೋಗಿಸಬೇಕಾಗುವದೆಂಬದನ್ನು ಮರೆಯಬೇಡ. ನಿಮ್ಮಂತ್ಯವು ಸಮೀಪಿಸಿರಬಹುದು.

ಪುಲಿ.— (ಸ್ವಗತ) ವಾಹವ್ವಾ! ಈ ರೂಪರಾಶಿಯು ಯಾರಾಗಿರಬಹುದು?

ತಾರೆ.— ಸುಮ್ಮನೆ ಬಡಬಡಿಸಬೇಡ. ನೀನಿನ್ನು ಏನ ಮಾಡಬಲ್ಲೆ? ಹೊಂಡದಲ್ಲಿ ಹಾರಿಕೊಂಡ ನಿನ್ನನ್ನು ನಮ್ಮಣ್ಣನು ಸಾಹಸದಿಂದ ತೆಗೆದುದನ್ನು ಮರೆತೆಯಾ? ನಿನ್ನ ಅತುಲ ರೂಪಕ್ಕೆ ಮೋಹಿತನಾದ ಆತನು ನಿನ್ನನ್ನು ಬಿಡುವನೇ?

ಮೋ.— ಆತನಿಗೆ ನನ್ನ ಎಡಗಾಲ ಧೂಳಿಯಾದರೂ ದೊರೆದೀತೇ?

ಪುಲಿ.— (ಸ್ವಗತ) ಶಾಬಾಸ್ ವೀರಪುತ್ರಿ!

ತಾರೆ.— ಮೋಹಿನೀ ಮರ್ಯಾದೆಯನ್ನು ಮೀರಬೇಡ. ಹೆಂಗಸಾದ ನೀನೆಲ್ಲಿ? ಮಹಾವೀರನಾದ ನನ್ನಣ್ಣನೆಲ್ಲಿ? ಆತನ ತಂತ್ರದಿಂದ ನಿನ್ನ ತಂದೆ ಪ್ರತಾಪರಾಯನು, ಪುಲಿಕೇಶಿಯೇ ನಿನ್ನನ್ನು ಎತ್ತಿ ಒಯ್ದನೆಂಬ ಕಲ್ಪನೆಯುಳ್ಳವನಾಗಿ ಒದ್ದಾಡಿ ಮಣ್ಣು ಮುಕ್ಕುತ್ತಿರುವನು. ನಿನ್ನ ಪುಲಿಕೇಶಿಯಂತೂ ಸೆರೆಸಿಕ್ಕು ನೆರೆಯ ನೆಲಮನೆಯಲ್ಲಿ ಕೊಳೆಯುತ್ತಿರುವನು. ಇನ್ನಾರು ನಿನ್ನ ಕಾಪಾಡುವವರು?

ಪುಲಿ.— (ಸ್ವಗತ) ಏನು ಇವಳು ಪ್ರತಾಪರಾಯನ ಮಗಳೇ? ಸೆರೆಮನೆಯಲ್ಲಿ ಸಮ್ಮೇಲನವೇ?

ಮೋ.— ದೀನ ರಕ್ಷಕ ದೇವನು, ಸೆರೆಯಲ್ಲಿರುವ ಬಲಶಾಲಿಗಳಾದ ಚಾಲುಕ್ಯಭೂಪರಿಗೆ ಅದಾವ ಅನುಕೂಲತೆಯನ್ನು ಒದಗಿಸಿಕೊಡುವನೋ ಯಾರುಬಲ್ಲರು? ನನ್ನ ಮಾನದಭಿಮಾನವಿದ್ದರೆ ಆ ಮಹಾರಾಜನೇ ಏಕೆ ನನ್ನ ಸೆರೆ ಬಿಡಿಸಬಾರದು?

ಪುಲಿ.—(ಪುಟಿದು) ಆಹಾ ಇನ್ನೆಂತು ತಡೆಯುವೆನು? (ಮುಂದೆ ಬಂದು) ಇಗೋ ಮೋಹಿನೀ ನಾನೇ ನಿನ್ನ ಸೆರೆಬಿಡಿಸುವೆನು. ನಿನ್ನ ಸೆರೆಬಿಡಿಸುವದಕ್ಕಾಗಿಯೇ ನಾನು ಸೆರೆಯಾಗಿದ್ದೇನೆ. ನೀನು ನಿಶ್ಚಿಂತಳಾಗು. (ಮೋಹಿನಿ ಲಜ್ಜಿತಳಾಗಿ ನಿಲ್ಲುವಳು. ತಾರೆ ಗಾಬರಿಯಿಂದ ಹೋಗಹತ್ತುವಳು.) ಛೀ, ಅಧಮಳೆ ಎಲ್ಲಿ ಹೋಗುವೆ ನಿಲ್ಲು. (ತಡೆಯಲು ತಿರುಗುವಳು.) ದೇವೀ ಕಟ್ಟಿವಳ ಕೈಕಾಲುಗಳನ್ನು!

ಮೋ.— (ಲಜ್ಜೆಯನ್ನು ನಟಿಸುವಳು.)

ಪುಲಿ.— ಹೂ, ಮೊದಲಿವಳನ್ನು ಬಂಧಿಸು. ನೀಚಳು ಕೃತಕರ್ಮದ ಫಲವನ್ನು ಭೋಗಿಸಲಿ! (ಮೋಹಿನಿಯು ಕಟ್ಟಿ ಆತ್ತ ಎಳೆದೊಗೆಯುವಳು.) ರಾಜಪುತ್ರೀ ನಿನ್ನ ಆಪತ್ತು ದೂರಾಯಿತೆಂದು ತಿಳಿ. ಇನ್ನು ನಿನ್ನ ಕೂದಲು ಸಹ ಕೊಂಕಲಿಕ್ಕಿಲ್ಲ!

ಮೋ.— ನನ್ನ ಜೀವತನುಮಾನಗಳನ್ನೇ ಮಹಾರಾಜರ ಚರಣ ತಲದಲ್ಲಿ ಅರ್ಪಿಸಿರುವಾಗ ನನಗೆ ಆಪತ್ತಿನ ಭಯವೆಲ್ಲಿಯದು?

ಪುಲಿ.— ಇದೇನು ಲಲನೆ? ಒಮ್ಮಿಂದೊಮ್ಮೆ ಎಂಥ ಸಾಹಸ ವನ್ನು ನುಡಿಯುವೆ!

ಮೋ.— (ನಸು ನಗೆ) ಮಹಾರಾಜ, ಲೋಹವು ಸೂಜಿಗಲ್ಲಿ ನಿಂದಲೇ ಆಕರ್ಷಿಸಲ್ಪಟ್ಟ ಅದನ್ನೇ ಆಶ್ರಯಿಸುವದಲ್ಲದೆ ಕಾಡುಗಲ್ಲನ್ನು ಆಶ್ರಯಿಸುವದೇ?

ಪುಲಿ.— ಅದಕ್ಕಂತೇ ಇಂಥ ಸಂಕಟಗಳೇ?

ಮೋ.— (ಗಾಬರಿಯಿಂದ) ಅಗೋ, ಬಾಗಿಲು ಬಡಿದ ಸಪ್ಪಳ ವಾಗುವದು, ಆ ದುಷ್ಟ ವರುಣನು ಬರುವಂತೆ ಕಾಣುತ್ತದೆ.

ಪುಲಿ.— ವರುಣನೆಂದರೆ ಆ ಕಾಡುಜನರ ಮುಖ್ಯಸ್ಥನೇ ಅಲ್ಲವೆ? ಬರಲಿ! ಆತನಹೆಸರೂ ಚರಿತ್ರವೂ ಬೇರೆಯಾಗಿಯೇ ಇದೆ. ಆತನ ಸಮಾಚಾರವನ್ನು ಚೆನ್ನಾಗಿ ತೆಗೆದುಕೊಳ್ಳುವೆನು.

ಮೋ.— ಅದು ಹೇಗೆ? ನೀವು ನಿಃಶಸ್ತ್ರರಾಗಿರುವಿರಿ?

ಪುಲಿ.— ಆದರೂ ಚಿಂತೆಯಿಲ್ಲ. ಯುಕ್ತಿಯಿಂದಲೇ ಹೆಡಮು ರಿಗೆ ಕಟ್ಟುವೆನು. ನೀನು ಭಯ ಪಡಬೇಡ. ಬಾಗಿಲು ತೆಗೆದು ಅವ ನನ್ನು ಬರಮಾಡು. ಮೊದಲು ನಾನು ಇಲ್ಲಿ ತುಸು ಅಡಗಿಕೊಳ್ಳು ತ್ತೇನೆ. ಆ ಮೇಲೆ ಮುಂದಿನ ಚಮತ್ಕಾರವನ್ನು ನೋಡು.

(ಹಾಗೇ ಮಾಡುವರು. ವರುಣನು ಬರುವನು. ಮೋಹಿನಿಯು ಉಕ್ಕುವನಗೆ ಯನ್ನು ತಡೆಯುತ್ತ ತಲೆಬಾಗಿ ನಿಲ್ಲುವಳು)

ವರುಣ.— ಏನು ಮೋಹಿನೀ ತಾರೆಯೆಲ್ಲಿ? (ನೋಡಿ) ಓಹೋ ಏನಾಶ್ಚರ್ಯವಿದು? ಬಹಳ ದಿವಸಗಳಿಂದ ಮೇಘವು ಮುಚ್ಚಿದ ನಿನ್ನ ಮುಖಚಂದ್ರವು ಇಂದು ಬೆಳಗಿ ಕಂಗೊಳಿಸುವದಲ್ಲ! ಈ ಆನಂದದ ಸುದ್ದಿಯನ್ನು ನನಗೆ ಹೇಳುವವಕ್ಕಾಗಿಯೇ ತಾರೆಯು ಹೋದಳೇನು?

ಸರಿ ಸರಿ, ಹಾಗೆಯೇ ಆದಂತೆ ಕಾಣುತ್ತದೆ. ಆದರೆ ನನ್ನನ್ನು ಹುಡು ಕುತ್ತ ಅವಳು ಎತ್ತ ಹೋದಳೋ ಏನೋ? ಎಲ್ಲಿಗಾದರೂ ಹೋಗ ಲೊಲ್ಲಳೇಕೆ? ದೇವೀ ಇಂದು ನಿನ್ನ ಪ್ರಫುಲ್ಲಿತವಾದ ಮುಖವನ್ನು ನೋಡಿ ನನಗೆ ಎಷ್ಟೋ ಆನಂದವಾಗಿದೆ. ನೀನು ವ್ಯರ್ಥವಾದ ದುಃಖ ವನ್ನೆಲ್ಲ ಬಿಟ್ಟಂತೆ ತೋರುತ್ತದೆ. ಅದೂ ನಿಜವೇ! ಆ ಗತಿಗೇಡಿ ಪುಲಿಕೇಶಿಯ ಹಾಳು ಹಂಬಲವನ್ನು ಹಿಡಿದಾದರೂ ಏನು ಫಲ? ಅದೇಕೆ ಮೋಹಿನೀ ಪುಲಿಕೇಶಿಯನ್ನು ನಿನ್ನಿನ ದಿವಸ ಸೆರೆಹಿಡಿದು ತಂದದ್ದು ನಿನಗೆ ಗೊತ್ತಿಲ್ಲವೇ? ಆತನು ತನ್ನ ಕೃತಕರ್ಮದ ಫಲವ ನ್ನುಣ್ಣುತ್ತ ಈ ಮುಗ್ಗಲಿನ ನೆಲಮನೆಯಲ್ಲಿ ಬಿದ್ದಿರುವನು. ನಾಳೆಯೇ ಆತನ ಅವಸ್ಥೆಯು ಏನಾಗುವದೆಂಬದನ್ನು ನೋಡು.

ಮೋ.— (ಸ್ವಗತ) ಈಗ ಮೊದಲು ನಿನ್ನ ಅವಸ್ಥೆ ಏನಾಗುವದು ನೋಡು ಮೂರ್ಖಾ.

(ನಗೆಯನ್ನು ತಡೆದು ಸೆರಗು ಎಳೆದು ಹೊದ್ದು ಮುಖ ತಿರುವುವಳು.)

ವರುಣ (ನೋಡಿ ಆನಂದದಿಂದ).— ಯಾಕೆ ಮನೋಹರಿ ಮಾತಾಡದಿರುವೆ? ಲಜ್ಜೆಯಾವರಿಸಿತೇನು? ಸರಸವಾದ ಪ್ರೇಮದಲ್ಲಿ ಲಜ್ಜೆಯೊಂದು ಅಡ್ಡಗೋಡೆಯೇ ಸರಿ. ಹೂ, ಮಾತಾಡು.

ಮೋ.— (ಬಲಗೈಯಿಂದ ಬಾಯಿ ಮುಚ್ಚಿ ತಡೆದು, ಎಡಗೈ ಹಿಂದೆ ಚಾಚಿ ಮಾತಿಲ್ಲೆಂಬ ಸಂಜ್ಞೆ ಮಾಡುವಳು)

ವರುಣ.— ವಾಹವ್ವಾ, ಇದೇನು ಪ್ರಣಯಪ್ರೇಮದ ಬಿಂಕಪ್ಪ ಹ ಹ ಹ ಹ ಬಿಡು ನಾವೂ ಮಾತಾಡುವದಿಲ್ಲ. ನಮ್ಮ ಮಾತುಗ ಳೇನು ಹಾಗೆಯೇ ಏನು? ಹ, ಹ, ಹ, ಹ! (ಆಸಕ್ತಿಯಿಂದ ನೋಡು ವನು ಮತ್ತು)

(ಅಸಂಬದ್ಧವಾದ ರಾಗದಿಂದ)

ಯಾಕೆ ಮೋಹಿನಿ ಮಾತಾಡದಿರುವೇ। ಸಾಕು ಬಿಡು ನಿನ ಮುನಿಸನು ತಾಪವ॥ ಯಾಕೆ……

(ಎಂದು ಗುಣು ಗುಣು ಹಾಡುತ್ತ ಲಟಕಿಬಾಳಿಸುತ್ತ, ಬರುವನು. ಪುಲಿಕೇಶಿ ಎದ್ದು ಮೆಲ್ಲನೆಬಂದು ಅವುಚಿ ಹಿಡಿದು ಖಡ್ಗ ಕಸಿಯಲು ಒದ್ದಾಡುವನು. ಇವನು ಗುದ್ದುವನು.)

ವರುಣ.— (ಗಾಬರಿ) ಎಲಾ ಯಾರಿರುವಿರೋ?

ಪುಲಿ.— ಇನ್ನಾರಿರುವರು? ನಿನ್ನ ಪಾಲಿಗೆ ಅಂತಕನೇ ಇರುವನು.

(ಕೆಡವಿ ಆತನ ಮುಂಡಾಸದಿಂದ ಬಿಗಿಯುವನು.)

ವರುಣ.— ಅಯ್ಯೋ ನನ್ನ ಮುಂಡಾಸವೇ ನನ್ನ ಕೈಕಟ್ಟುವದೇ?

ಪುಲಿ.— ಪಾಪಾತ್ಮ, ಬಹಿರಂಗದಲ್ಲಿರುವ ನಿನ್ನ ಮುಂಡಾಸವೇ ಏಕೆ? ಅಂತರಂಗದಲ್ಲಿರುವ ನಿನ್ನ ದುರ್ಗುಣಗಳೇ ಒಂದುಗೂಡಿ ನಿನ್ನನ್ನು ಬಂಧಿಸುತ್ತಲಿವೆ. (ಒದ್ದಾಡುವನು; ಗುದ್ದುವನು; ಕಟ್ಟಿ ನಿಂತು) ಅಥವಾ, ಜಗತ್ತೆಂಬ ಹೊಲದಲ್ಲಿ ಸದ್ಧರ್ಮದ ಬೆಳೆಗೆ ನಿಮ್ಮಂತಹರು ಕಸವಾಗಿರುವಿರಿ. ನಿಮ್ಮನ್ನು ನಾಶಮಾಡಿ ಪ್ರಪಂಚವನ್ನು ಹಸನಾಗಿಡುವದೇ ಧರ್ಮವೃದ್ಧಿಗೆ ಸಾಧನವು. ಭೋಗಿಸು ಮೂರ್ಖಾ ನಿನ್ನ ಕೃತಕರ್ಮದ ಫಲವನ್ನು! ನಿನ್ನೆ ನೀನು ನನಗೆ ಕೊಟ್ಟ ಸಾಮ್ರಾಜ್ಯದ ಸುಖವನ್ನು ಇನ್ನು ನೀನು ಅನುಭವಿಸು! (ಎನ್ನುತ್ತ ಎತ್ತಿ ಹಿಂದಿನ ನೆಲಮನೆಯಲ್ಲಿ ಚೆಲ್ಲಿ ನಿಲ್ಲುವನು. ಪ್ರಣಯ ದೃಷ್ಟಿ ಮೀಲನ.)

ಮೋ.— ಮಹಾಪ್ರಭು, ಸಂಪೂರ್ಣವಾಗಿ ತಮ್ಮಾಧೀನವಾದ ಈ ದಾಸಿಯನ್ನು ಇನ್ನೂ ಏಕೆ ಸ್ವೀಕರಿಸುವದಿಲ್ಲ?

ಪುಲಿ.— ಆಗಲಿ, ನಿನ್ನಭೀಷ್ಟವು ನೆರವೇರಲಿ! (ಮೋಹಿನಿಯು ಆತುರದ ಆಲಿಂಗನ)

ಮೋ.— ಮಹೇಶ್ವರಾ ಕೊನೆಗೆ ನನ್ನ ಮೊರೆ ಕೇಳಿದೆ.

ಪದ. ರಾ। ಧಾನಿಸೀಲು; ತಾ। ದಾದರಾ. ಧಾಟಿ: ಭಾಸಮುಲಾ ಜಾಹಲಾ ಪಹಾತಾ

ದೇವ ದಯಾಸಾಗರಾ। ದೇವವಿನುತ ಶಂಕರಾ॥ ಭೋವಿಭೋ ಶಿವೇಶಾ। ಪಾವನಾತ್ಮ ಗಿರಿಶಾ॥ ಕಾಯುವೆನೀಂ ಲೋಕೇಶಾ। ಕರುಣದಲಿ ಈಶಾ ಮಹೇಶಾ ॥ಪಲ್ಲ॥

ದೀನನಾಥ ನಿನ್ನ ನೆನಹು। ಮಾನವರ್ಗೆ ಸುಖವೀವುದು। ಕಾಣಲೆಂತು ನಿನ್ನ ಮಹಿಮ। ಸೂನಜನರು ಶುಭಕರಾ। ದಯಾಕರಾ॥

ಪುಲಿ.— ಪ್ರಿಯೆ, ಹರ್ಷರೊಡನೆ ಈಗೊದಗಿದ ಮಹಾಯುದ್ಧದ ಪ್ರಸಕ್ತಿಯು ಮುಗಿಯುವ ವರೆಗೆ, ನಾನು ವಿಷಯ ಲೋಲುಪತೆಯನ್ನಾಗಲಿ, ಬೇರೆ ಕಾರ್ಯಗಳನ್ನಾಗಲಿ ಅನುಸರಿಸುವಂತಿಲ್ಲ. ಆದ್ದರಿಂದ ನಿನ್ನ ಸುರಕ್ಷಿತೆಗಾಗಿ ನಿನ್ನನ್ನು ಉಜ್ಜಯಿನಿಗೆ ಕಳಿಸಬೇಕೋ ಅಥವಾ ಬೇರೆ ಯಾವದಾದರೊಂದು ಸ್ಥಳವನ್ನು ಅಪೇಕ್ಷಿಸುವೆಯೋ ಹೇಳು.

ಮೋ.— ಬೇಡಬೇಡಿರಿ. ನನ್ನನ್ನು ಎಲ್ಲಿಗೂ ಕಳಿಸಬೇಡಿರಿ. ನಾನೂ ಪ್ರತಿಜ್ಞೆಯನ್ನು ಮಾಡುತ್ತೇನೆ ಕೇಳಿರಿ. ಯುದ್ಧದ ಪ್ರಸಂಗವು ಮುಗಿದು ಜಯಮಾಲೆಯು ತಮ್ಮ ಕೊರಳಿಗೆ ಬೀಳುವ ವರೆಗೆ ರಣರಂಗದಲ್ಲಿ ಕೂಡ ತಮಗೆ ಸಹಾಯಕಳಾಗಿರುವೆನೇ ಹೊರತು ವಿಲಾಸವನ್ನು ತಿಲಮಾತ್ರವೂ ಅಪೇಕ್ಷಿಸಲಿಕ್ಕಿಲ್ಲ.

ಪುಲಿ.— ಛೀ ಛೀ, ಕೋಮಲ ಶರೀರಿಯಾದ ಅಬಲೆಯು; ನಿನಗೆ ಇಂಥ ಸಾಹಸವೇಕೆ?

ಮೋ.— ಏನು ನಾನು ಅಬಲೆಯೇ? ಬಲಶಾಲಿಯ ಪತ್ನಿಯಾದ ನಾನು ಬಲಹೀನಳೇ? ಮಹಾರಾಜ! ವೀರಪುತ್ರಿಯು ನಾನಲ್ಲವೇ? ಕನ್ನಡ ನಾಡಿನೊಡೆಯನ ತೊಡೆಯನೇರುವ ನಾನು ವೀರಪತ್ನಿಯಲ್ಲವೇ? ವೀರಪತಿಯ ಅರ್ಧಾಂಗಿಯಾಗುವ ನಾನು ಪತಿಯ ವೀರತ್ವವನ್ನು ವೃದ್ಧಿಗೊಳಿಸುತ್ತ ಆತನ ನೆರವಿಗಿರುವುದು ನನ್ನ ಧರ್ಮ

ವಲ್ಲವೇ? ಪ್ರಭು ತಿರಸ್ಕರಿಸದೆ ನನಗಿಷ್ಟು ಅನುಗ್ರಹಿಸಬೇಕು. (ತಲೆ ವಾಗುವಳು.)

ಪುಲಿ.— ಆಗಲಿ! ಮೋಹಿನೀ ನಿನ್ನ ವಿರೋತ್ತೇಜಕ ಮಾತುಗಳಿಂದ ನನ್ನ ಉತ್ಸಾಹವು ಇಮ್ಮಡಿಸುತ್ತದೆ. ನಿನ್ನ ಇಚ್ಛೆಯಂತೆ ಆಗಲಿ!

ಮೋ.— ಅಹಾ! ನಾನು ಧನ್ಯಳು!! ಮಹಾರಾಜ ಯುದ್ಧವು ತೊಡಕಿನದಾಗಿದೆ. ನನ್ನ ತಂದೆ ಪ್ರತಾಪರಾಯರು ಹರ್ಷರೊಡನೆ ಕೂಡಿರುವರಂತೆ. ಮೊದಲು ಹರ್ಷರು ಉಜ್ಜಯಿನಿಯ ಮೇಲೆ ದಂಡೆತ್ತಿ ಬಂದಾಗ ಅವರು ನಿಮ್ಮ ಸಹಾಯವನ್ನು ಬಯಸಿ ಹೇಳಿ ಕಳುಹಿದರು. ತಾವು ಉಪೇಕ್ಷಿಸಿದುದೇಕೆ?

ಪುಲಿ.— ಅವರು ಹೇಳಿಕಳುಹಿದ ಯಾವ ಸಂಗತಿಯೂ ನಮಗೆ ತಿಳಿದಿಲ್ಲ.

ಮೋ.— ನಿಜ, ಹಾಗಾದರೆ ಈ ದುರಾತ್ಮರೇ ಆ ಸುದ್ದಿಯು ನಿಮಗೆ ತಿಳಿಯದಂತೆ ಮಾಡಿದ್ದಾರೆ. ಮತ್ತು ಮುಂದೆ ನನ್ನ ತಂದೆಯ ಮನಸ್ಸಿನಲ್ಲಿ ನನ್ನಪಹಾರನೆವದಿಂದ ದ್ವೇಷವನ್ನುತ್ಪನ್ನಮಾಡಿದ್ದಾರೆ. ಅದರಿಂದ ಮಾಳವರು ಹರ್ಷರೊಡನೆ ಕೂಡಿದರು.

ಪುಲಿ.— ಹಾಗಾದರಿನ್ನು ನಾವು ನಿಮ್ಮ ತಂದೆಯೊಡನೆಯೂ ಯುದ್ಧಮಾಡಬೇಕಾಗುತ್ತದೆ. ಇದು ಹೇಗೆ, ನಿನ್ನ ಮನಸ್ಸಿಗೆ ಬರುವದೇ?

ಮೋ.— ಅದು ಸಹಜವೇ ಇದೆ. ಅದಕ್ಕೇನು ಮಾಡುವದು? ನಡೆಯತಕ್ಕದ್ದು ನಡೆದೇ ತೀರುವದು. ಆದರೂ ರಣಭೂಮಿಯಲ್ಲಿ ನನ್ನ ತಂದೆಯವರ ಸಮಾಚಾರವನ್ನು ನಾನೇ ತೆಗೆದುಕೊಳ್ಳುವೆನು.

ಪುಲಿ.— ಆಗಬಹುದು ಹಾಗಾದರೆ ಇನ್ನು ಹೋಗುವಾ, ಈ ದುಷ್ಟರು ಹೊರಗೆ ತಂದು ಕಟ್ಟಿದ ನನ್ನ ಕುದುರೆಯು ಇರಬಹುದು, ನೋಡಿ ಬರುತ್ತೇನೆ.

ಮೊ.— (ಕೇಳಿ) ತಡೆಯಿರಿ ಹೊರಗೆ ಕೋಲಾಹಲ ಕೇಳು ತ್ತದೆ.

ತೆರೆ.— ಜಯ ಚಾಲುಕ್ಯ ಸಾರ್ವಭೌಮ!

ಪುಲಿ.— ನನ್ನ ಜಯಜಯಕಾರವು. ಆದಾರವರು? (ರಣಮ ಲ್ಲಾದಿಗಳು ಬರುವರು.) ಓಹೋ ನನ್ನ ವೀರಸರದಾರರು!

ರಣಮಲ್ಲ.— ಮಹಾರಾಜರೆ. ಆ ದುರುಳನೆಲ್ಲಿ ತೋರಿರಿ!

ಪುಲಿ.— ರಣಮಲ್ಲನಾಯಕಾ (ಭುಜದ ಮೇಲೆ ಕೈಯಿಟ್ಟು) ನಿಮ್ಮಂಥ ವೀರರ ಸಹಾನುಭೂತಿಯ ಬಲದಿಂದ ನಾನು ಈ ನೊದಲೇ ಈ ದುಷ್ಟನನ್ನು ಹೆಡಮುರಿಗೆ ಕಟ್ಟಿ ಚಲ್ಲಿ ನಿಷ್ಕಂಟಕನಾಗಿದ್ದೇನೆ. ಈತನು ಆ ದುಷ್ಟ ದುರ್ಜಯನು.

ರಣಮಲ್ಲ.— ಏನು ಪ್ರಭು, ಈತನು ನಮ್ಮ ಹಿರಿಯ ಮಹಾ ರಾಜರ ಮೇಲೆ ಕೈಮಾಡಿದ ದುರ್ಜಯನೇ?

ಪುಲಿ.— ಅಹುದಹುದು. ಆತನೇ ಇಲ್ಲಿ ವರುಣನೆಂಬ ಹೆಸ ರಿನಿಂದ ನಮ್ಮನ್ನು ಕಾಡಲು ಹೊಂಚುಹಾಕಿರುವನು.

ರಣಮಲ್ಲ.— ನೀಚ, ಆಯುಷ್ಯದಲ್ಲೆಲ್ಲವೂ ನೀಚತನವನ್ನೇ ಆಚರಿಸಬೇಕೆಂದಿರುವೆಯೋ?

ಪುಲಿ.— ಈತನು ಉಜ್ಜಯಿನಿಯ ಈ ರಾಜಪುತ್ರಿಯನ್ನು ಅಪಹ ರಿಸಿಕೊಂಡು ಬರುತ್ತಿರುವಾಗ ಇವಳ ಆರ್ತಸ್ವರವನ್ನು ಕೇಳಿ ನಿನ್ನಿನ ರಾತ್ರಿ ನಾನು ಈ ಜನರ ಮೇಲೆ ಬಿದ್ದು ಇವರ ಬಲೆಗೆ ಸಿಕ್ಕುಬಿ ದ್ದೆನು. ಕೊನೆಗೆ ಇದೀಗ ಹೇಳಿದಂತೆ ಈಗ ಈಕೆಯನ್ನು ಸೆರೆಬಿಡಿಸಿ ದ್ದೇನೆ. ರಣಮಲ್ಲನಾಯಕಾ ನಿನಗಾವುದನ್ನು ತಿಳಿಸದಿರುವೆನು? ಇದೋ ಇವಳು ಇನ್ನು ನಿನ್ನ ಒಡೆಯಳು. (ಆನಂದ)

ರಣಮಲ್ಲ.— ಹೀಗೇನು ಮಹಾಪ್ರಭು; ವಾಹವ್ವಾ! (ಕುಣಿ ದಾಡಿ ವಿನೋದದಿಂದ) ಅಮ್ಮನವರೇ ತಾವು ನಮ್ಮ ಮಹಾರಾಣಿ ಯವರು!

ಮೋ.— ಅಪ್ಪಾ ಏನನ್ನಾದರೂ ಅನ್ನು, ನಾನೊಬ್ಬಳು ನಿಮ್ಮೊಡೆಯರ ಪಾದಸೇವಕಳು.

ರಣಮಲ್ಲ.— ಎಲೈ ವೀರರೇ ಮಹಾರಾಜ್ಞಿಯವರಿಗೆ ಅಭಿವಂದಿಸತಕ್ಕದ್ದು. ಹೂ, ಒಂದು, (ಸಾಲಾಗಿ ನಿಲ್ಲುವರು;) ಎರಡು, (ಖಡ್ಗಕ್ಕೆಕೈ); ಮೂರು, (ಖಡ್ಗಹಿರಿದು ನಮಿಸುವರು.)

ಎಲ್ಲರು.— ಜಯ ಚಾಲುಕ್ಯಸಾರ್ವಭೌಮ, ಜಯ ಕರ್ನಾಟಕ ಭೂಮಾತೆ!!

ಪುಲಿ.— ವೀರರೇ ನಡೆಯಿರಿನ್ನು (ತಿರುಗಿ) ಈ ದುರ್ಜಯನನ್ನೂ ಹಿಡಿದುಕೊಂಡು ನಡೆಯಿರಿ. ನ್ಯಾಯಾಸನದ ಮುಂದೆ ಆತನ ವಿಚಾರಣೆಯನ್ನು ಮಾಡೋಣ

ರಣ.— ಆಗಲಿ. (ನಡೆಯುವರು.) (ತೆರೆ)



ಅಂಕ ೪.

೧ನೇ ನೋಟ.

(ಯೋಧರ ವೇಷದ, ರಣಮಲ್ಲನಾಯಕನ ಮಗನು, ಛಾವಣಿಯ ಭಾಗದಲ್ಲಿ ಒರುವನು.)

ಬಾಲಕ.— ಅಮ್ಮನ ಕೇಳಿದೆನು, ಆಶೀರ್ವಾದ ಮಾಡಿದಳು ಹೊರಟು ಬಿಟ್ಟೆನು; ಇನ್ನೂ ಎಷ್ಟು ದಿವಸ ನಾನು ಸಣ್ಣವನು? ಆಂ, ಇನ್ನೂ ಎಷ್ಟು ದಿವಸ ನಾನು ಸಣ್ಣವನು? ಅಮ್ಮನ ಕೇಳಿದೆನು ಆಶೀರ್ವಾದ ಮಾಡಿದಳು ಹೊರಟು ಬಿಟ್ಟೆನು. ಅಪ್ಪನೇನೋ ನಾನು ಸಣ್ಣವನೆಂದು ತಿಳಿದಿರುವನು. ಆದರೆ ಅಪ್ಪನ ಮೀಸೆ ಬೆಳ್ಳಗಾದರೂ ನಾನು ಸಣ್ಣವನಾಗಿ ಮನೆಯಲ್ಲಿಯೇ ಇರಬೇಕೇನು? ಹಾಗಾದರೆ ನನ್ನನ್ನು ಗಂಡುಮಗುವೆಂದೇಕೆ ಕರೆದರು? ಮದಾಂಧನೊಬ್ಬನು ನನ್ನ ನಾಡಗುಡಿಯನ್ನು ಕಿತ್ತೊಗೆದನಂತೆ! ಅದಾವನವನು? ನಾನಿದ್ದರೆ ಒಂದೇ ಸಲಕ್ಕೆ ಆತನನ್ನು ತುಂಡರಿಸುತ್ತಿದ್ದೆನು. ಆತನಿಗೆ ಆತನದು ಹೇಗೋ ಹಾಗೆ, ನನಗೆ ನನ್ನ ರಾಷ್ಟ್ರಪತಾಕೆಯು ಪೂಜ್ಯವು. ಈ ರಾಷ್ಟ್ರಧ್ವಜಕ್ಕಾಗಿಯೇ ನನ್ನ ಹಿರಿಯರು ಹಲವು ಸಾರೆ ರಕ್ತಸುರಿಸಿದ್ದಾರೆ. ಈಗಿದನ್ನು ಅಪಮಾನಪಡಿಸಿದ್ದರೂ ಅದರ ಸೇಡು ತೀರಿಸದೆ ಸುಮ್ಮನಿರುವುದೇ?

ತೆರೆ.— ವೀರಬಾಲಕಾ, ನಿನಗೆ ವಿಜಯವಾಗಲಿ! ವಿಜಯವಾಗಲಿ!!

ಬಾಲಕ.— (ಹೊರಳಿ ಹೊರಳಿ ನೋಡಿ) ಆದಾರು ನನ್ನನ್ನು ಆಶೀರ್ವದಿಸಿದವರು? ಆಂ, ಇಲ್ಲಿಯಾರೂ ಇಲ್ಲವಲ್ಲ. ಹಾಗಾದರೆ ಈ ಆರ್ಯಭೂಮಾತೆಯೇ ನನ್ನನ್ನು ಇಂತು ಹರಸಿದಳೇ? ಹರಸಲಿ! ಈ ನೆಲದಮ್ಮನೇ ನನ್ನನ್ನು ಇಂತು ಹರಸಲಿ!! ಬೇರೆ

ಯಾರೂ ಇಲ್ಲಿ ಇರಲೇ ಬೇಡ. (ಮೊಣಕಾಲೂರಿ ಕೈಜೋಡಿಸಿ) ಜನನಿ, ಕನ್ನಡ ನಾಡತಾಯಿಯೇ, ನಿನ್ನೊಳು ಬೆಳೆದ ಧವಸಧಾನ್ಯ ಗಳ ತಿಂದು, ನಿನ್ನೊಳು ಹರಿಯುವ ನೀರನು ಕುಡಿದು, ನಿನ್ನೊಳು ಚಲಿಸುವ ಹವೆಯನು ಸೇವಿಸಿ, ಕೊಬ್ಬಿ ಬೆಳೆದ ನಾನು, ಇದೋ ಕೈಮುಗಿದು ಬೇಡಿಕೊಳ್ಳುತ್ತೇನೆ. ತಾಯೇ ಈ ನಿನ್ನ ಋಣವನ್ನು ತೀರಿಸುವ ಬಲವನ್ನು ಕೊಡು. ನಿನಗೆ ಅನಂತ ನಮಸ್ಕಾರ. (ನಮಿಸುತ್ತ ಏಳುವನು.)

ಪದ ರಾ॥ ಸಾರಂಗ ತಾ॥ ಧಾಟಿ, ಪ್ರಿಯಹಿಂದ ರಾಷ್ಟ್ರಝೇಂಡ್ಯಾ

ಮಮಪ್ರೀಯ ನಾಡಗುಡಿಯಾ। ಸನ್ಮಾನವ ಗಳಿಸುವೆನೋ॥
ನನಗೀ ಜನ್ಮವ ನಿತ್ತಿಹಮಾತಾ। ಕರುನಾಡಿಸದಾ ರಾಷ್ಟ್ರಧ್ವಜವಾ ಬೆಳಿಸುವೆನೋ॥
ಕಲಿತನದಿಂಪಲಿ ಕಾದಿದ ವೀರರ। ಹುರುಪಿನಕುರುಹಾನಾಡಗುಡಿಯಾ। ನಮಿಸುವೆನೋ॥
ತನ್ನಯ ಸತ್ವವನುಣಿಸಿದ ವಸುಧೆಯ। ಮಂಗಲಸೂತ್ರದ ನಾಡಗುಡಿಯಾ। ಸಲಹುವೆನೊ॥

(ರಣದುಂದುಭಿಯು ಕೇಳುವದು.) ಓಹೋ, ರಣದೇವತೆಯು ರಣದುಂದುಭಿಗಳಿಂದ ನನ್ನನ್ನು ಕರೆಯುವಳು. ಇದೋ ಚಾಲುಕ್ಯ ಸೈನ್ಯವು ಸನ್ನದ್ಧವಾಗಿ ಸಾಗುತ್ತಲಿರುವದು. ಇನ್ನು ಅನುಮಾನವೇಕೆ? ನಡೆ ನೋಡುವಾ ವೈರಿ ಬಲವನು। ಜಯ ಕರ್ನಾಟಕ ಭೂಮಾತೆ!

(ಖಡ್ಗ ಹಿಡಿದು ಜಿಗಿಯುವನು. ಹಿಂದಿನಿಂದ ಹುವೆನ್‌ತ್ಸಾಂಗನು ಬರುವನು.)

ಹುವೆನ್‌ತ್ಸಾಂಗ.— ಈ ಚಣ್ಣ ಬಾಲಕನಲ್ಲೇ ಇಷ್ಟು ಅಭಿಮಾನ ಶೂರತನ ಇದೆ. ಆ ದಡ್ಡವರದೇನು ಕೇಳಬೇಕಯ್ಯಾ? ದೂರ ದೇಶದಿಂದ ಬಂದ ನಾನು ಈ ಭಾರತ ಖಂಡವನ್ನೆಲ್ಲ ತಿರುಗಿ

ನೋಡ್ಡೆನು; ಈಗಲೋ ಕನ್ನಡಿಗರೇ ಬಲಯುವುಳ್ಳವರು. ಪುಲಿಕೇಶಿ ರಾಜ್ಯದಂತ ರಾಜ್ಯವೇ ಇರಲಿಲ್ಲ. ಈ ರಾಜ್ಯವೇ ರಾಜ್ಯ; ಈತನ ಪ್ರಜೆಗಳೇ ಪ್ರಜಾಗಳ್. ಅವರ ಶೂರತನವಂತೂ ಹೀಗದೆ. ಸತ್ಯ-ಕೊಡುವಿಕೆ-ಬುದ್ಧಿಯಲ್ಲಿಯೂ ಮೇಲಾಗಿಯೇ ಇಧಾರೆ ಆಗಲಿ, ಇನ್ನು ಕಾಳಗದ ದರುಶನವಾಗಲಿ, ಇದೇನು ಆತನ ಸೇನೆ! ಮೊದಲು ಊ-ಆ-ಆ-ಈ-ವು-ಹೂ-ಅ-ಆನೆಗಳು, ಆನೆಗಳವೇ ಅರವತ್ತು ಸಾವಿರ (ಕಾಗದ ತೆಗೆದು) ಆನೆಗಳು ಅರವತ್ತು ಸಾಸಿರ. (ಬರೆಬುಹೋಗುವನು.)

೨ ನೇ ನೋಟ.

[ಉಜ್ಜಯಿನಿಯ ಅರಣ್ಯಮಾರ್ಗ; ಅಂಜಿದ ಮಾಳವದ ಯೋಧನೊಬ್ಬನು]

ಯೋ.— ಊಶ್ ಸಾಕಪ್ಪ! ಚಾಲುಕ್ಯರದಾದರೂ ಏನು ಸಾಹಸವೋ ಮಾರಾಯಾ! ನಮ್ಮ ಪ್ರತಾಪರಾಯರು ತಮ್ಮನ್ನು ಬಿಟ್ಟು ಹರ್ಷರ ಕಡೆಗಾಗಿ ಯುದ್ಧಕ್ಕೆ ಹೊರಟದ್ದು ಆ ಚಾಲುಕ್ಯರಿಗೆ ಹೇಗೆ ತಿಳಿಯಿತೋ ಹಾದಿಯಲ್ಲಿಯೇ ಈ ಕತ್ತಲೆಯ ರಾತ್ರಿ ನಮ್ಮನ್ನು ಮುತ್ತಿ ಬಿಟ್ಟಿದ್ದಾರೆ. ಕಲ್ಲು, ಬಾಣ, ಖಡ್ಗ ಯಾವಕಡೆಯಿಂದ ಬರುವವೋ ತಿಳಿಯಲೊಲ್ಲದು. ಅಬಬ, ಏನು ಬಡತಪ್ಪ! ಅದೋ ಮತ್ತೆ ಇಲ್ಲಿಯೇ ಗದ್ದಲ! ಅಯ್ಯಯ್ಯೋ ನಮ್ಮ ಪ್ರತಾಪರಾಯರನ್ನು ಹಿಡಿದಿದ್ದಾರೆ, ಸಾಕಪ್ಪ ಓಡುವದೊಂದೇ ಕೈ (ಹೋಗುವನು, ತಿರುಗಿ) ಅಯ್ಯಯ್ಯೋ (ಓಡುವನು ಬೆನ್ನಟ್ಟಿದ ಯೋಧನು ಹಾಯ್ದು ಹೋಗುವನು)

೩ ನೇ ನೋಟ.

(ಮಾರ್ಗದಲ್ಲಿಯ ಸಣ್ಣ ಡೇರೆ, ಚಾಲುಕ್ಯ ಸರದಾರನು ಆಸನದಲ್ಲಿ ಕುಳಿತಿರುವನು ಪ್ರತಾಪರಾಯನನ್ನು ಹಿಡಿದು ತರುವರು.)

ಚಾ. ಸರದಾರ.— ವೀರರೇ, ಹೇಗಾದರೂ ಇವರು ಅರಸರಲ್ಲವೇ? ಇವರ ಕಟ್ಟುಗಳನ್ನು ಬಿಚ್ಚಿರಿ. ಈ ಆಸನದಲ್ಲಿ ಕೂಡಲಿ (ಬಿಚ್ಚುಹತ್ತುವರು.)

ಪ್ರತಾಪ.— ಬೇಡ, ತೋರಿಕೆಗೆ ಮೃದುವಿದ್ದರೂ ಹೃದಯ ವನ್ನು ಇರಿಯುವದರಲ್ಲಿ ಬಲು ಬಿರಿಸಾಗಿರುವ ಈ ಶಬ್ದಗಳಿಂದ ನನ್ನನ್ನು ಸನ್ಮಾನಿಸುವದೇ ಬೇಡ. ನಿಮ್ಮ ಮುಂದಿನ ಕಾರ್ಯಗಳು ನಡೆಯಲಿ!

ಚಾ. ಸರದಾರ.— ಇದನ್ನೇನು ನುಡಿಯುವಿರಿ. ಅರಸೇ ನೀವು ಮೂರ್ಧಾಭಿಷಿಕ್ತರಾಜರು. ನಾವು ಅಂಥ ರಾಜರ ಸೇವಕರು. ನಿಮಗೆ ಸನ್ಮಾನವನ್ನು ಮಾಡದಿರುವದೆಂತು?

ಪ್ರತಾಪ.— ಸುಟ್ಟಿತು ನಿಮ್ಮ ಸನ್ಮಾನವು! ಇದೋ ಕುಳಿತೆನು (ಕೂತು) ಮುಂದೇನು?

ಚಾ. ಸ.— ಶಾಂತರಾಗಿರಿ! ಶಾಂತರಾಗಿರಿ!! ಮಾಳವಾಧೀಶ್ವರ ಪ್ರತಾಪರಾಯರೇ, ನೀವು ವಿಕ್ರಮ, ಭೋಜ ಮೊದಲಾದ ಮಹಾರಾಜರುಗಳಿಂದ ಆರೋಹಿಸಲ್ಪಟ್ಟ ಪೂಜ್ಯವಾದ ಉಜ್ಜಯಿನಿಯ ಸಿಂಹಾಸನದೊಡೆಯರಲ್ಲವೇ? ಇಂತಹ ನೀವು ಚಾಲುಕ್ಯರ ಸಾಮಂತರಾಗಿಯೂ, ಮಧ್ಯದಲ್ಲಿಯೇ ವಿಶ್ವಾಸಘಾತುಕತನದಿಂದ ಅವರ ವಿರುದ್ಧವಾಗಿ ಹರ್ಷರೊಡನೆ ಕೂಡಿ ಯುದ್ಧಕ್ಕೆ ಹೊರಟಿರುವಿರಿ; ಇದು ನಿಮ್ಮ ಶೀಲವೋ?

ಪ್ರತಾಪ.— ಹಾಗಾದರೆ ಆಶ್ರಯಸ್ಥರು ಆಪತ್ತಿನಲ್ಲಿ ಸಿಕ್ಕಾಗ ಸಹಾಯಮಾಡದಿರುವದು, ಹಾಗು ನೆನಿಸಿದರೆ ಸಂತಾಪವಾಗುತ್ತದೆ, ನನ್ನ ಮಗಳನ್ನು ಪೈಶಾಚಿಕ ರೀತಿಯಿಂದ ಎತ್ತಿಕೊಂಡು ಹೋದದ್ದು ಆ ಚಾಲುಕ್ಯರಾಜನ ಶೀಲವೋ?

ಚಾ. ಸ.— ಓಹೋ ಹೀಗೆತಿಳಿದು ಚಾಲುಕ್ಯರ ವಿರೋಧಿಗಳಾಗಿರುವಿರೋ? ಅರಸೆ, ಸುಳ್ಳು, ನಿಮ್ಮ ತಿಳುವಳಿಕೆಯು ತಪ್ಪಾಗಿದೆ.

ಪ್ರತಾಪ.— ಏನು ಸುಳ್ಳೆನ್ನುವಿರಾ? ಆ ನೀಚ ಚಾಲುಕ್ಯರಾಜನೇ, ಮೋಸದಿಂದ ನನ್ನ ಕನ್ಯಾರತ್ನವನ್ನು ಅಪಹರಿಸಿದನೆಂಬುದಕ್ಕೆ ಎಷ್ಟೋ ಆಧಾರಗಳಿವೆ.

ಚಾ. ಸ.— ನಿಮ್ಮಾಧಾರಗಳ ಹೊಟ್ಟೆಯಲ್ಲಿ ನಿರಾಧಾರತೆಯು ತುಂಬಿಹೋಗಿದೆ. ಮೋಸಗಾರರ ಬಲೆಗೆ ಸಿಕ್ಕುಬಿದ್ದಿರುವಿರಿ. ಬೇರೆ ನೀಚರು ನಿಮ್ಮ ಮಗಳನ್ನು ಹೊತ್ತೊಯ್ದು ನಮ್ಮ ಮಹಾರಾಜರ ಮೇಲೆ ಆ ದೂಷಣೆಯನ್ನು ಚೆಲ್ಲಿರುವರು. ನೀವು ಸಹಾಯಕ್ಕೆ ಬರ ಬೇಕೆಂದು ಹೇಳಿಕೊಂಡ ಸಂಗತಿಯನ್ನು ಅವರಿಗೆ ಮುಟ್ಟಗೊಡದೆ ನಿಮಗೆ ವಿಕಲ್ಪವನ್ನುಂಟು ಮಾಡಿರುವರು.

ಪ್ರತಾ.— ಇದೆಲ್ಲವೂ ನಿರರ್ಥಕ ಪ್ರಲಾಪವು. ನಾನು ಕೇಳ ಲಿಕ್ಕಿಲ್ಲ. ಪರಕನ್ಯಾಪಹಾರದ ನೀಚತನವು ನಿಮ್ಮ ಚಾಲುಕ್ಯ ರಾಜ ನಿಂದಲೇ ಆಗಿದೆ; ಸಂದೇಹವೇ ಇಲ್ಲ.

ಚಾ. ಸ.— ಅರಸೇ ಎಚ್ಚರದಿಂದ ಮಾತಾಡಿರಿ. ನೀವೇನು ಬಲ್ಲಿರಿ? ಸತ್ವಶಾಲಿಯೂ ಸುಗುಣಶಾಲಿಯೂ ಆದ ಚಾಲುಕ್ಯ ಚಕ್ರ ವರ್ತಿಯು ಇಂಥ ದುಷ್ಕಾರ್ಯಗಳನ್ನು ಎಂದೂ ಮಾಡಲಾರನು.

ಪ್ರತಾ.— ಇದನ್ನು ನಾನೂ ಒಪ್ಪಲಾರೆನು. ನನ್ನ ಮತವು ಸುಳ್ಳೆಂದು ಸಿದ್ಧಮಾಡಬೇಕಾದರೆ, ಈ ಕ್ಷಣದಲ್ಲಿ ನನ್ನ ಮಗಳು ಮೋಹಿನಿಯೇ ಪ್ರತ್ಯಕ್ಷವಾಗಿ ಬಂದು ನನ್ನ ಅಭಿಪ್ರಾಯವನ್ನು ಖಂಡಿ ಸಬೇಕಾದೀತು?

ಚಾ. ಸ.— ಹಾಗಾದರೆ ನಾನಾರೆಂದು ತಿಳಿದಿರುವಿರಿ. ಇನ್ನಾ ದರೂ ನಿಜವನ್ನು ನಂಬುವಿರಾ? (ಹೊದಿಕೆಯನ್ನು ತೆಗೆದೊಗೆಯು ವಳು.)

ಪ್ರತಾ.— ಏನು ನೀನು ನನ್ನ ಮಗಳು ಮೋಹಿನಿಯೇ? ಮೋಹಿನಿಯೇ? (ಹುಚ್ಚನಂತೆ) ಮೋಹಿನೀ ನಾನು ಸ್ವಪ್ನದಲ್ಲಿ ನಿನ್ನನ್ನು ನೋಡುತ್ತಿರುವೆನೋ ಅಥವಾ ಜಾಗ್ರತೆಯಲ್ಲಿರುವೆನೋ?

ಮೋ.— ತಂದೆಗಳೇ ಜಾಗ್ರತರಾಗಿಯೇ ಇರುವಿರಿ.

ಪ್ರತಾ.— ಹೀಗೇ? (ಅಪ್ಪಿ ವೈದಡುವುತ್ತ ಕಣ್ಣೀರು ಸುರಿಸುತ್ತ) ಹಾಗಾದರೆ ಹೇಳು, ನನ್ನನ್ನು ನಿನ್ನ ವಿಯೋಗಕಷ್ಟಕ್ಕೀಡು ಮಾಡಿದ ನೀಚನು ಯಾವನು ಹೇಳು!

ಮೋ.— ತಂದೆಯೇ ನನ್ನ ಮೇಲಿನ ದುರಾಶೆಗಾಗಿಯೇ ನಿಮ್ಮ ಸೇವೆಯಲ್ಲಿ ನಿಂತ ಆ ವರುಣನೆಂಬ ಸರದಾರನು ಹೊತ್ತು ಸಾಧಿಸಿ ನನ್ನನಪಹರಿಸಿದನು. ಮತ್ತು ಈ ಮೊದಲು ಚಾಲುಕ್ಯರ ಮೇಲೆ ತನಗಿದ್ದ ದ್ವೇಷವನ್ನು ಸಾಧಿಸುವದಕ್ಕಾಗಿ ಇಲ್ಲದ ತಂತ್ರಗಳಿಂದ ನಿಮ್ಮಲ್ಲಿ ವಿಕಲ್ಪವನ್ನುಂಟುಮಾಡಿ ಪಾರಾದನು.

ಪ್ರತಾ.— ನೀಚ, ಅನ್ನವನಿಕ್ಕಿದುದಕ್ಕೆ ಇದು ಫಲವೋ?

ಮೋ.— ಮುಂದೆ ವಿಂಧ್ಯಾದ್ರಿಯ ಕಾಡಿನಲ್ಲಿ ಪರಿಪರಿಯಿಂದ ನನ್ನನ್ನು ಹಿಂಸಿಸುತ್ತಿರುವಾಗ ಅಕಸ್ಮಾತ್ತಾಗಿ ಒದಗಿ ಚಾಲುಕ್ಯ ಮಹಾರಾಜರೇ ನನ್ನನ್ನು ಬಂಧನದಿಂದ ಬಿಡಿಸಿ ಕಾಪಾಡಿದರು.

ಪ್ರತಾ.— ಚಾಲುಕ್ಯ ಚಕ್ರವರ್ತಿಯೇ ನಿನ್ನ ಕಾಪಾಡಿದನೇ?

ಮೋ.— ಅಹುದು. ಆ ಮಹಾರಾಜರ ಪುಣ್ಯದಿಂದಲೇ ಇಂದು ತಮ್ಮ ಮುಖವನ್ನು ಪುನಃ ನೋಡಿದೆನು. ಇಲ್ಲದಿದ್ದರೆ (ದುಃಖ) ಭ್ರಷ್ಟಳಾಗಿ ತಮ್ಮ ವಂಶಕ್ಕೆ ಕಲಂಕವನ್ನು ಹಚ್ಚಬಾರದೆಂದು ಆತ್ಮಹತ್ಯವನ್ನು ಮಾಡಿಕೊಂಡು ಸತ್ತು ಹೋಗುತ್ತಿದ್ದೆನು. (ಕಣ್ಣಿಗೆಸೆರಗು)

ಪ್ರತಾ.— ಹಾಯ್ ಹಾಯ್ ನನ್ನ ತಿಳುವಳಿಕೆಯೆತ್ತ? ನಿಜವಾದ ಸಂಗತಿಯೆತ್ತ!! (ದುಃಖ) ಮಗು ದುಃಖಿಸಬೇಡಮ್ಮಾ!

ಮೋ.— ಅಪ್ಪಾ ಈಗೊದಗಿದ ಯುದ್ಧ ಪ್ರಸಂಗದಲ್ಲಿ, ನಾವು ಚಾಲುಕ್ಯಮಹಾರಾಜರಿಗೆ ಸಹಾಯಮಾಡುವದೂ ನೀವು ಮೊದಲು ಅಂದಂತೆ, ನನ್ನ ಉದ್ಧಾರಕರಾದ ಆ ಮಹಾರಾಜರಿಗೇ ನನ್ನನು ಅರ್ಪಿಸುವದೂ ಯೋಗ್ಯವಲ್ಲವೇ?

ಪ್ರತಾ.— ಮಗು ಯಾರು ಇಲ್ಲವೆಂದಾರು? ಇದರಲ್ಲಿ ನ್ಯೂನತೆಯಾದರೂ ಏನು? ಅನುಮಾನವೇಕೆ, ನಿನ್ನ ಇಷ್ಟದಂತೆ ಮಾಡುತ್ತೇನೆ ಆಯಿತೇ? ಆದರೆ ಮಗು ಇದೋ ನನ್ನ ಮನಸ್ಸಿನಲ್ಲಿ ಅತ್ಯಂತ ಕಳವಳವಾಗುತ್ತಲಿದೆ. ನೀನು ಎಷ್ಟು ಕಷ್ಟಬಟ್ಟೆಯೋ ಏನೋ; ಅದರಿಂದ ಆ ನೀಚನ ಸೆರೆಯಲ್ಲಿ ನಿನ್ನ ಅವಸ್ಥೆಯೇನು? ಪುಲಿಕೇಶಿ ಮಹಾರಾಜನು ಹೇಗೆ ಒದಗಿ ಕಾಪಾಡಿದನು? ಎಂಬದನ್ನು ವಿವರಿಸಿ ಸಮಾಧಾನ ಪಡಿಸಮ್ಮಾ!

ಮೋ.— ತಂದೆ, ಅದನ್ನು ಮಾರ್ಗದಲ್ಲಿ ಹೇಳುತ್ತ ಹೋಗುವೆನು. ಈಗ ಮಹಾರಾಜರು ನಮ್ಮ ದಾರೀ ನೋಡುತ್ತಿರಬಹುದು. ಇಲ್ಲಿರುವ ಚಾಲುಕ್ಯರ ಹಾಗು ಮಾಳವರ ಸೈನ್ಯದೊಡನೆ, ಬೇಗ ಅತ್ತ ಹೊರಡೋಣ.

ಪ್ರತಾ.— ಹಾಗಾದರೆ, ಈಗ ಉಜ್ಜಯಿನಿಗೆ ಹೋಗಿ ದುಃಖದಲ್ಲಿ ಮುಳುಗಿದ ನಿನ್ನ ಹಡೆದವಳನ್ನು ಸಮಾಧಾನಗೊಳಿಸಬೇಡವೇ?

ಮೋ.— ಅಪ್ಪಾ ಸದ್ಯಕ್ಕೆ ಅಮ್ಮನಿಗೆ ಒಬ್ಬ ದೂತನೊಡನೆ ಈ ಸಂಗತಿಯನ್ನು ಹೇಳಿ ಕಳಿಸು. ನನಗೂ ಅಮ್ಮನನ್ನು ನೋಡುವ ಕುತೂಹಲವು ಬಹಳವಾಗಿದೆ. ಆದರೆ ಹಾಗೆ ಮಾಡಲು ಬರುವದೆಲ್ಲಿ? ಮೊದಲು ಚಾಲುಕ್ಯಸಾರ್ವಭೌಮರಿಗೆ ನೆರವಾಗಿ ಈ ಯುದ್ಧವನ್ನು ಮುಗಿಸೋಣ ಬಳಿಕ ಆನಂದದಿಂದ ಉಜ್ಜಯಿನಿಗೆ ತೆರಳೋಣ.

ಪ್ರತಾಃ— ಆಗಲಿ, ಮಗಳೆ, ಎಂದಿನಿಂದಲೂ ಉದಾತ್ತವಿಚಾರಿಯೂ ವೀರಪುತ್ರಿಯೂ ಆದ ನಿನ್ನ ಮತವು ಯುಕ್ತವಾದುದೇ ಸರಿ.

ಮೋ.— ಸೈನಿಕರೆ, ಮಾಳವ ಚಾಲುಕ್ಯರು ಬಂಧುಗಳಾಗಿ ಹೊರಡಿರಿನ್ನು, ನಡೆಯಿರಿ. ನಮ್ಮ ಕುದುರೆಗಳಿಗೂ ಜೀನು ಹಾಕಿರಿ. ಇದೋ ನಾವೂ ಬಂದೆವು (ಹೋಗುವರು.)

ಪದ. ರಾ। ತಿಲಕಕಾಂಬೋದ ತಾ। ತ್ರಿವಟ (ಧಾಟಿ. ಪ್ರಣತನಾಥ ರಕ್ಷಿಕಾಂತ)

ವಿಮಲಸಾಧು ಹೃದಯವಾಸ। ವಸುಧಾವಲಯದ ತೋಷಾ॥ ವರದೀನೋದ್ಧಾರ ದೇವ। ಸುರವೃಂದೋಪಾಸ್ಯದೇವ। ನುತಿಸುವೆನಾ ನಿನ್ನನೀಶಾ॥

(ಹೋಗುವರು.)

೪ ನೇ ನೋಟ.

(ಸ್ಥಳ. ಚಾಲುಕ್ಯ ಛಾವಣಿಯ ಮುಂಭಾಗ, ಕೊಠಡಿಯೊಡೆಯನೂ ಕರಣಿಗರೂ ಭೆಟ್ಟಿಯಾಗುವರು)

ಕೊಠಡಿಯೊಡೆಯ.— ಏನು ಕರಣಿಕರಾಯರೇ,

ಕರಣಿಗ.— ಏನು ಹೇಳಿರಿ ಕೊಠಡಿಯೊಡೆಯರೇ?

ಕೊಠ.— ನಿಮ್ಮ ಕೆಲಸವೆಲ್ಲವು ತೀರಿತೋ?

ಕರ.— ಅದುದೆಲ್ಲವೂ ತೀರಿತು.

ಕೊಠ.— ತೀರಲಿ ತೀರದಿರಲಿ, ಇದೀಗ ನಾನು ಅಶ್ವಾಧಿಪತಿಯ ಬೇಡಿಕೆಯಂತೆ ಮೂವತ್ತುಹೇರು ಕಡಲೆಯನ್ನು ಹೇರಿ ರಣಭೂಮಿಗೆ ಕಳಿಸಿಕೊಟ್ಟು ನಿಮಗೆ ಪತ್ರವನ್ನು ಕಳಿಸಿದ್ದೆನು; -ದನ್ನು ಬರೆದುಕೊಂಡಿರೋ ಇಲ್ಲವೋ.

ಕ.—ಓಹೋ ಬರೆದೇ ಬಿಟ್ಟಿರುವೆನು.

ಕೊ.— ಹಾಗಾದರೆ ಇನ್ನು ವಿಶ್ರಾಂತಿಯಷ್ಟೆ?

ಕ.— ಯಥೇಚ್ಛವಾಗಿ ಪಡೆಯಬಹುದು.

ಕೊ.— ಆದಾಯಿತು ಕರಣಿಗರೇ ನಮ್ಮ ಜನ್ಮವು ಮಾತ್ರ ವ್ಯರ್ಥ ನೋಡಿರಿ.

ಕ.— ಅದೇಕೆ? ಇಂಥ ಬೇಸರದ ನುಡಿಗಳು ಬರುವವು?

ಕೊ.— ಬೇಸರವೇ ಸರಿ. ಇದರಲ್ಲಿ ಏನಿರುವದು?

ಕ.— ಇನ್ನೂ ಏನು ಇರಬೇಕಾಗಿರುವದಯ್ಯಾ ನಿನಗೆ?

ಕೊ.— ಈಗಿದ್ದುದು ಏನೇನು ಹೇಳಬಾರದೇ ಸ್ವಲ್ಪ.

ಕ.— ಏನು ಕಡಿಮೆಯಾಗಿದೆ ನಿಮ್ಮ ಕೊರಡಿಗೆ ನೀವೇ ಒಡೆಯರು. ಅಲ್ಲಿ ಗೋದಿ ಅಕ್ಕಿ ಕಾಳುಗಳುಂಟು. ಬೆಲ್ಲ ಸಕ್ಕರೆಗಳುಂಟು, ತುಪ್ಪ ಎಣ್ಣೆಗಳುಂಟು, ಬೇರೆ ಬೇರೆ ಖಾದ್ಯ ಪೇಯಗಳುಂಟು.

ಕೊ.— (ಕೂಡಿ) ಹುಲ್ಲು ಮೇವುಗಳುಂಟು, ಕಲ್ಲು ಕಟ್ಟಿಗೆಗಳುಂಟು ಆದರೆ......

ಕ.— ಇದರಿಂದ ಬೇಕಾದದ್ದನ್ನು ತೆಗೆದುಕೊಂಡು (ಅಭಿನಯ) ಹಣಿಯುತ್ತ ಮನಬಂದಂತೆ ಮೇದಗೂಳಿಯಂತೆ ಮೈಕೈ ದುಂಡಗಾಗಿ (ತೋರಿಸಿ) ಹೀಗೆ ಅಡ್ಡಾಡಲಿಕ್ಕೆ ಬರುವದು. ಮತ್ತು ಇದರಿಂದ ಇನ್ನಿಷ್ಟು ಹೊಟ್ಟೆಯನ್ನಾದರೂ ಬೆಳಿಸಲಿಕ್ಕೆ ಬಂದೀತು! ಹೆಚ್ಚಿನದೇನು ಬೇಕು?

ಕೊ.— ಅಹಹ! ಇದೆಯೋ?

ಕ.— ಅಲ್ಲದೆ ಮತ್ತೆ, ಅದೇ ನಮ್ಮನ್ನು ನೋಡಬಾರದೇ? (ಅಭಿನಯ) ಕೈಕಾಲುಗಳು ಉರುವಲಕಟ್ಟಿಗೆ; ಮೂಗು ಬಕಪಕ್ಷಿಯ ಮೂಗು; ಕಣ್ಣುಗಳು ಇಲಿಯ ಹೋರು; ಮೈಮೇಲಿನ ನರಗಳನ್ನು ನೋಡಿದರೆ ಕಳ್ಳಿಯಗಿಡಕ್ಕೆ ಬಳ್ಳಿ ಸುತ್ತುವರಿದಂತೆ. ಈ ನನ್ನ ಬೆರಳುಗಳನ್ನು ನೋಡಬಾರದೇ? ಲೆಕ್ಕಣಿಕೆಯನ್ನು ಹಿಡಿದು ಹಿಡಿದು ಲೆಕ್ಕಣಿಕೆಯೇ ಆಗಿರುತ್ತವೆ.

ಕೊ.— ಒಡಲು ಹೊರೆಯುವ ಸುದ್ದಿಯನ್ನೇ ಹೇಳಿದಿರೇನು?

ಕ.— ಹೌದು ಮತ್ತೆ!

ಕೊ.— ಅದೇನು ಮಹತ್ವದ್ದಲ್ಲ. ಹುಟ್ಟಿದ ಮೇಲೆ ಸ್ವಾರ್ಥವನ್ನಳಿದು ಏನಾದರೊಂದು ರಾಷ್ಟ್ರಕಾರ್ಯವನ್ನು ಮಾಡಲೇಬೇಕು.

ಅಂದರೆ ಜನ್ಮವು ಸಾರ್ಥಕವು. ನಮ್ಮ ಬಂಧುಗಳಾದ ಸೈನಿಕರು ಈಗ ಮಾತೃಭೂಮಿಯ ಮಾನರಕ್ಷಣೆಗಾಗಿ ಜೋಡಾಗಿ ನಿಂತು ಹೊಡೆದಾಡಿ ಯಥೇಚ್ಛವಾಗಿ ಬೆಳಿಸಿದ ದೇಹದಿಂದ ರಕ್ತವನ್ನು ಸುರಿಸಿ ಭೂದೇವಿಯನ್ನು ತೃಪ್ತಿಗೊಳಿಸುವರು; ನಾವಾವ ಕಾರ್ಯವನ್ನು ಮಾಡಿದೆವು?

ಕ.— (ತಲೆದೂಗಿ) ಹೀಗೆಯೋ ನಿಜ, ವಿಚಾರಗಳು ಸರಿಯಾಗಿವೆ. ಆದರೆ ನಾವು ಕೈಕೊಂಡದ್ದೊಂದು ಮಹಾರಾಜರ ಸೇನೆಯೋ ಅಲ್ಲವೇ? ಇದನ್ನೇ ಮನಸ್ಸಗೊಟ್ಟು ಮಾಡಿದರಾಯಿತು. ಇದರಿಂದ ನಮ್ಮ ಸಲುವಾಗಿ ಹೋರಾಡುವ ನಮ್ಮ ಜನರಿಗೂ ಅನುಕೂಲವಾಗುವದು ಹಿತವಾಗುವದು.

ಕೊ.— ಹೌದು ಇಷ್ಟು ಮಾತ್ರ ನಿಜವು ಸಂತೋಷಕರವು. ಆದರೆ ಆ ನಮ್ಮ ಬಂಧುಗಳಂತೆ, ಒಡೆಯನಿಗಾಗಿ, ಮಾತೃಭೂಮಿಗಾಗಿ, ಅಭಿಮಾನಕ್ಕಾಗಿ ಹೋರಾಡಿ ಪ್ರಸಂಗಬಂದರೆ ಅದಕ್ಕಾಗಿಯೇ ಪ್ರಾಣತ್ಯಾಗವನ್ನು ಮಾಡಿ ವೀರಸ್ವರ್ಗವನ್ನು ಪಡೆಯುವದೆಲ್ಲಿ? ಬಲುಮ ಗಂಡಾಂತರ ರೋಗಗಳಿಗೊಳಗಾಗಿ ಬಳಲಿ ತೊಳಲಿ ಕಾಲನ ದವಡೆಯನ್ನು ಸೇರುವದೆಲ್ಲಿ? ಸತ್ಕಾರ್ಯಕ್ಕಾಗಿ ಹೋರಾಡಿ ಧಾರಾತೀರ್ಥದಲ್ಲಿ ದೇಹವಿಡುವ ಭಾಗ್ಯವು ಸಾಮಾನ್ಯವೇ?

ಕ.— ಸರಿಸರಿ. ಮಹಾರಾಜರು ನಮ್ಮನ್ನು ಈ ಕೆಲಸಕ್ಕೆ ಯಾಕಾದರೂ ಹಚ್ಚಿರಬೇಕಯ್ಯಾ?

ಕೊ.— ನಮ್ಮ ಕರ್ಮಾನುಸಾರವಾಗಿ.

ಕ.— ನಿಜ, ಆದರೆ ಮಾಡುವದೇನು? ದೊರೆತದ್ದರಲ್ಲಿ ಸಂತೋಷಪಡುವದು ಯೋಗ್ಯವು. ಈಗ ಇದನ್ನು ತಿರಸ್ಕರಿಸಿ ಅದನ್ನು ಮಾಡಹೋದರೆ ಮಹಾರಾಜರ ಕೆಲಸಕ್ಕೆ ಅದೊಂದು ತೊಂದರೆಯಾಗಿ ನಾವು ದ್ರೋಹಮಾಡಿದಂತೆಯೇ ಆಗುತ್ತದೆ.

ಕೊ.— (ಕೇಳಿ) ಅದೇನು ? ಯುದ್ಧಭೂಮಿಯಲ್ಲಿ ಬಹಳ ಕೋಲಾಹಲವು ಕೇಳಿಸುತ್ತದೆ!

ಕ.— (ಕೇಳಿ) ಹೌದು ಕೇಳಿಸುತ್ತದೆ. ಸಾಯಂಕಾಲವಾಗುತ್ತ ಬಂತು, ಮುಂಜಾನೆಯಿಂದ ಯುದ್ಧದ ಸಮಾಚಾರವೇ ತಿಳಿದಿಲ್ಲ. ಆ ಮುಂದಿನ ದಿಬ್ಬದ ಮೇಲೆ ನಿಂತರೆ ರಣಭೂಮಿಯು ಚನ್ನಾಗಿ ಕಾಣಬಹುದು. ಸ್ವಲ್ಪ ನೋಡೋಣ.

ಕೊ.— ಆಗಲಿ ನಡೆಯಿರಿ. (ಮುಂದೆಬರುವರು.)

ಕ.—ಅಲಲಲಲಾ! ಏನು ಜನರಪ್ಪ? ದೂರದಲ್ಲಿ ನರ್ಮದೆಯು ಕಾಣುವದು; ಅದರ ತೀರದ ವರೆಗೂ ಒಂದೇ ಸವನೆ ಹಬ್ಬಿರುವರು.

ಕೊ.— ನರ್ಮದೆಯ ತೀರದ ಗುಂಟಾದರೂ ದೃಷ್ಟಿಹರಿಯುವ ವರೆಗೆ ಹಾಗೇ ಕಂಡೇಕಾಣುವರು.

ಕ.— ಪ್ರಕ್ಷುಬ್ಧವಾದ ಮಹಾಸಾಗರದಂತೆ, ಈ ಸೇನಾ ಸಾಗರದಲ್ಲಿ ಎಲ್ಲಿ ನೋಡಿದಲ್ಲಿ ಚಕಮಕಿಯು ನಡೆದೇ ಇದೆ. ಸಾಗರದಲ್ಲೆಲ್ಲ ಅಲೆಗಳ ಹೊಡತದಿಂದ ತುಂತುರಗಳೇಳುವಂತೆ ಈ ಮಹಾಜನ ಸಮುದಾಯದ ಕಾಕಲಾಟದಿಂದ ರಕ್ತವು ಹೇಗೆ ಚಿಮ್ಮುತ್ತಿರುವದು ನೋಡಿದೆಯಾ?

ಕೊ.— ನಿಜ, ಹಾಗೆ ಹಾರಿಬಿದ್ದ ರಕ್ತದಿಂದ ಈ ವಿಸ್ತಾರವಾದ ರಣಭೂಮಿಯು ಏಕಕಾಲದಲ್ಲಿ ಕೆಸರಾಗಿರುವದನ್ನು ನೋಡು.

ಕ.— ಅದೋ, ರಕ್ತವು ಪ್ರವಾಹವಾಗಿ ಹರಿಯುತ್ತಲೂ ಇಹುದು.

ಕೊ.— ಅಬ್ಬಬ್ಬಾ! ಇಂಥ ಭಯಂಕರವಾದ ಸಂಗ್ರಾಮವನ್ನು ಇಂದಿನವರೆಗೆ ಕಾಣಲೇ ಇಲ್ಲ.

ಕ.— ಇಷ್ಟು ಜನರ ಭಾರವನ್ನು ಈ ಭೂದೇವಿಯು ಹೇಗೆ ಸಹಿಸಿರಬಹುದು?

ಕೊ.— ಇದರಲ್ಲಿ ಸುಮಾರು ಚಾಲುಕ್ಯರ ಎರಡಷ್ಟು ಹರ್ಷ ಸೈನ್ಯವಿರಬಹುದಲ್ಲವೇ?

ಕ.— ಸಂಶಯವೇನು ಇದಕ್ಕೆ? ಹರ್ಷನ ಆನೆಯ ಸೈನ್ಯವೂ ದೊಡ್ಡದು.

ಕೊ.— ಹರ್ಷವರ್ಧನನು ಇಂಥ ಬಲಾಢ್ಯ ಸೇನಾಬಲವುಳ್ಳವನೇ?

ಕ.— ಅಹುದು, ಆತನು ಸಾಮಾನ್ಯನೇ? ಉತ್ತರಭಾರತದ ಸಾರ್ವಭೌಮನವನು. ಆತನ ಸಾಮಂತ ಸಮುದಾಯವೂ ಬಲು ದೊಡ್ಡದಂತೆ.

ಕೊ.— ಅಂತೂ ಚಾಲುಕ್ಯರಿಗೆ ಈ ಯುದ್ಧವೆಂದರೆ ಒಂದು ದೊಡ್ಡ ಗಂಡಾಂತರವೇ ಆಗಿದೆ.

ಕ.— ಅಲ್ಲದೆ ಮತ್ತೆ! ಈ ಕಾಳಗವು ಕನ್ನಡಿಗರ ಕಲಿತನವನ್ನು ಪರೀಕ್ಷಿಸಲಿಕ್ಕೆ ಬಂದಿರುವದೆಂದು ಹೇಳಬಹುದು. ಇವಲ್ಲದೆ ನಮ್ಮ ಚಾಲುಕ್ಯಚಕ್ರವರ್ತಿಯ ಪ್ರತಾಪದ ಸತ್ವವನ್ನು ಕಾಣುವದೆಂದರೆ ಇದರಲ್ಲಿಯೇ!

ಕೊ.— (ಕೈಜೋಡಿಸಿ ಮೇಲೆ ನೋಡಿ ಸ್ವಗತ) ದೇವಾ, ಜಗದೀಶ ನಮ್ಮ ಚಾಲುಕ್ಯ ದಂಡಾಳುಗಳಿಗೆ ಅತುಲವಾದ ಹರ್ಷ ಸೈನ್ಯದೊಡನೆ ಹೋರಾಡುವ ಸಾಮರ್ಥ್ಯವನ್ನು ಕೊಡು. ಚಾಲುಕ್ಯರು ಇಂದಿನವರೆಗೆ ಹಲವು ಸಂಗ್ರಾಮಗಳಲ್ಲಿ ದೊರಕಿಸಿದ ಕೀರ್ತಿಯನ್ನು ಇಂದು ನರ್ಮದೆಯಲ್ಲಿ ಮುಳುಗಿಸಬೇಡ.

ಕ.— ಅದೋ ಆ ಗುಡ್ಡದಡಿಯ ಕಡೆಗೆ ನಮ್ಮ ರಣರಂಗನು ತನ್ನ ಚಪಲವಾದ ಅಶ್ವಸೇನೆಯೊಡನೆ ನೆಗೆದಾಡುತ್ತ ಹೇಗೆ ವೈರಿಗಳನ್ನು ತುಂಡರಿಸುವನು ನೋಡಿದೆಯಾ?

ಕೊ.— ಭಲೆಭಲೆ! ಇದೀಗ ಮೂವತ್ತು ಹೇರು ಕಡಲೆ ಕಳಿಸಿದ್ದು ಸಾರ್ಥಕವೇ!

ಕ.— ಅದೋ ನೋಡು, ಬಲರಾಯನು ತನ್ನ ಗಜಗಳಿಂದ ಹಗೆಗಳನ್ನು ಹೇಗೆ ಹಿಂದೆ ಸರಿಸುತ್ತಿರುವನು ನೋಡಿದೆಯಾ?

ಕೊ.— ಸರಿಸರಿ. ಚಾಲುಕ್ಯಸರದಾರರು, ಹರ್ಷರ ಮಹಾ ಸೇನೆಯ ತುಂಬೆಲ್ಲ ಪಸರಿಸಿರುವರು.

ಕ.— ರಣಮಲ್ಲನು ವೃದ್ಧನಾದರೂ ನಿಂತಲ್ಲಿ ನಿಲ್ಲದೆ, ಹೇಗೆ ಚಕ್ರಾಕಾರವಾಗಿ ತಿರುಗುತ್ತಿರುವನು ನೋಡಿದೆಯಾ? ಅವನು ಹಾಯ್ದಲ್ಲೆಲ್ಲ ಹೆಣಗಳೇ!

ಕೊ.— ಕಾಳಗದಲ್ಲಿ ಆತನು ಹರಯದವರಿಗಿಂತ ಹರಯದವನಾಗುತ್ತಿರುವನು.

ಕ.— ಮಹಾರಾಜರು ಹಗೆಗಳನ್ನು ನುಗ್ಗಿತ್ತ ಎಲ್ಲಿಯವರೆಗೆ ಹೋಗಿರುವರಲ್ಲ! ತಿರುಗಿ ಮಬ್ಬುಗತ್ತಲಾಗುತ್ತ ಬಂತು. ಅವರ ಸುತ್ತಲೂ ಚಾಲುಕ್ಯ ಸೈನಿಕರಾದರೂ ಸ್ವಲ್ಪ ಜನರೇ ಇರುವರು.

ಕೊ.— ಅಹುದು. ಅತ್ತ ನಮ್ಮ ಸೇನಾಪತಿ ವೀರವರ್ಧನರಾದರೂ ಹಾಗೇ ಒಳನುಗ್ಗಿ ಹೋಗಿರುವರು. ಅಲ್ಪ ಜನರೊಡನೆ ಇಷ್ಟು ಮುಂದೆ ಹೋಗಬಹುದೇ?

ಕ.— ಅಲ್ಲಿ ತೇಜಸ್ವಿಯಾದವನೊಬ್ಬನು ಭಯಂಕರವಾಗಿ ಯುದ್ಧ ಮಾಡುತ್ತ ನಮ್ಮ ಮಹಾರಾಜರ ಕಡೆಗೆಯೇ ಬರುತ್ತಿರುವನು. ಅವನಾವನು?

ಕೊ.— ಹರ್ಷರ ಸೇನಾಪತಿಯಾಗಿರಬಹುದು.

ಕ.— ಅದೋ, ಆತನು ತೀರ ಹತ್ತಿರವೇ ಬಂದನು. ಅಯ್ಯೋ ಘಾತ! ಆತನ ಕುದುರೆಯು ಹಾರಿ ತನ್ನ ಮುಂಗಾಲುಗಳನ್ನು ನಮ್ಮ ಮಹಾರಾಜರ ರಥದಲ್ಲಿ ಊರಿತು.

ಕೊ.— ಹಾ! ಮುಂದೆ? ಮಹಾರಾಜರು ಹಿಂದಕ್ಕೆ ತಳ್ಳಿದರೇ? ನಸುಕಾಗತೊಡಗಿದ್ದರಿಂದ ನನಗೆ ಚನ್ನಾಗಿ ಕಾಣಲೊಲ್ಲದು.

II

ಕ — ಇಲ್ಲ; ಹರ್ಷರು ಅಲ್ಲಿ ಹೆಚ್ಚಾಗಿ ಮುತ್ತಿಕೊಂಡರು. ಮಹಾರಾಜರು ಮರೆಯಾದರು. ನಮ್ಮ ಸೇನಾಪತಿಗಳು ಮಾತ್ರ ಎದುರಾದವರನ್ನು ತುಂಡರಿಸುತ್ತ ಧಾವಿಸಿ ಮಹಾರಾಜರ ಕಡೆಗೆಯೇ ಬರುತ್ತಿರುವರು.

ಕೊ.— ಬೇಗನೇ ಇಬ್ಬರೂ ಕೂಡಿಕೊಳ್ಳಲಿ.

ಕ.— ಸೇನಾಪತಿಗಳೂ ಅದೇ ಗದ್ದಲದಲ್ಲಿ ಹೊಕ್ಕರು.

ಕೊ.— (ಸ್ವಗತ) ಮನವೇ ಚಲಿಸದಿರು. ದೇವರೇ ಕರುಣೆಯಿರಲಿ, (ಪ್ರಕಾಶ) ಕರಣಿಗರಾಯರೇ ಇದರಲ್ಲಿ ಪರಿಣಾಮವೇನಾಗಬಹುದು?

ಕ.— ಇದೇನು ಮಹಾರಾಜರ ರಥವು ಇಲ್ಲಿ ರಣಭೂಮಿಯಿಂದ ಹೊರಬಿದ್ದು ಬರುತ್ತಿರುವದು; ಅಯ್ಯೋ ಪ್ರಮಾದ! ಮಹಾರಾಜರು ರಥದಲ್ಲಿ ಒರಗಿಕೊಂಡಿರುವರು.

ಕೊ.— (ಕಿವಿ ಮುಚ್ಚಿ) ಶಾಂತಂ ಪಾಪಂ ಶಾಂತಂ ಪಾಪಂ! "ಪ್ರತಿಹತಮಮಂಗಲಂ" ದೇವರೇ ಅಮಂಗಲವಾದ ಸುದ್ದಿಯನ್ನು ಕೇಳಗೊಡದಿರು.

ಕ.— ರಥವು ಛಾವಣಿಗೆ ಬಂದೇ ಬಿಟ್ಟಿತು. ನಡೆ ಹೋಗುವಾ.

ಕೊ.— ನಡೆಯಿರಿ ಬೇಗ ನಡೆಯಿರಿ. (ಹೋಗುವರು.)

೫ ನೇ ನೋಟ.

(ಸಭಾಲಯ; ಗಾಯಗೊಂಡ ಪುಲಿಕೇಶಿಯು ಆಸನದಲ್ಲಿ; ಸರದಾರರೂ ಸೇನಾಪತಿಯೂ ಪರಿಜನರೂ ಉದಾಸೀನರಾಗಿ.)

ಪುಲಿ— ಪದ. ರಾ। ಭೈರವಿ, ತಾ। ಪಂಜಾಬಿ (ಧಾ: ಬಾಳಿದೆಯಾ ಮದನಾ)

ತಿಳಿಯುವದೇ ವಿಧಿಲೀಲಾ। ಇಳೆಯೊಳೋರ್ವ ಮಾನವನಿಗಾದರೂ॥
ಮಾನಿ ಹೀನನು। ಮಾನಹೀನತಾ। ಮಾನಿಯೆನಿಪನಾದೈವಮಹಿಮೆಯು ಹಾ॥೧॥

ಪ್ರತಾಪಶಾಲಿಗಳಾದ ವೀರಜನರೇ, ಚಾಲುಕ್ಯರಾಜನ ಸಲುವಾಗಿ ನೀವು ನಿಮ್ಮ ಸರ್ವಸ್ವವನ್ನೆಲ್ಲ ಆಹುತಿಯಾಗಿ ಕೊಟ್ಟಿರುವಿರಿ;

ಮತ್ತು ಕೊಡುತ್ತಿರುವಿರಿ. ಆದರೆ ನಿಮ್ಮ ಈ ಅಕೃತ್ರಿಮವಾದ ಸ್ವಾಮಿ ನಿಷ್ಠೆಗೆ ಫಲವೇನಿರುವದು? ಈ ಹೊತ್ತು ಇಂಥ ನಿರಾಶೆಯ ಫಲವೇ? ಇವಕ್ಕಾಗಿ ನನಗೆ ಅತ್ಯಂತ ಪಶ್ಚಾತ್ತಾಪವಾಗಿರುವದು. ಇನ್ನು ಇವರಂತೆ ಚಾಲುಕ್ಯರ ಹಾಗು ಸಾಮಂತರಾಜರ ಕುಲಕ್ಷಯ ಮಾಡುವದರಿಂದ ಪ್ರಯೋಜನವೇನು? ಇದರಿಂದ ಯಾರಿಗೆ ಸುಖವಿರುವದು ಹೇಳಿರಿ. ಹೀಗೆ ವ್ಯರ್ಥವಾಗಿ ನಾಶಹೊಂದುವದಕ್ಕಿಂತ ಹೊತ್ತು ಬಂದಂತೆ ಕೊಡೆ ಹಿಡಿದುಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುವದು ಯೋಗ್ಯವೆಂದು ತೋರುತ್ತದೆ. ಯಾವ ಕೀರ್ತ್ಯಭಿಮಾನಗಳ ಸಲುವಾಗಿ ನಾವು ಹೋರುತ್ತಿರುವೆವೋ ಆ ಕೀರ್ತ್ಯಭಿಮಾನಗಳಿಗೆ ಮೂಲಾಧಾರವಾದ ವಿಜಯ ಲಕ್ಷ್ಮಿಯೇ ನಮಗೆ ಆಶ್ರಯ ಕೊಡದಿರುವಾಗ ಯಾರು ಮಾಡುವದೇನಿರುವದು? ಇಂದಿನ ಯುದ್ಧದ ಲಕ್ಷಣವನ್ನು ನೋಡಿದರಂತೂ ನನಗೆ ನಿರಾಶೆಯೇ ಕಾಣುವದು. ಆದ್ದರಿಂದ ಹರ್ಷವರ್ಧನನೊಡನೆ ಸ್ನೇಹದ ಒಡಂಬಡಿಕೆಯನ್ನಷ್ಟು ಮಾಡಿಕೊಳ್ಳೋಣ. ಇದರ ಸಲುವಾಗಿ ಈಗ ನಿಮ್ಮ ಸಮ್ಮತಿಯನ್ನಷ್ಟು ತೆಗೆದುಕೊಳ್ಳಬೇಕಾಗಿದೆ. ಹೇಳಿರಿ ನಾನು ಆಲೋಚಿಸಿದಂತೆ ಮಾಡಿದರೆ ಹಿತವಾಗುವದಲ್ಲವೇ? (ಸ್ತಬ್ಧತೆ)

ವೀರವರ್ಧನ — (ಸ್ವಗತ) ಪ್ರತಿಜ್ಞೆಯನ್ನು ಮಾಡಿ ಖಡ್ಗವನ್ನು ಹಿರಿದ ನಾವು ಈಗ ಒಡಂಬಡಿಕೆಯನ್ನು ಮಾಡಿಕೊಳ್ಳುವದೆಂದರೇನು? ಇದು ನಾಚಿಕೆಯ ಮಾತು; ಸತ್ತರೆ ಆಗುವ ಹಾನಿಯಾದರೂ ಏನು? ಸಾಯುವ ವರೆಗೆ ಯುದ್ಧವನ್ನೇಕೆ ಮಾಡಬಾರದು? ನಮ್ಮ ಮಹಾರಾಜರು ಹೀಗೇಕೆ ನುಡಿಯುವರು? ಇಂದಿನ ವರೆಗೆ ಮಹಾರಾಜರ ಅಪ್ಪಣೆಯನ್ನು ತಿಲಮಾತ್ರವೂ ಮೀರದೆ ಸಾಮ್ರಾಜ್ಯವರ್ಧನೆಯನ್ನು ಮಾಡಿದ ನಾವು ಇಂದು ಅವರ ವಿಚಾರವನ್ನು ಅಲ್ಲಗಳೆಯುವದಾದರೂ ಹೇಗೆ? ಹಾಗಾದರೆ ಈಗ ಏನೆಂದು ಹೇಳಬೇಕು? ಅವರ ಅಭಿಪ್ರಾಯವಾದರೂ ಸರಿಯಲ್ಲವೆಂದು ಹೇಳುವದು ಹೇಗೆ?

ರಣರಂಗ.--- (ಸ್ವಗತ) ದೇವಾ ಇಂದಿನ ವರೆಗೆ ಪಡೆದ ನಿರ್ಮಲವಾದ ಕೀರ್ತಿಯು ನಾಶವಾಗುವ ಹೊತ್ತು ಬಂತೇ?

ಬಲರಾಯ. – (ಸ್ವಗತ) ಆತ್ಮಾಭಿಮಾನವನ್ನಳಿದು, ಒಡಂಬಡಿಕೆಯನ್ನು ಮಾಡಿಕೊಳ್ಳುವದು ಹೇಡಿತನವಾದರೂ ನಮ್ಮ ವೀರೋತ್ತೇಜಕರಾದ ಮಹಾರಾಜರೇ ಹೀಗೆ ನುಡಿಯುತ್ತಿರುವರಲ್ಲ!

ರಣಮಲ್ಲ.--- (ಸ್ವಗತ) ಎಂಥ ಗಂಡಾಂತರ ಬಂದೊದಗಿತು ದೇವರೇ?

ವೀರವರ್ಧನ.--- (ಸ್ವಗತ) ಈಗೇನು ಹೇಳುವದು? ಸಂಧಿಯನ್ನು ಮಾಡಿಕೊಳ್ಳುವದು ಯೋಗ್ಯವೆಂದು ಹೇಳಿದರೆ ಚಾಲುಕ್ಯರ ಕೀರ್ತಿನಾಶ, ಮಾತೃಭೂಮಿಯ ಮಾನಭಂಗ. ಯುದ್ಧಮಾಡುವದೆಂದರೆ ಅಸಂಖ್ಯ ಜನರ ಪ್ರಾಣಹಾನಿ. (ಪ್ರಕಾಶ) ಮಹಾರಾಜ, ಈಗ ಯಾವುದನ್ನು ಹೇಳುವದಕ್ಕೂ ಯಾರಿಗೂ ಶಕ್ತಿಯು ಸಾಲದೆಂಬಂತೆ ತೋರುತ್ತದೆ. ಎಲ್ಲರ ಬುದ್ಧಿಗಳು ಕುಂಠಿತವಾಗಿ ಹೋಗಿವೆ. ಆದ್ದರಿಂದ ಈಗ ತಮಗೆ ಸರಿಕಂಡುದೇ ಯೋಗ್ಯವೆಂದು ನನ್ನ ಮತವು.

ಪುಲಿ.--- ಹಾಗಾದರೆ ದೂತನನ್ನು ಕರೆ. (ಪತ್ರ ಬರೆಯಹತ್ತುವನು. ಪರಿಚಾರಕನು ಒಬ್ಬನನ್ನು ಕರೆದುಕೊಂಡು ಬರುವನು. ಎಲ್ಲರೂ ಅಂಗವಿಕ್ಷೇಪದಿಂದ ಉದಾಸೀನತೆಯನ್ನು ಪ್ರಕಟಿಸುವರು.) ಇದನ್ನು ಹರ್ಷರಾಜನಿಗೆ ಕೊಡಹೋಗು.

(ಪತ್ರವನ್ನು ಕೊಡಹೋಗುವನು. ಆಗ ಒಮ್ಮಿಂದೊಮ್ಮೆ ಪ್ರಕಟವಾದ)

ದಿವ್ಯಾನಂದ ಯೋಗಿಗಳು.--- ಹಾ! ತಡೆ! ತಡೆ!!

(ಎಲ್ಲರೂ ಎದ್ದು ನಿಲ್ಲುವರು. ಆಶ್ಚರ್ಯ ದರ್ಶನ; ಪುಲಿಕೇಶಿಯು ನಾಚಿಕೆದಿಂದ ತಲೆ ಬಾಗಿಸಿಕೊಂಡು ಕೈ ಮುಗಿದು ನಿಲ್ಲುವನು.)

ದಿವ್ಯಾನಂದ.— ಮಹಾರಾಜನೆ ಇದನ್ನೇನು ನಡೆಯಿಸಿರುವೆ? ಒಣ ಮೋಹಕ್ಕಾಗಿ ನಿನ್ನ ಸತ್ವವನ್ನು ಮಾರಿಕೊಳ್ಳುವೆಯಾ? ಈ

ಪತ್ರಿಕೆಯು ಸಾಮಾನ್ಯವಾದುದೇ? ಇದು ತಾನಾಗಿಯೇ ಹೋಗು ವದೇ? ಇದರ ಸಂಗಡಲೇ ಚಾಲುಕ್ಯರ ಅತುಲ ಪ್ರತಾಪದ ಖ್ಯಾತಿಯೂ ಕರ್ನಾಟಕ ವಿಜಯಧ್ವಜದ ಮಹತ್ವವೂ ಕರ್ನಾಟಕ ಭೂಮಾತೆಯ ಮರ್ಯಾದೆಯೂ ಹೊರಟು ಹೋಗವೇ? ಈ ಪತ್ರಿಕೆಯೇ ಚಾಲುಕ್ಯ ಸಾಮ್ರಾಜ್ಯದ ಸ್ವಾತಂತ್ರ್ಯ ದೇವಿಯ ಮಂದಿರದ ಬೀಗದ ಕೈಯಲ್ಲವೇ? ಇದನ್ನು ವೈರಿಗಳ ಪಾಲು ಮಾಡುವದೇ? ಈ ಸುದ್ದಿಯನ್ನು ಕೇಳಿ. ಸಮುದ್ರದಾಚೆಯ ಪರರಾಷ್ಟ್ರಗಳ ರಾಜದರ್ಬಾರುಗಳಲ್ಲಿರುವ ನಿನ್ನ ರಾಯಭಾರಿಗಳ ಮುಖಗಳು ಕಳೆಗುಂದಿ ಕೆಳಗಾಗವೇ? ಆ ರಾಜ ರೆಲ್ಲರು ಚಪ್ಪಾಳೆ ಹೊಡೆದು ನಗದಿರುವರೇ? ಹರ್ಷವರ್ಧನನು ಒಂದು ವೇಳೆ ಒಡಂಬಡಿಕೆಯನ್ನು ಮಾಡಿಕೊಂಡರೂ, ಮೊದಲು ಬಾಹುಗಳನ್ನು ಥಪ್ಪರಿಸಿ ಯುದ್ಧಕ್ಕೆ ನಿಂತ ನಿನ್ನ ಈಗಿನ ಸ್ಥಿತಿಯನ್ನು ಕಂಡು ಅವನು ಸಹ ನಿನ್ನ ಮೋರೆಯ ಮೇಲೆ ಛೀ, ಥೂ, ಕಾರ ಗಳನ್ನು ಇಡುವದಿಲ್ಲವೇ? ಪ್ರತಾಪಶಾಲಿಯಾದ ಚಾಲುಕ್ಯ ಮಹಾ ರಾಜನೆ, ಯಾವನು ಪವಿತ್ರವಾದ ಕರ್ನಾಟಕ ವಿಜಯಧ್ವಜಕ್ಕೆ, ನಿನ್ನ ಮಾತೃಭೂಮಿಯ ಶಿರೋಭೂಷಣಕ್ಕೆ ಪದಾಘಾತವನ್ನು ಮಾಡಿ ಸಹಿ ಸಲಸಾಧ್ಯವಾದ ಅಪಮಾನವನ್ನುಂಟುಮಾಡಿರುವನೋ ಆ ನೀಚ ತಾಮಸವೃತ್ತಿಯ ಅರಸನೊಡನೆ ಸ್ನೇಹವನ್ನು ಬಳಿಸಲು ನಿನಗೆ ನಾಚಿಕೆ ಬರುವದಿಲ್ಲವೇ? ಆತನ ಸೇಡು ತೀರಿಸಲು ನಿನಗೆ ಸಾಮರ್ಥ್ಯವಿರುವ ದಿಲ್ಲವೇ? ಹಾಗಾದರೆ ನೀನು ನಿನ್ನ ಬಾಹುಬಲದ ಮೇಲೆ ಭೂಭಾ ರವನ್ನು ಹೊತ್ತದ್ದು ವ್ಯರ್ಥವೇ ಸರಿ.

ಪುಲಿ.—(ಪಶ್ಚಾತ್ತಾಪದಿಂದ ಕಪೋಲಗಳಿಗೆ ಕೈ ತಾಗಿಸುವನು.)

ಎಲ್ಲ ವೀರರು.— (ಉತ್ಸಾಹ ದರ್ಶನ ಮಾಡುವರು.)

ದಿವ್ಯಾನಂದ.— ಮಹಾರಾಜನೆ, ಹರ್ಷವರ್ಧನನನ್ನು ಸೋಲಿ ಸುವ ಸಾಮರ್ಥ್ಯವು ನಿನ್ನಲ್ಲಿರುವದಿಲ್ಲನೆಂತಲ್ಲ; ಅದು ನಿನ್ನ ಲಕ್ಷಕ್ಕೆ ಬರದಂತಾಗಿದೆ. ನೀನು ಮೋಹಕ್ಕೊಳಗಾಗಿರುವೆ. ಇಲ್ಲಿಯ ವರೆ

ಗಾದ ಪ್ರಾಣಹಾನಿಯಿಂದ ಅಂಜಿರುವೆ. ಹೀಗೆ ಮೋಹದ ಬಲೆಗೆ ಬಿದ್ದು ಕೆಡುವದು ಸತ್ವಶಾಲಿಗಳಿಗೆ ಯೋಗ್ಯವಾಗಲಾರದು. ಸತ್ವವನ್ನು ಕಾಯ್ದುಕೊಳ್ಳಲಿಚ್ಛಿಸುವವರು ತಪಸ್ಸನ್ನಾಚರಿಸಬೇಕು. ತಪಸ್ಸಿನಿಂದ ಕಾರ್ಯಸಿದ್ಧಿಯಾಗುವದು. ಮೋಹತ್ಯಾಗವನ್ನು ಮಾಡಿ ಚಿಂತಾಕ್ಲೇಶ ವಿಪತ್ತುಗಳಿಗೆ ಅಂಜದೆ ಕೈಕೊಂಡ ಕೆಲಸಗಳನ್ನು ಕೊನೆಗಾಣಿಸುವದೇ ಶುದ್ಧ ತಪವು. ತರುಣರು ಅಂಗಸಾಧನದಿಂದ ಶರೀರಬಲವನ್ನು ಹೆಚ್ಚಿಸಿಕೊಳ್ಳುವಂತೆ, ಸತ್ವಶಾಲಿಗಳು ಮಾನಸಿಕ ತಾಪಗಳನ್ನು ಸಹಿಸಿ ಮನೋಬಲವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ತಾರುಣ್ಯದಲ್ಲಿ ಪ್ರಾಪ್ತವಾಗುವ ದುಃಖ ವಿಪತ್ತುಗಳನ್ನು ಸಹಿಸುವದರಿಂದ ಮನೋಬಲವು ಹೆಚ್ಚುತ್ತದೆ; ಪ್ರತಿಜ್ಞೆಯು ನೆರವೇರುತ್ತದೆ; ಸಂಕಟಕ್ಕೆ ಎದುರಾಗುವ ಸ್ಫೂರ್ತಿಯು ಉತ್ಪನ್ನವಾಗುತ್ತದೆ. ಅರಸೇ, ನಿರ್ವಿಘ್ನವಾಗಿ ಕೀರ್ತಿಯನ್ನು ಸಾಧಿಸುವದು ಆಗದ ಮಾತು! ಲೋಕಕಲ್ಯಾಣದ ಕಾರ್ಯಗಳನ್ನು ಮಾಡಹೋದರೆ ಹಲವು ತರದ ವಿಘ್ನಗಳು ಕಟ್ಟಿಟ್ಟವುಗಳೇ! ಎಷ್ಟೋ ಕಷ್ಟವೂ ಆಗುವದು. ಆದರೆ ಅವೆಲ್ಲ ವ್ಯರ್ಥವಲ್ಲ; ನಿಜವಾಗಿ ವಿಚಾರಿಸಿ ನೋಡಿದರೆ ಅವುಗಳಿಂದ ಹಿತವೇ ಉಂಟು. ಮನಸ್ಸನ್ನು ತಿದ್ದಲಿಕ್ಕೆ ಕಷ್ಟವಿಪತ್ತುಗಳಂಥ ಶಿಕ್ಷಕರು ಅನ್ಯರಾರಿರುವರು? ಕಮ್ಮಾರನ ಸುತ್ತಿಗೆಯ ಪೆಟ್ಟುಗಳಂತೆ, ಅವು ಕರುಣವಿಲ್ಲದೆ ಮನಸ್ಸಿನ ಮೇಲೆ ಆಘಾತಗಳನ್ನು ಹಾಕುತ್ತ ಅದಕ್ಕೆ ಶುದ್ಧ ಸ್ವರೂಪವನ್ನು ಕೊಡುವವು. ಆದ್ದರಿಂದ ಮಹಾರಾಜನೆ ಇಂಥ ಕಷ್ಟಗಳಿಗೆ ಅಂಜಿ ತಪೋಭ್ರಷ್ಟನಾಗಿ ಸತ್ವಹೀನನಾಗುವದು ಸರ್ವಸಮರ್ಥನಾದ ನಿನಗೆ ಯೋಗ್ಯವೆನಿಸದು. ಈ ಮಾತನ್ನು ನಿನಗೆ ಎಷ್ಟೋ ಸಾರೆ ಹೇಳಿರುವೆನು. ಅದನ್ನು ನೀನು ಮತ್ತೂ ಮರೆಯುವೆ. ನೀನು ಸತ್ವಗೇಡಿಯಾಗಲಿಕ್ಕೆ ನನ್ನ ಸಲುವಾಗಿ ಎಷ್ಟು ಜನರ ಪ್ರಾಣಹಾನಿಯನ್ನು ಮಾಡಬೇಕೆಂದು ಹಿಂದೆಗೆಯುವದೊಂದು ಕಾರಣವುಂಟು. ಆದರೆ ನಾನು ನಿಶ್ಚಯವಾಗಿ ಹೇಳುತ್ತೇನೆ; ಈ ವೀರಾದಿವೀರರೆಲ್ಲರು ನಿನ್ನ ಸಲುವಾಗಿ ಯುದ್ಧ

ಮಾಡುವದಿಲ್ಲ; ತಮ್ಮ ನಿರ್ಮಲ ಸ್ವಾಮಿನಿಷ್ಠೆಗಾಗಿ, ಮಾತೃಭೂಮಿಯ ಮಾನರಕ್ಷಣೆಗಾಗಿ, ಸಾಮ್ರಾಜ್ಯದ ಕೀರ್ತಿರಕ್ಷಣೆಗಾಗಿ ಕಾದುತ್ತಿರುವವರು. ನೀನು ಮಾತ್ರ ಅವರಿಗೆ ಮಾರ್ಗದರ್ಶಕನಾಗಿರುವವನು. ನೀವೆಲ್ಲರು ಕೂಡಿ ನಿರ್ಮೋಹಿತರಾಗಿ ಈ ಕಾರ್ಯಗಳನ್ನು ನೆರವೇರಿಸುವದೇ ಧರ್ಮವು. ಇದುವೇ ನಿರ್ಮಲವಾದ ಕ್ಷಾತ್ರ ಧರ್ಮವು. ಕ್ಷಾತ್ರ ಧರ್ಮವನ್ನು ಅನುಸರಿಸುವವರು ಯುದ್ಧದಲ್ಲಿ ಎಂದೂ ಪರಾಙ್ಮುಖರಾಗುವದಿಲ್ಲ. ಹೀಗಿದ್ದು ನಶ್ವರವಾದ ದೇಹಗಳ ಮೋಹಕ್ಕೆ ಬಿದ್ದು, ನೀವಾಗಿಯೇ ನಿಮ್ಮ ಸತ್ವವನ್ನು ಮಾರಿಕೊಳ್ಳುವದು ಕ್ಷಾತ್ರ ಧರ್ಮವೇ? ನೀವೆಲ್ಲರೂ ಅತುಲ ಬಲಶಾಲಿಗಳಾಗಿದ್ದರೂ, ಮೋಹದಿಂದ ಸತ್ವಗೇಡಿಗಳಾದ್ದರಿಂದ ನಿಮ್ಮ ಬಲವೇ ನಿಮಗೆ ತಿಳಿಯದಂತಾಗಿದೆ. ನಿಮ್ಮೊಳಗಿನ ಸ್ತ್ರೀಯರೂ ಬಾಲಕರೂ ಕೂಡ ಪುರುಷರನ್ನು ತಲೆದೂಗಿಸುವ ಕೆಲಸ ಮಾಡುತ್ತಿರುವಾಗ ನೀವು ಸತ್ವಗೇಡಿಗಳಾಗಬಹುದೇ? ಈ ಹರ್ಷವರ್ಧನನ ಬೆಲೆಯಾದರೂ ಏನು? ಈಗಾದ ಯುದ್ಧದಲ್ಲಿ ಚಾಲುಕ್ಯರಿಗಿಂತ ಹರ್ಷರೇ ಹೆಚ್ಚಾಗಿ ಸತ್ತಿರುವರಲ್ಲವೇ? ನಿಮಗಿನ್ನೂ ಬಲವಿದೆ; ಸಹಾಯವೂ ಒದಗುವದುಂಟು. ಹೀಗಿದ್ದು ಆ ಮದಾಂಧನೊಡನೆ ಸಂಧಿಯನ್ನು ಬಯಸಬಹುದೇ? ಅನಿವಾರ ಸಂಕಟಗಳನ್ನಾದರೂ ಸಹಿಸಬಹುದು, ಮಾನಹಾನಿಯನ್ನು ಸಹಿಸಲಾಗದು; ಲೋಕದಲ್ಲಿ ಅತಿ ನೀಚ ಜನವು ಕೂಡ ತಮಗಾಗುವ ಅಪಮಾನವನ್ನು ಸಹಿಸುವದಿಲ್ಲ. ಹೀಗಿರಲು ಆ ತಾಮಸವೃತ್ತಿಯ ಅರಸು ಮಾತೃಭೂಮಿಯ ಮಾನಭಂಗವನ್ನು ಮಾಡಿದ್ದು ಚಾಲುಕ್ಯ ಸಾಮ್ರಾಜ್ಯದ ಮೂಗು ಕೊಯಿದದ್ದು ನಿಮಗೆ ಸಹನವೇ? ಇದಕ್ಕಾಗಿ ನಿಮ್ಮ ಜೀವವನ್ನು ತೃಣಕ್ಕೆ ಬಗೆದು ಯುದ್ಧ ಮಾಡುವದು ನಿಮ್ಮ ಕರ್ತವ್ಯವಲ್ಲವೇ?

ವೀರರು.— (ಖಡ್ಗ ಹಿರಿದು) ಯುದ್ಧ ಯುದ್ಧ!!

ಪುಲಿ.— (ಪಾದದಲಿ ತಲೆಯಿಟ್ಟು) ಗುರುವರ, ನಾನು ಅಜ್ಞನು; ನನ್ನನ್ನು ಕ್ಷಮಿಸು.

ದಿವ್ಯಾನಂದ.— ಕಲ್ಯಾಣಮಸ್ತು (ಹೊರಟೇ ಹೋಗುವರು.)

ಪುಲಿ.— (ಅತ್ತ ನೋಡಿ) ಮಹಾನುಭಾವರ ಸಾಮರ್ಥ್ಯ ವನ್ನರಿಯಲು ಯಾರಿಗೆ ಸಾಧ್ಯ!

ಪದ— ರಾ। ಭೀಮಪಲಾಸ, ತಾ। ತ್ರಿವಟ (ಧಾಟಿ— ಸ್ವಕುಲತಾರಕ ಸುತಾ)
ಯತಿಕುಲೇಂದ್ರ ಮಹಿಮಾ। ಸತತಂ। ನಿರವಿಸಲ್ಕೆ ಸಾಧ್ಯವೆಅಮವಾ॥
ಶವಕೆ ಜೀವನ। ವೆರೆಯುವ ಧಾಮ। ಸನ್ನುತನಾಮಾ ಗತಜನಪ್ರೇಮಾ॥ ॥

ದ್ವಾರಪಾಲಕ.— ಮಹಾರಾಜ, ಉಜ್ಜಯಿನಿಯ ಪ್ರತಾಪರಾಯರು ಬಾಗಿಲಲ್ಲಿ ಬಂದಿರುವರು.

ಪುಲಿ.— ಹೀಗೋ ಕಳಿಸು ಬೇಗ ಕಳಿಸು (ಹೋಗುವನು) ಇದೇನಾಶ್ಚರ್ಯವು? ಗುರುವಾಕ್ಯವು ಈಗಲೇ ಫಲಿಸಲಾರಂಭಿಸಿತೇ?

(ಪ್ರತಾಪರಾಯನೂ ಯೋಧಿನಿಯಾದ ಮೋಹಿನಿಯೂ ಬರುವರು)

ಪ್ರತಾ.— (ಕೈಮುಗಿದು) ಮಹಾರಾಜನೆ ನಾನು ಮೋಸಗಾರರ ಬಲೆಗೆ ಬಿದ್ದು ತಿಳಿಯದೆ ಮಾಡಿದ ಅಪರಾಧವನ್ನು ಕ್ಷಮಿಸಬೇಕು.

ಮೋಹಿನಿ.— ಕ್ಷಮಾಶೀಲರಾದ ಮಹಾರಾಜರು ಆಶ್ರಿತರ ತಪ್ಪುಗಳನ್ನು ಕ್ಷಮಿಸಬೇಕೆಂದು ನಾನೂ ಬೇಡಿಕೊಳ್ಳುತ್ತೇನೆ.

ಪುಲಿ.— ಆಗಲಿ ಆಗಲಿ; ಪ್ರತಾಪರಾಯರೇ, ನೀವು ದುಷ್ಟರ ಕಪಟ ಜಾಲದಲ್ಲಿ ಸಿಲುಕಿ ಹಾಗೆ ಆಚರಿಸಿದುದನ್ನು ಮೊದಲೇ ಕೇಳಿದ್ದೇವೆ. ಅಂದಬಳಿಕ ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡುವದೆಂತು? ಅದಿರಲಿ; ಇಷ್ಟರಲ್ಲಿ ನಿಮಗಿವರ ಪರಿಷ್ಕಾರವನ್ನು ಮಾಡಿ ನಿಮ್ಮನ್ನು ಇತ್ತ ಬರಮಾಡಿದವರಾರು?

ಪ್ರತಾ.— ಈ ಮೋಹಿನಿಯು! ಮತ್ತಿನ್ನಾರು? ಪರುಷಮುಟ್ಟಿದ ಲೋಹವು ಬಂಗಾರವಾಗುವಂತೆ, ನಿಮ್ಮ ನೆರವನೊಂದಿದ ಈಕೆಯು ಸತ್ವಯುಕ್ತಳಾಗಿ, ನಿನ್ನಿನ ರಾತ್ರಿ ತನ್ನ ಜನರೊಡನೆ ನನ್ನ ಸೈನ್ಯವನ್ನು ಮುತ್ತಿ ಹಣಿದು, ಕಡೆಗೆ ನನ್ನ ಕೈಯನೂ ಕಟ್ಟಿ ಚನ್ನಾಗಿ

ತಿಳಿಸಿದಳು. ಇದರಿಂದ ನನ್ನ ಕಣ್ಣಿಗೆ ಬಿದ್ದ ತಪ್ಪುಕಲ್ಪನೆಯು ಪರೆಯು ಹರಿಯದಿರುವದೇ? ಬಳಿಕ ಕೂಡಲೇ ಇತ್ತಬಂದೆವು. (ಮೋಹಿನಿ ಲಜ್ಜೆಯಿಂದ ತಲೆಬಾಗಿಸುವಳು.)

ಪುಲಿ.—ಸರಿಸರಿ, ಹಾಗಾದರೆ ಇದೀಗ ಸದ್ಗುರುವು, ಹೆಂಗಸರು ಕೂಡ ಪುರುಷರ ತಲೆಬಾಗಿಸುವ ಕಾರ್ಯ ಮಾಡುತ್ತಿರುವರೆಂದು ಗೌರವಿಸಿದ್ದು ಈ ಮೋಹಿನಿಯನ್ನೇ ಎಂಬಂತಾಯಿತು.

ಮೋ.— ಮಹಾರಾಜ, ಗುರುವರರು ಆಗಮಿಸಿ, ತಮ್ಮನುಪದೇಶಿಸಿದರೆಂಬದನ್ನು ಇದೀಗ ಬರಬರುತ್ತ ಕೇಳಿದೆವು. ಆದರೆ ಈ ಗೌರವಕ್ಕೆ ನಾನು ಪಾತ್ರಳಲ್ಲ.

ಪದ ರಾ॥ ತಿಲಕಕಾಂಬೋದ ತಾ॥ ತ್ರಿವಿಟ ಧಾಟಿ—ಮುಮುಸುಖಾಚಿ

ಕಲಿಗಳಾಗಿ ಸೇರಿಸಮರಾ। ತರಿದು ಮಾಳವಜನರಾ। ಈ ಕನ್ನಡ ಭಟಾಳಿ। ಯಶವಾಂತುದೀ ದಿವಸ ಧೀರಾ॥ಪ॥

ಅತಿಬಲಯುತರಹ। ತಮ್ಮ ಕ್ಷಾತ್ರಧರ್ಮದಾಳಿಗೆ। ತಡೆಯಾವ ಕಾರ್ಯದೀ ನೃವರಾ॥

ಪುಲಿ.— ಮೋಹಿನೀ, ನೀನು ನಿರುಪಮಗುಣೆಯೇ ನಿಜ. ಪ್ರತಾಪರಾಯರೇ ಸದ್ಯಕ್ಕೆ ಈ ಪ್ರಸ್ತಾಪವಿರಲಿ; ಪ್ರಸ್ತುತ ಕಾರ್ಯವನ್ನನುಸರಿಸುವಾ, ವೀರರೇ, ಈ ವರೆಗೆ ಗುರುವರರ ಪರಮೋಪದೇಶ ಶ್ರವಣ ಮಾಡಿದ ನಿಮಗೆ ನಾನು ಬೇರೆ ಏನನ್ನು ಹೇಳಬಲ್ಲೆನು? ಅವರ ಅನುಗ್ರಹದ ಫಲವು ಈಗಲೇ ತೋರಹತ್ತಿದೆ. ಹೊಸಹೊಸ ಸಹಾಯವು ಒದಗಹತ್ತಿದೆ; ಸೈನ್ಯವು ಹೆಚ್ಚಾಗಿದೆ; ಸಾಮರ್ಥ್ಯವು ದ್ವಿಗುಣಿತವಾಗಿದೆ; ಉತ್ಸಾಹವು ಇಮ್ಮಡಿ ಮುಮ್ಮಡಿಯಾಗಿದೆ; ಪ್ರತಾಪದ ತೇಜವು ಪಸರಿಸತೊಡಗಿದೆ. ಇಂತಹ ನಮಗೆ ಕೇವಲ ಹರ್ಷವರ್ಧನನೇ ಏಕೆ, ದೇವದಾನವರಾದರೂ ಈಡಾಗಬಲ್ಲರೇ? ವೀರರೇ ಇನ್ನು ಮೇಲೆ ಯಶಸ್ಸಂಪಾದನೆಯೇ ನಮ್ಮ ಉದ್ದೇಶವು! ಆತ್ಮರಕ್ಷ

ಣೆಯು ಉದ್ದೇಶವಲ್ಲ!! ನಾಳಿನ ದಿವಸ ಹರ್ಷವರ್ಧನನಿಗೆ ಚನ್ನಾಗಿ ಕೈ ತೋರಿಸಿಯೇ ಬಿಡೋಣ.

ಎಲ್ಲರು.— ನಿಶ್ಚಯ! ನಾಳೆ ಹರ್ಷನನ್ನು ಗೆಲ್ಲುವದು, ಇಲ್ಲವೆ ಸಾಯುವದು.

ಪುಲಿ.— ನಡೆಯಿರಿ, ಇನ್ನು ವಿಶ್ರಾಂತಿಗೊಳ್ಳಿರಿ. ಬೆಳಗಿನಲ್ಲಿ ಬೇಗ ಯುದ್ಧಕ್ಕೆ ಸನ್ನದ್ಧರಾಗಿರಿ.

ವೀರರು.— ಜಯಕರ್ನಾಟಕ ಭೂಮಾತೆ! ಜಯ ಚಾಲುಕ್ಯ ಸಾರ್ವಭೌಮ!

ಪುಲಿ.— ಸೇನಾಪತಿಗಳೇ, ಸಾಮಂತರಾಜರ ಹಾಗು ಅವರ ಸೈನಿಕರ ಉಪಚಾರವು ಹೇಗೆ ಸಾಗಿದೆ ನೋಡಿಕೊಳ್ಳಿರಿ.

ವೀ. ವ.— ಮಹದಾಜ್ಞಾ. (ಹೋಗುವರು)

ಅಂಕ ೫.

೧ನೇ ನೋಟ.

(ಕಾಳಿ, ರಣಭೇರಿ, ಕೋಲಾಹಲ, ಹರಹರ ಮಹಾದೇವ,
ತುಮುಲ ಯುದ್ಧ ದರ್ಶನ; ತೆರೆ.)

೨ ನೇ ನೋಟ.

(ಭಾವಣಿಯ ಮುಂಭಾಗದಲ್ಲಿ ರಣಭೂಮಿಯಿಂದ ಬಂದ ರನ್ನನು)

ರನ್ನ.—(ಅತ್ತಿತ್ತ ತಿರುಗಾಡಿ ನೋಡಿ ಬೇಸತ್ತು ನಿಂತು) ಉಶ್, ಛೇ ಛೇ, ಸಾಕಾಗಿ ಹೋಯಿತಪ್ಪ! ನಮ್ಮ ಕೊಠಡೆಪ್ಪನನ್ನು ಹುಡುಕಿ ಹುಡುಕಿ ಕಂಗಾಲಾಗಿ ಬಿಟ್ಟೆನು. ಅತ್ತ ನಮ್ಮ ಸೇನಾಪತಿಗಳು ತಡವಾದರೆ ಸಿಟ್ಟು ಮಾಡುವರು. ಇತ್ತ ಕೊಠಡೆಪ್ಪನವರು ಸುಳಿವೇ ಇಲ್ಲದೆ ಹೋಗಿರುವರು. ಇದೊಳ್ಳೇ ಪೀಕಲಾಟ! ನಾನಾದರೂ ಏನ ಮಾಡಲಿ! (ಕೆಳಗೆ ನೋಡಿ) ಇದೇನು...... (ಬಗ್ಗಿ ಕಾಗದ ಚೀಲವನ್ನು ತಕ್ಕೊಂಡು) ಕಾಗದ ಚೀಲ (ತೆಗೆದು) ಏನೇನೋ ಬರೆದಿರುವರು...... ಎಂಥ ಬರೆಹವಿದು......... ಇವರು ವೈರಿಗಳಿಗೆ ಎಂದೂ ಬಾಗುವದಿಲ್ಲ. ಆಂ ಇದೇನು 'ಇವರು ವೈರಿಗಳಿಗೆ ಎಂದೂ ಬಾಗುವದಿಲ್ಲ.' ಇದು ನಮ್ಮ ಸಲುವಾಗಿಯೇ ಬರೆದದ್ದಾಗಿರಬೇಕೇನು? ಇರಲಿ ಮತ್ತೆ (ನೋಡುತ್ತ) ಚನ್ನಾಗಿ ತಿಳಿಯುವಂತಿಲ್ಲ. ಅಲ್ಲಿ ಇಲ್ಲಿ ಅಷ್ಟಿಷ್ಟು ಓದಲಿಕ್ಕೆ ಬರುವಂತಿದೆ. ಹಾಂ "ಶರಣ ಬಂದವರನ್ನು ಜೀವ ಕೊಟ್ಟಾದರೂ ಉಳಿಸುವರು" ಭಲೆ, ಮತ್ತೇ...... ಮತ್ತೇನೂ ತಿಳಿಯುವಂತಿಲ್ಲ. ಇದನ್ನು ಯಾರು ಬರೆದಿರಬಹುದು? (ಯೋಚನೆ) ಇತ್ತಿತ್ತಲಾಗಿ ನಮ್ಮನ್ನು ನೋಡಬಂದ ಆ ಚೀನದ ಪ್ರವಾಸಿಯು ಬರೆದಿರಬಹುದೇನು? ನಿಜ ನಿಜ; ಆತನೇ ಹೀಗೆ ನಮ್ಮನ್ನು ವರ್ಣಿಸಿರಬಹುದು. (ನೋಡಿ) ಇದೋ ಅವನೇ ಬಂದನು. ಇದು ನಿನ್ನದೇನಯ್ಯಾ?

ಹುವೆನ್.— ಹೌದು ಮಾಲಾಯೂ, ಇದನ್ನ ಬಲು ಶೋಧಿಸಿದೆನು.

ರನ್ನ.— ಹಾಗಾದರೆ ತೆಗೆದುಕೊಳ್ಳು (ಕೊಡುವನು.)

ಹುವೆನ್.— ನೀವು ಬಲು ಪ್ರಾಮಾಣಿಕರು ನೋಡಿ.

ರನ್ನ.— ಏನಯ್ಯಾ ನೀನು ಚೀನದವನಲ್ಲವೇ?

ಹುವೆನ್.— ಹೌದ,

ರನ್ನ.— ಇಷ್ಟು ದೂರಿನ ನಮ್ಮ ದೇಶಕ್ಕೆ ಬಂದುದೇಕೆ?

ಹುವೆನ್.— ನಾನಾದರೋ ಬೌದ್ಧಧರ್ಮಗ್ರಂಥಗಳ ಅಭ್ಯಾಸಕ್ಕೆ ಆಗಿ ಬಂದೆನು. ಆದರೆ ಅದಕ್ಕೆ ಹೆಚ್ಚಾಗಿ ದಕ್ಕಣದ ಶೈವ ಧರ್ಮದ ಈ ಚಾಲುಕ್ಯರ ಕಲಿತನವನೇ ಅರಿತದ್ದಾಯಿತು ಸವಾಮಿ.

ರನ್ನ.— ಇನ್ನೂ ಅರಿಯುಬಹುದು ಇವರ ಕಲಿತನವನ್ನು ಇನ್ನೂ! ಇರಲಿ ನೀನು ಕನ್ನಡದಲ್ಲಿ ಮಾತಾಡುವೆ; ಕನ್ನಡದಲ್ಲಿ ಬರೆಯುವೆ. ನಿಮ್ಮಲ್ಲಿಯೂ ಕನ್ನಡವು ನಡೆಯುತ್ತದೇನು?

ಹುವೆನ್.— ಇಲ್ಲ ಸವಾಮಿ. ಅಲ್ಲಿಲ್ಲ ಕನ್ನಡದ ದೊನಿಯು ಮಾತ್ರ ಕೇಳಿಸುತ್ತೆ.

ರನ್ನ.— (ಸ್ವಗತ) ಅಹಾ! ಇನ್ನು ಆದರಾಚೆಯಲ್ಲಿ ಕೇಳಿಸಬಹುದು. (ಪ್ರಕಾಶ) ಹಾಗಾದರೆ ನಿನಗೆ ಕನ್ನಡವು ಹೇಗೆ ಬರುವದು?

ಹುವೆನ್.— ನಾನದನ್ನ ಅಲ್ಪ ಸೊಲಪಕಲಿತಾ ಇದ್ದೇನೆ. ಹಾಂಗೆ ಇರದಿದ್ದರೆ ನಮಗೂ ನಿಮಗೂ ವೆವಹಾರವು ಎಂತು ನಡೆಯುಬೇಕು?

ರನ್ನ.— ಹೀಗೋ ಅಂದರೆ ಈ ಉಡುಪುಗಳನಷ್ಟು ಏಕೆ ಬಿಡಲಿಲ್ಲ.

ಹುವೆನ್.— ಅಹಹಹ! ಇವುಗಳಿಂದೇನು ತೊಂದರೆ ಆಗುವದು ಸವಾಮಿ? ಇರಲಿ, ಅಯ್ಯಾ, ನನ್ನ ಬರೆಹವು ದೊರೆಯಿತು, ನಿಮ್ಮ ಉಪಕಾರವು ಆಯಿತು ಇನ್ನು ಹೋಗುವೆನು

ರನ್ನ.— ಸ್ವಲ್ಪ ತಡೆಯಿರಿ; ಇವುಗಳನ್ನೆಲ್ಲ ಬರೆದುಕೊಂಡು ಏನು ಮಾಡುವಿರಿ?

ಹುವೆನ್.— ಈ ದೇಶದ ಉದಾತ್ತವಾದ ನಡವಳಿಕೆಗಳನ್ನು ನಮ್ಮ ಜನರಿಗೆ ತಿಳಿಸುವೆನು. ಇದರಿಂದ ಅವರಲ್ಲಿ ಏನಾದರೂ ಹೊಸದು ಪ್ರಗತಿ ಆದರೆ ಆಗಲಿ!

ರನ್ನ.— ನಿಜ.

ಹುವೆನ್.— ಹೋಗಿಬರುವೆ ಸವಾಮಿ (ಕೈಮುಗಿದು ಹೊರಡುವನು.)

ರನ್ನ.— ಆಗಲಿ (ತಲೆಗೊಟ್ಟು). ನೋಡಿದಿರಾ ಈ ಜನರ ಸಾಹಸವನ್ನು! ಇವರು ಎಲ್ಲ ದೇಶಗಳನ್ನು ಸಂಚರಿಸಿ ವಿಶ್ವ ಜ್ಞಾನವನ್ನೇ ಸಂಪಾದಿಸುವರು. ಇದೊಂದಕ್ಕೆ ಮಾತ್ರ ನಮ್ಮ ಸಮಾಜದಲ್ಲಿ ಯಾಕೋ ಒಪ್ಪಿಗೆಯಿಲ್ಲ. (ನೋಡಿ) ಹಾ! ಬಂದರಪ ಕೊಠಡೆಪನವರು ಹೀಗೆ (ಹೆಜ್ಜೆಯನಿಕ್ಕುವ ಅಣಿಕೆ), ಏನು ಕೊಠಡೆಪ್ಪನವರೇ ನಿಮ್ಮನ್ನು ಹುಡುಕಿ ಹುಡುಕಿ, ಬೇಸತ್ತು ಬಸವಳಿದೆನು; ನೀವೇನು ಅಸ್ತರಾಗಿದ್ದಿರೋ?

ಕೊಠಡಿ.— ಅದೇಕೆ ರನ್ನಣ್ಣ, ನಾನು ಇಲ್ಲಿಯೇ ಇದ್ದೆನು.

ರನ್ನ.— ಇಲ್ಲಿಯೇ ಇದ್ದೆನು, ಏನು ಇಲ್ಲಿಯೇ ಇದ್ದೆನು, ಅಃ ಪಹರೆಯ ಸ್ವಾರನಂತೆ ಈ ಛಾವಣಿಯನ್ನೆಲ್ಲ ಸುತ್ತು ಹಾಕಿ ಬಂದೆನು ನಾನು! ಇಲ್ಲಿಯೇ ಇದ್ದರಂತೆ ಇಲ್ಲಿಯೇ! ಇಲ್ಲಿಯೇ ಏನು ಭೂಗರ್ಭದಲ್ಲಿ ಸೇರಿಕೊಂಡಿದ್ದಿರೋ?

ಕೊ.— (ನಗೆಯಿಂದ ಭುಜದ ಮೇಲೆ ಕೈಯಿಟ್ಟು) ಇದೇನು ರನ್ನಣ್ಣ ನಿನ್ನ ವಿಚಾರ? ಒಳಗೆ ಸ್ವಲ್ಪ ಊಟ ಮಾಡುತ್ತ ಕುಳಿತಿದ್ದೆನು. ಎಲ್ಲಿಯೂ ಹೋಗಿಲ್ಲ.

ರನ್ನ.— ಹಾಂ ಊಟವನ್ನೋ, ಇಷ್ಟು ಮುಂಜಾನೆಯೇ ಕೈ ಹಚ್ಚಿರುವಿರಿ?

ಕೊ.— ನಿನ್ನಿನ ದಿವಸ ಕೆಲಸದ ಗೊಂದಲದಲ್ಲಿ ಸಾಯಂಕಾಲದ ಊಟಕ್ಕೆ ಅವಕಾಶವೇ ಸಿಗಲಿಲ್ಲ. ಅದಕ್ಕಾಗಿ........

ರನ್ನ.—ಅದಕ್ಕಾಗಿ ಚನ್ನಾಗಿ ಇಷ್ಟಿಷ್ಟೇ ತೆಗೆದುಕೊಂಡಿರೋ?

ಕೊ.— ಬಿಡು ರನ್ನಣ್ಣ, ಅದನ್ನೇನು ಮಾಡುವೆ. ಈಗ ನೀನೇಕೆ ಬಂದೆ ಹೇಳು ಮೊದಲು?

ರನ್ನ.— ನಮ್ಮ ಸೈನ್ಯದ ಸಾಯಂಕಾಲದ ಸಾಹಿತ್ಯಗಳನ್ನು ಒಯ್ಯಲಿಕ್ಕೆ ಬಂದೆನು. ಮತ್ತಿನ್ನೇನು?

ಕೊ.— ಹೀಗೋ?

ರನ್ನ.— ಹೀಗೆಯೇ! ಅವುಗಳನ್ನೆಲ್ಲ ಬೇಗನೆ ಹೇರಿಸಿಕೊಡಿರಿ. ಅವುಗಳನ್ನು ಸಾಗಿಸಿಕೊಂಡು ನಾನು ಬೇಗ ದೇವದುರ್ಗಕ್ಕೆ ಹೋಗಬೇಕಾಗಿದೆ.

ಕೊ.— ದೇವದುರ್ಗಕ್ಕೆ?

ರನ್ನ.— ಹೌದು ನಮ್ಮ ಸೇನಾಪತಿ ವೀರವರ್ಧನರು ತಮ್ಮ ಸೈನ್ಯದೊಡನೆ ಈಗ ದೇವದುರ್ಗದಲ್ಲಿಯೇ ಇರುವರು.

ಕೊ.— ಏನೇನೋ ರನ್ನಣ್ಣ ನನಗೆ ಯಾವದೂ ತಿಳಿಯದು. ನಾನು ನಿನ್ನಿನ ಯುದ್ಧದ ವೃತ್ತಾಂತವನ್ನೇ ಕೇಳಲಿಲ್ಲ.

ರನ್ನ.— ಕೇಳಲಿಲ್ಲವೋ? ಬಲು ಚಮತ್ಕಾರದ ಯುದ್ಧವು ನಿನ್ನಿನದು.

ಕೋ.— ಇಲ್ಲ. ನಿನ್ನೆ ಸಮಯದೊರೆಯದ್ದರಿಂದ ಊಟವನ್ನು ಸಹ ಮಾಡಲಿಲ್ಲವೆಂದು ಹೇಳಲಿಲ್ಲವೇ ಆಗಲೇ? ತುಸು ಅವಕಾಶವಿದ್ದರೆ ಹೇಳುವೆಯಾ?

ರನ್ನ.— ನನಗೇನು ಸಂಜೆಯೊಳಗಾಗಿ ದೇವದುರ್ಗಕ್ಕೆ ಮುಟ್ಟಿ ದರಾಯಿತು.

ಕೊ.— ಹಾಗಾದರೆ ಹೇಳು; ನಿನ್ನೆ ಚಾಲುಕ್ಯರು ಹರ್ಷರನ್ನು ಹೇಗೆ ಹೊಡೆದೋಡಿಸಿದರು? ಈಗ ನಮ್ಮ ಸೈನ್ಯವು ದೇವದುರ್ಗ ದಲ್ಲಿಯೇಕೆ?

ರನ್ನ.— ಕೇಳಿರಿ ಹಾಗಾದರೆ, ನಿನ್ನೆ ಬೆಳಗಿನಲ್ಲಿಯೇ ನಮ್ಮ ಸೈನ್ಯವು ಉತ್ಸಾಹದಿಂದ ರಣಭೂಮಿಯಲ್ಲಿ ಸನ್ನದ್ಧವಾಯಿತು.

ಕೊ.— ಸರಿ. ದಿವ್ಯಾನಂದರ ಪ್ರಭಾವದಿಂದ ಅವರ ಶೂರ ತನವು ಜಾಗ್ರತವಾಗಿ ಹೋಗಿತ್ತು.

ರನ್ನ.— ಅದನ್ನು ಕಂಡು ಹರ್ಷರು ಭೀತಿಗೊಂಡರು.

ಕೊ.— ಅವರು...ಮೊನ್ನಿನ ಯುದ್ಧದಲ್ಲಿ ತಾವು ಚಾಲುಕ್ಯ ರನ್ನು ಹಣ್ಣು ಮಾಡಿದೆವೆಂದು ತಿಳಿದುಕೊಂಡಿರಬಹುದು.

ರನ್ನ.— ನಿಜ. ಆದರೂ, ಚತುರರಾದ ಹರ್ಷರು ಕೂಡಲೆ ಸಿದ್ಧರಾಗಿ ಎದುರಾದರು.

ಕೊ.— ಮುಂದೆ,

ರನ್ನ.— ಬಳಿಕ ಪ್ರಳಯಕಾಲದ ಮೇಘಗಳು ಒಂದನ್ನೊಂದ ಪ್ಪಳಿಸುವಂತೆ ಎರಡೂ ಸೈನ್ಯಗಳು ಒಂದರಮೇಲೊಂದು ಏರಿಹೋಗಿ ಹೊಡೆದಾಡಹತ್ತಿದವು. ಆಗ ತುಳಿತದಿಂದೇಳುವ ಕೆಂಧೂಳು ಆಕಾ ಶಕ್ಕೆ ಅಡರಿ, ಕತ್ತಲೆಗವಿಸಿತು; ಅದರಲ್ಲಿ ಮಿಂಚುವ ಖಡ್ಗಗಳೇ ಮಿಂಚಾಗಿ ಹೊಳೆದವು; ಭಟರಬ್ಬರವೇ ಗುಡುಗಾಗಿ ಗದ್ದರಿಸಿತು; ಮೇಲಕ್ಕೆ ಚಿಮ್ಮಿ ಕೆಳಗೆ ಬೀಳುವ ರಕ್ತವೇ ಮಳೆಯಾಗಿ ಸುರಿಯಿತು.

ಕೊ.— ಅಬ್ಬಬ್ಬ! ಅಲ್ಲಿಂದ?

ರನ್ನ.— ಚಾಲುಕ್ಯರ ಬಲವಾದ ಹೊಡತಗಳಿಗೆ ಹರ್ಷರು ಹಿಂದೆ ಸರಿಯಹತ್ತಿದರು.

ಕೊ.— ಭಲೆ? ಮುಂದೆ,

ರನ್ನ.— ಚಾಲುಕ್ಯರು ಹರ್ಷರನ್ನು ಪಶ್ಚಿಮದಿಂದಲೂ ದಕ್ಷಿಣದಿಂದಲೂ ಒತ್ತಿ ಸರಿಸಹತ್ತಿದರು. ಪೂರ್ವಕ್ಕೆ ಮಹಾದೇವನ ಗುಡ್ಡಗಳುಂಟು. ಆ ಭಾಗವನ್ನು ಬೇಕಂತೆಯೇ ಬಿಟ್ಟಿದ್ದರು. ಉತ್ತರಕ್ಕೆ ಮಾತ್ರ ಹರ್ಷರಿಗೆ ಸರಿಯಲವಕಾಶವು. ಆದರೆ ಆ ದಿಕ್ಕಿಗೆ ಹಿಂದೆ ಅವರ ಛಾವಣಿಯೂ ಆದರ ಹಿಂದೆ ನರ್ಮದೆಯೂ ಇದ್ದವು.

ಕೊ.— ಸರಿ. ಸರಿ.

ರನ್ನ.— ಚಾಲುಕ್ಯರು ಆವೇಶದಿಂದ ಜಡಿಯಹತ್ತಿದ್ದರಿಂದ ಬರಬರುತ್ತ ಸಂಗ್ರಾಮವು ಹರ್ಷರ ಛಾವಣಿಯನ್ನೇ ಹೊಕ್ಕಿತು.

ಕೊ.— ಕನ್ನಡ ವೀರರು ನಿಜವಾಗಿಯೂ ಶೂರರು.

ರನ್ನ.— ಛಾವಣಿಯು ಸಮೂಲ ನಾಶವಾಯಿತು. ಹರ್ಷರ ಎಷ್ಟೋ ಸಾಮಾನುಗಳು ನಮ್ಮವರಿಗೆ ಸಿಕ್ಕಬಿಟ್ಟವು.

ಕೊ.— ಅಲ್ಲಿಂದ?

ರನ್ನ.— ಚಾಲುಕ್ಯರು ಹರ್ಷರನ್ನು ಮತ್ತಿಷ್ಟು ಹಿಂದೆ ಸರಿಸಿದರು. ಆಗ ಹರ್ಷರ ಹಿಂದೆಯೇ ನರ್ಮದಾನದಿಯು.

ಕೊ.— ಇದೊಂದು ಅನುಕೂಲವೇ! ಮುಂದೆ?

ರನ್ನ.— ಹೌದು. ಇದೇ ಹೊತ್ತಿಗೆ, ಗುಡ್ಡಗಳಲ್ಲಿ ಅಡಗಿದ್ದ ನಮ್ಮ ಸೈನ್ಯದ ಮತ್ತೊಂದು ಭಾಗವು ಪೂರ್ವದಿಂದ ಹರ್ಷರ ಮೇಲೆ ಬಿದ್ದು ತುಂಡರಿಸಹತ್ತಿತು. ಆಗಂತೂ ಹರ್ಷರ ಹೌಹಾರಿತು. ಎಲ್ಲ ಕಡೆಗೂ ಹಾಹಾಕಾರವೇ ತೋರಹತ್ತಿತು. ಇವನ್ನು ತಿಳಿದು ಹರ್ಷವರ್ಧನನು ಕೆರಳಿದ ಸಿಂಹವಂತೆ ಗರ್ಜಿಸುತ್ತ ಮುಂದೆ ಬಂದು ಭಯಂಕರವಾಗಿ ಹೋರಾಡಹತ್ತಿದನು.

ಕೊ.— ಆತನೂ ಅಂಥ ಶೂರನೇ! ಅಲ್ಲಿಂದ?

ರನ್ನ.— ನಮ್ಮ ಮಹಾರಾಜರಾದರೂ ಅದಕ್ಕೆ ತಕ್ಕಂತೆ ಪ್ರತಿಭಟಿಸಿ ಹೋರಾಡಿದರು.

ಕೋ.— ಶಾಬಾಸ್ ಮುಂದೆ?

ರನ್ನ.— ಆಗಬಂದೇ ಸವನೆ ಮೂರು ತಾಸುಗಳ ವರೆಗೆ ನಡೆದ ಯುದ್ಧವು ಅತಿ ನಿಕರವಾಗಿತ್ತು. ಆಗಿನ ಕನ್ನಡಿಗರ ರಣೋನ್ಮತ್ತತೆಯನ್ನೂ ಚಪಲತೆಯನ್ನೂ ವರ್ಣಿಸಬಹುದಾಗಿತ್ತು. ಕಡೆಗೆ ಇವರ ಬಿರುವಿನ ಇರಿತಗಳಿಗೆ ಈಡಾಗದೆ ಹರ್ಷರು ಮತ್ತಿಷ್ಟು ಹಿಂದೆ ಸರಿದು ನದಿಯ ಒಡಲಲ್ಲಿಳಿದರು.

ಕೊ.— ಇದು ನಮ್ಮವರಿಗೆ ಮತ್ತಿಷ್ಟು ಅನುಕೂಲ!

ರನ್ನ.— ಅಲ್ಲದೆ ಮತ್ತೆ, ಅವರು ಕೆಳಗಾದರು ನಮ್ಮವರು ಮೇಲಾದರು. ಹರ್ಷರ ಕೈ ನಿಂತು ಹೋಯಿತು. ಚಾಲುಕ್ಯರು ಹರ್ಷರನ್ನು ಮನಬಂದಂತೆ ತುಂಡರಿಸಿದರು. ಆಗ ನದಿಯ ಕಡಿವಾಡಿಯಿಂದ ಹರಿದು ಬರುವ ರಕ್ತದ ಹರಿಗಳು, ಮಳಲನ್ನು ನೆನೆಯಿಸಿ ಪ್ರವಾಹವನ್ನು ಕೂಡಿಸವು. ನರ್ಮದೆಯು ಕೆನ್ನೀರುಗಳಿಂದ ರಂಜಿತಳಾಗಿ ಹರಿಯುತ್ತಿದ್ದಳು.

ಕೊ.— ಅಬ್ಬಬ್ಬ ಇದೆಂತ ಘೋರ ಸಂಗ್ರಾಮವು?

ರನ್ನ.— ನಿಜವೇ! ನಾವು ಇಂದಿನ ವರೆಗೆ ಮಾಡಿದ ಕಾಳಗಗಳಲ್ಲೆಲ್ಲ ಇದುವೇ ದೊಡ್ಡದು.

ಕೊ.— ಇದರಲ್ಲಿ ಕನ್ನಡಿಗರು ಸತ್ವಶಾಲಿಗಳೆಂದೇ ಜಯಹೊಂದಿದರು.

ರನ್ನ.— ನಮ್ಮ ಮಹಾರಾಜರ ದಿವ್ಯಪ್ರಭಾವವೂ ಅದಕ್ಕೆ ಜೋಡಾಯಿತು.

ಕೊ.— ದೈವಬಲವಾದರೂ ಚನ್ನಾಗಿದ್ದಿತೆಂದು ಹೇಳಬಹುದು.

ರನ್ನ.— ಧರ್ಮಬಲವೇ ದೈವಬಲವು! ಸದ್ಧರ್ಮಾಚರಣೆಯು ವರಿಗೆ ಗೆಲವು ಕಟ್ಟಿಟ್ಟದ್ದೇ! "ಯತೋ ಧರ್ಮಸ್ತತೋ ಜಯಃ"

ಕೊ.— ನಿಜ ನಿಜ! ರನ್ನಣ್ಣ ಮುಂದೆ ಹರ್ಷರ ಗತಿಯೇ ನಾಯಿತು?

ರನ್ನ.— ಹರ್ಷರು ಬಳಿಕ ನದಿಯನ್ನು ದಾಟಲು ಯತ್ನಿಸಿದರು. ಆದರೆ ತೆಪ್ಪ ಮೊದಲಾದವುಗಳನ್ನು ಕಟ್ಟಿಕೊಂಡು ವ್ಯವಸ್ಥೆಯಿಂದ ದಾಟಲು ಅವಕಾಶವೆಲ್ಲಿ? ಅದರಿಂದ ಎಷ್ಟೋ ಜನರು ನದೀಪಾಲಾದರು. ಗಜಗಳೇ ಮೊದಲಾಗಿ ಅಲ್ಪಸ್ವಲ್ಪ ಸೈನ್ಯವು ಹಾಗೂ ಹೀಗೂ ಪಾರಾಯಿತು. ಹರ್ಷವರ್ಧನನೂ ಸುದೈವದಿಂದ ಬದುಕಿ ಪಾರಾದನು. ಮುಂದೆ ಅವನು ಉಳಿದಷ್ಟು ಜನರೊಡನೆ ದೇವದುರ್ಗವನ್ನು ಆಶ್ರಯಿಸಿದನು. ಇದನ್ನು ಕೇಳಿ ನಮ್ಮ ಸೇನಾಪತಿ ವೀರವರ್ಧನರು ಮಹಾರಾಜರ ಅಪ್ಪಣೆಯಿಂದ ಸೈನ್ಯದೊಡನೆ ನದಿಯನ್ನು ದಾಟಿ ದೇವದುರ್ಗಕ್ಕೆ ಮುತ್ತಿಗೆ ಹಾಕಿರುವರು.

ಕೊ.— ಒಳಿತೇ ಸರಿ. ಯುದ್ಧವು ಕೊನೆಗಾಣಬೇಕಲ್ಲ. ಈಗ ಹರ್ಷವರ್ಧನನ ಅಭಿಪ್ರಾಯವೇನು?

ರನ್ನ.— ಅಭಿಪ್ರಾಯವೇನು? ಎಲ್ಲವೂ ಇಳಿದು ಹೋಗಿದೆ. ಇದ್ದಷ್ಟು ಜನರೊಡನೆ ಬದುಕಬೇಕೆಂದು ಅವನು ಒಡಂಬಡಿಕೆಯನ್ನು ಬೇಡಿಕೊಂಡನು. ಇದಕ್ಕಾಗಿ ಹರ್ಷರ ಕಡೆಯಿಂದ ಬಂದ ರಾಯಭಾರಿಯನ್ನು ನಮ್ಮ ಸೇನಾಪತಿಗಳು ಮಹಾರಾಜರ ಕಡೆಗೆ ಕಳಿಸಿದರು.

ಕೊ.— ಸೊಕ್ಕೇರಿ ಬಂದ ಹರ್ಷರಾಜನು ಚನ್ನಾಗಿ ಹಣ್ಣಾದನು. ಮುಂದೆ?

ರನ್ನ.— ನಮ್ಮ ಮಹಾರಾಜರು, 'ಹರ್ಷವರ್ಧನನು ನಮಗೆ ಶರಣು ಬಂದು ಮಾಂಡಲಿಕನಾಗಿರಬೇಕೆಂತಲೂ, ವರ್ಷವರ್ಷಕ್ಕೆ

ಕಪ್ಪ ಕೊಡಬೇಕೆಂತಲೂ ಆ ರಾಯಭಾರಿಯೊಡನೆ ಹೇಳಿ ಕಳಿಸು ತ್ತಿದ್ದರು.......

ಕೊ.— ಆದರೇ.

ರನ್ನ.—ಆದರೆ ಅಲ್ಲಿಯೇ ಇದ್ದ ರಣಮಲ್ಲನು, ಯುದ್ಧಾರಂಭದಲ್ಲಿ ತಾವು ಹರ್ಷವರ್ಧನನಿಂದಲೇ ಕರ್ನಾಟಕ ವಿಜಯಧ್ವಜವನ್ನು ಸ್ಥಾಪಿಸಹಚ್ಚುವೆನೆಂದು ಮಾಡಿದ ಪ್ರತಿಜ್ಞೆಯನ್ನು ನೆನಪು ಮಾಡಿ ಕೊಟ್ಟನು.

ಕೊ.— ಸರಿ ಸರಿ. ಆ ವೃದ್ಧವೀರನು ಒಳ್ಳೇ ಪ್ರಸಂಗಾವಧಾನಿಯೂ ಆಗಿರುವನು

ರನ್ನ.—ಬಳಿಕ ಮಹಾರಾಜರು, ರಣಮಲ್ಲನ ಮಾತಿಗೆ ತಲೆದೂಗಿ, ಹರ್ಷವರ್ಧನನು ದೇವದುರ್ಗದ ಕೊತ್ತಳದ ಮೇಲೆ ಕರ್ನಾಟಕ ರಾಷ್ಟ್ರಧ್ವಜವನ್ನು ತಾನೇ ನಿಲ್ಲಿಸಿ, ನಮ್ಮ ಕಡೆಗೆ ಬರಬೇಕೆಂದು ಹೇಳಿ ಕಳುಹಿ ಬಿಟ್ಟರು.

ಕೊ.— ಹರ್ಷನು ಇದಕ್ಕೆ ಒಪ್ಪಿಕೊಳ್ಳಬಹುದೋ?

ರನ್ನ.— ಒಪ್ಪಿಕೊಳ್ಳದಿದ್ದರೆ, ಅಃ ಅವನ ಗತಿಯೇನು? ನಾನು ಬರುವಾಗ ಆತನು ಹಾಗೆಯೇ ಮಾಡುವೆನೆಂದು ತನ್ನ ದೂತನೊಡನೆ ಹೇಳಿ ಕಳುಹೇ ಬಿಟ್ಟಿದ್ದನು.

ಕೊ.— ಭಲೇ ಶಾಬಾಸ್ ಇನ್ನು ಚಾಲುಕ್ಯರ ಪ್ರತಾಪಕ್ಕೆ ಎದುರೇ ಇಲ್ಲ ಬಿಡು. ನಮ್ಮ ಮಹಾರಾಜರ ಕೀರ್ತಿಯು ದಿಗಂತದ ವರೆಗೆ ಹಬ್ಬಿತೆಂಬಲ್ಲಿ ಸಂದೇಹವಿಲ್ಲ. ಇದನ್ನು ಕೇಳಿ ಸಮುದ್ರದ ಆಚೆಯ ಅರಸರು ಕೂಡ ಹೆದರಬಹುದು.

ರನ್ನ.— ಈ ಕನ್ನಡ ನಾಡತಾಯಿಯ ಸತ್ವವೇ ಹಾಗಿರುವದು. ಈಕೆಯ ಮಹಾಗರ್ಭಜನಿತರಾದವರಿಗೆ ಅಪಜಯವೆಲ್ಲಿ?

ಕೊ.— ಪರವಿಲ್ಲ ರನ್ನಣ್ಣ! ಇದನ್ನು ಕೇಳಿ ಬಲು ಆನಂದ ವಾಯಿತು. ಇನ್ನು ನನಗೆಷ್ಟು ಕೆಲಸಗಳು ಬಂದರೂ ದಣಿವಿಲ್ಲ ನೋಡು. ನಿನಗೇನು ಬೇಕು ಹೇಳಿನ್ನು?

ರನ್ನ.—ನಡೆಯಿರಿ, ಬೇಗನೆ ಎಲ್ಲ ಸಾಹಿತ್ಯಗಳನ್ನು ಹೇರಿಸಿಕೊಡಿರಿ. ನಾನು ಹೋಗುವೆನು. ಸೇನಾಪತಿಗಳು ಸಿಟ್ಟು ಮಾಡುವರು. ಇದೋ ಇನ್ನೊಂದು ಮಾತು. ಹರ್ಷವರ್ಧನನು ದೇವದುರ್ಗದ ಕೋಟೆಯ ಮೇಲೆ ಕರ್ನಾಟಕ ವಿಜಯ ಪತಾಕೆಯನ್ನು ನಿಲ್ಲಿಸಿ ಮಹಾರಾಜರ ಕಡೆಗೆ ಬರುವನು. ಆಗ ಮಹಾಜರು ಈ ಛಾವಣಿಯಲ್ಲಿಯೇ ಸಭೆ ನೇರಿಸಿ ಆತನನ್ನು ಕಾಣುವರು. ಆದರಿಂದ ನಿಮ್ಮ ಎಲ್ಲ ಸಿದ್ಧತೆ ಯಿರಲಿ.

ಕೊ.— ಹೀಗೋ, ಹಾಗಾದರೆ ನಿನ್ನ ಕೆಲಸವನ್ನು ಮೊದಲು ತೀರಿಸಿಕಳಿಸುತ್ತೇನೆ ಬಾ.

(ಹೋಗುವರು. ಹುವೆನ್‌ತ್ಸಾಂಗನೂ ಸಾಮಾನು ಹೊತ್ತ ಕೂಲಿಯು ವನೂ ಬರುವರು.)

ಹುವೆನ್.— ನಾನು ಭರತಖಂಡವನ್ನು ಎಲ್ಲ ತಿರುಗಿದೆನು. ಆದರೆ ಈ ಚಾಲುಕ್ಯರ ಪುಲಿಕೇಶಿ ಮಹಾರಾಜನ ರಾಜ್ಯದಂತ ರಾಜ್ಯವನ್ನೇ ಕಾಣಲಿಲ್ಲ. ರಾಜನಲ್ಲಿ ಪರಜಾ ನಿಷ್ಠೆ ಅದೆ. ಪರಜೆ ಗಳಲ್ಲಿ ರಾಜನಿಷ್ಠೆ ಅದೆ. ರಾಜನು ಜನರನ್ನು ಮಕ್ಕಳ ಹಾಗೆ ಕಾಯು ತ್ತಾನೆ; ಜನರು ರಾಜನ ಸಲುವಾಗಿ ಜೀವಾ ಕೊಡುತ್ತಾರೆ. ಅಬಬ! ಜನರಾದರೂ ಅದೆಷ್ಟು ಶೂರರಯ್ಯಾ? ತಮ್ಮ ಎರಡಷ್ಟು ಜನರಿದ್ದ ಕನೋಜದ ಅರಸನ ದಂಡನ್ನು ಹೊಡೆದು ಧೂಲಿಹಾರಿಸಿ ಬಿಟ್ಟರು. ಇವರು ಶೂರರಿಧಾರೆ ಅಷ್ಟೇ ಸತ್ಯರೂ ಧರ್ಮಿಗಳೂ ಆಗಿದ್ದಾರೆ. ಪರೋಪಕಾರದಲ್ಲಿಯೂ ಇವರು ಮೇಲು. ಹೌದ ಹೌದ ಈ ರಾಜ್ಯ ವು ಘನವಾಗಿದೆ. ಹೌದ. ಸಾಕಿನ್ನು ನಮ್ಮ ಚೀನಾಕ್ಕೆ ಹೋಗೋಣ. (ತಿರುಗಿ) ನಿನಗೆ ಕೊಡಬೇಕ ಕೂಲಿ ಏನ?

ಕೂಲಿಯವ.— ಕೂಲಿಯನ್ನೋ? ನಿಮಗೆ ಕೊಡುವ ಮನಸ್ಸಿದ್ದರೆ ಕೊಡಿರಿ. ಕೂಲಿಯ ದರವನ್ನು ಕೇಳಿರಿ. (ಸಾಮಾನು ಇಳಿಸಿ ಜೀಟಾಗಿ ನಿಂತು) ಹೇಳಲಿಯಾ? ಕೇಳುತ್ತಿರ್ರಿ! ನಾನು ಸಂಭಾವಿತರಿಂದ ಆರುಕಾಸು, ತುಂಟರಿಂದ (ಬೆರಳುಮಾಡಿ) ಮೂರು ಮೂರೇ ಕಾಸು ಕೊಳ್ಳುವೆನು. ನೀವು ಎಂಥವರು ಹೇಳಿ ಮೊದಲು?

ಹುವೆನ್.— ಹೂ.

ಕೂಲಿ.— ಯಾಕೆ, ಹೇಳಿ ಮೊದಲು.

ಹುವೆನ್.— ಅಯ್ಯಾ ನಿನ್ನ ಮಾತು ನನಗೆ ತಿಳಿಯಲಿಲ್ಲ, (ಅಭಿನಯ)

ಕೂಲಿ.— (ಸ್ವಗತ) ಇವನನ್ನು ಕಾಡುವದೇಕೆ? ಪಾಪ ಸಜ್ಜನನಿದ್ದಾನೆ. (ಪ್ರಕಾಶ) ಹಾಗಾದರೆ ನಿನಗೆ ತಿಳಿದದ್ದನ್ನು ಕೊಡು ನನ್ನಯ್ಯಾ! ನನಗಂತೂ ಕೊಟ್ಟರೂ ಸರಿಯೇ ಬಿಟ್ಟರೂ ಸರಿಯೇ! ನಿಮ್ಮಂಥವರಿಗೆ ನಾನು ಇಷ್ಟು ಸಹಾಯ ಮಾಡಬಾರದೇ? ನಡಿಯಿರಿ ಬೇಗ. (ಸಾಮಾನು ಹೊತ್ತು ಅವಸರದಿಂದ ಹೋಗುವನು. ಇವನು ತಿಳಿಯದಂತೆ ಬೆನ್ನು ಹತ್ತುವನು.)

---

೩ ನೇ ನೋಟ.

(**ದೇವದುರ್ಗದ ಕೊತ್ತಳ. ಹರ್ಷವರ್ಧನನು ಧ್ವಜಸ್ಥಾಪನೆಗೆ ನಿಂತಿರುವನು. ಚಾಲುಕ್ಯ ಸೇನಾಪತಿ ಸರದಾರರು ಇರುವರು.**)

ವೀರವರ್ಧನ.— ಹರ್ಷರಾಜರೆ ತಡೆಯಿರಿ. ಇದೇ ಸ್ಥಳದಲ್ಲಿ ಈ ಮೊದಲು ಒದಗಿದ ಪ್ರಸಂಗದಿಂದ ಯಾವನ ಹೃದಯವು ಕಂದಿ ಕುಂದಿ ಬಳಲಿತೋ ಯಾವನು ಅದರ ನಿವಾರಣೆಗೆ ಶಕ್ತಿಮೀರಿ ಹೆಣಗಿ ಸೆರೆಯಾಳಾದನೋ, ಆತನು ಸುದೈವದಿಂದ ತನ್ನಿಚ್ಛೆಯು ಇಂತು ಪೂರ್ಣವಾಗುತ್ತಿರುವದನ್ನು ಕಣ್ಣಾರೆ ಕಂಡರೆ ಆತನಿಗೆ ಆನಂದವೂ ಸುಖವೂ ಆಗಲಾರವೇ?

ಹರ್ಷವರ್ಧನ.— ಚಾಲುಕ್ಯ ಸೇನಾಪತಿಗಳೇ ತಿಳಿದೆನು ನಿಮ್ಮ ಮಾತಿನ ಹೊಲಬನು. ನಾನು ಸಮರನಂದರನ್ನು ಆಗಲೇ ಬಿಡುಗಡೆ ಮಾಡಿಸಿದ್ದೇನೆ. ಅವರು ಇಷ್ಟರಲ್ಲಿಯೇ ಬರಬಹುದು.

ವೀ. ವ.— ನಾನೂ ಹೇಳಿಕಳುಹಿದ್ದೇನೆ. ಅದೋ ಬಂದರು ನೋಡಿರಿ. ಬನ್ನಿರಿ ಸಮರನಂದರೆ, ಯಾವ ಸಂಗತಿಗಾಗಿ ನೀವು ಶಕ್ತಿಮೀರಿ ಹೆಣಗಿ ಕಷ್ಟಬಟ್ಟಿರೋ, ಅದಕ್ಕಾಗಿಯೇ ಉಳಿದ ನಿಮ್ಮ ಚಾಲುಕ್ಯಯೋಧರು ಹೆಣಗಿ ನಿಮ್ಮ ಮಾರ್ಗದಿಂದಲೇ ನಡೆದು ನೀವು ಆರಂಭಿಸಿದ ಕಾರ್ಯವನ್ನು ಪೂರ್ಣಗೊಳಿಸಿರುವರು. ಅದರ ಸಫಲವು ಇದೀಗ ನಿಮ್ಮ ಮುಂದಿದೆ. ಇದಕ್ಕೆ ಮುಖ್ಯಭಾಗಿಗಳು ನೀವೇ ಅಲ್ಲವೇ ?

ಸಮರನಂದ.— ಸೇನಾಪತಿಗಳೇ ವೀರಾಧಿವೀರರಾದ ತಾವೂ ಉಳಿದ ಬಲ್ಲಾಳುಗಳೂ ಇರುತ್ತಿರುವಾಗ ನನ್ನ ಬೆಲೆಯೇನು ?

ಹರ್ಷ.— ಸಮರನಂದರೇ, ನೀವು ಉದಾತ್ತ ವಿಚಾರದವರಿರುವಿರಿ. ಇಗೋ ನಾನಂದು ನಿಮ್ಮ ನಿರ್ಮಲವಾದ ಸ್ವಾಮಿನಿಷ್ಠೆಯ ಮೇಲೆ ನಿಮ್ಮ ದೇಶಭಕ್ತಿಯ ಮೇಲೆ ಅನ್ಯಾಯದಿಂದ ಬಲವಾದ ಆಘಾತವನ್ನುಂಟುಮಾಡಿದೆನು. ಇಂದು ಆ ಗಾಯವನ್ನು ಮಾಯಿಸಲು ಸಿದ್ಧನಾಗಿದ್ದೇನೆ. ನೀವು ನನ್ನನ್ನು ಕ್ಷಮಿಸುವಿರಾ ?

ಸಮರ.— ಹರ್ಷರಾಜರೆ, ನೀವು ರಾಜರು, ನಾನು ರಾಜಸೇವಕನು, ನೀವು ನನ್ನನ್ನು ಹೀಗೆ ಕೇಳಬಾರದು! ಆದರೆ ಅರಸೇ, ನೀವು ಅಂದು ನನ್ನ ಮೇಲಿಲ್ಲ, ಪವಿತ್ರವಾದ ಧರ್ಮದ ಮೇಲೆ ಘನವಾದ ನೀತಿಯ ಮೇಲೆ ಆಘಾತವನ್ನುಂಟುಮಾಡಿದಿರಿ ಅದುವೇ ಇಂದು ನಿಮ್ಮನ್ನು ಈ ಸ್ಥಿತಿಗೆ ತಂದು ಬಿಟ್ಟಿದೆ. ಬೇರೆಯೇನಿದೆ?

ಹರ್ಷ.— ನಿಜ, ಪಶ್ಚಾತ್ತಾಪಪಟ್ಟ ನನಗೀಗ ಎಲ್ಲವೂ ತಿಳಿಯುವದು. ಮಿಂಚಿದುದಕ್ಕೆ ಚಿಂತಿಸಿ ಫಲವೇನು? ಇನ್ನು ನೀವು ಮಾತ್ರ ನನ್ನನ್ನು ಮಿತ್ರನಂತೆ ಭಾವಿಸಿ ನಡೆಯುವಿರಾ ?

ಸಮರ.— ಹರ್ಷರಾಜರೆ, ನಮ್ಮ ಪ್ರಭು ಪುಲಿಕೇಶಿ ಮಹಾರಾಜರೂ, ಬಲು ಬಲ್ಲಿದ ಸೇನಾಪತಿ ಈ ವೀರವರ್ಧನರೂ ತಮ್ಮನ್ನು ಮನ್ನಿಸುತ್ತಿರುವಾಗ ಅಡಿಯಾಳಾದ ನಾನು ಮನ್ನಿಸದಿರುವದೆಂತು?

ಹರ್ಷ.— ಮಿತ್ರರೇ, ನಿಮ್ಮಂದದ ಉದಾರರಿರುವರೇ? ಇರಲಿ, ಇಗೋ ಚಾಲುಕ್ಯ ಸೇನಾಪತಿಗಳೇ, ನನಗೂ ಮಾನ್ಯವಾದ ಈ ಕರ್ನಾಟಕ ವಿಜಯಧ್ವಜವನ್ನು ಈ ಕೊತ್ತಳದಮೇಲೆ ನಿಲ್ಲಿಸುತ್ತೇನೆ. (ಹಾಗೆ ಮಾಡುವನು)

ಎಲ್ಲರೂ.— ಜಯ ಕರ್ನಾಟಕಮಾತೆ! ಜಯ ಚಾಲುಕ್ಯ ಸಾರ್ವಭೌಮ!

ಹರ್ಷ.— ಪದ, ರಾ। ದೇಶಕಾರ, ತಾ। ತ್ರಿವಟ (ಧಾ— ಮೋಹಕೆ ಪರವಶನಾದೆ.)

ಮಾನದಿ ಹೀನನುಮಾದೆ। ಸಾಹಸದೆ ಸಮರ ಶೌರ್ಯದೀ ಕಾದದೆ। ಬಲಹೀನನಾದೆ ॥ಪ॥

ರಾಜರ ಕುಲದಲಿ ವ್ಯರ್ಥಜನಿಸಿದೇ। ಮೂಜಗಂಗಳು ಹಳಿವುವು, ನಾನು॥

ಹಾಯ್ ಹಾಯ್ ಏನು ನನ್ನ ಅವಸ್ಥೆಯಾಯಿತು? ವಿಜಯಲಕ್ಷ್ಮಿಯೂ ಸ್ವಾತಂತ್ರ್ಯದೇವಿಯೂ ತೀರ ನನ್ನ ಕೈಬಿಟ್ಟರಲ್ಲ! ಅಥವಾ ಆಶ್ಚರ್ಯವಾದರೂ ಏನು? ಇಂದು ನಾನೇ ಶೌರ್ಯಹೀನನಾದೆನು. ಶೌರ್ಯಾಧೀನರಾದ ಅವರೇಕೆ ನನ್ನನ್ನು ತೊಲಗದೆ ಬಿಟ್ಟಾರು? ಒಳ್ಳೇದು ಬಂದುದನ್ನು ಭೋಗಿಸಿದರಾಯಿತು.

೪ನೇ ನೋಟ.

(ಛಾವಣಿಯ ಮುಂಭಾಗ. ರಣಮಲ್ಲಸುತ ವೀರಬಾಲಕನು ಬರುವನು. ನಿಶಾನೆಯನ್ನು ಹಿಡಿದು ಕುಣಿದಾಡುತ್ತ)

ವೀ. ಬಾಲಕ.— ಅಪ್ಪನ ಮುಂದೆ ತೋರಿಸಿ ಹೇಳುವದೇ,

ಪದ॥ ಏನಮ್ಮ ನೋಡಮ್ಮ ನನ್ನಮ್ಮ ನಾಡಮ್ಮ ಗುಡಿಯಮ್ಮ॥ ಏನಮ್ಮ ಮೂಢನೊಬ್ಬ ಒಯ್ದಿದ್ದನಾತಂದೆ. ನೋಡಮ್ಮ ನಾಡಮ್ಮ ಗಯುಡಿಯಮ್ಮ

ರಣಮಲ್ಲ.— (ಬಂದು) ನೋಡಮ್ಮ? (ಆಶ್ಚರ್ಯ)

ವೀ. ಬಾ.— ಏನಮ್ಮ ನೋಡಮ್ಮ! (ಕುಣಿದಾಟ)

ರಣಮಲ್ಲ.— ಮಗುವು ದೇಶಾಭಿಮಾನದಲ್ಲಿ ಮೈಮರೆತಿದೆ. (ಭುಜದ ಮೇಲೆ ಕೈಯಿಟ್ಟು) ಎಲ್ಲಿರುವಳೋ ಆಕೆ?

ವೀ. ಬಾ.— (ಚಕಿತನಾಗಿ) ಅಪ್ಪಾ ಹೀಗೆಂದು ಅವ್ವನಿಗೆ ಈ ನನ್ನ ರಾಷ್ಟ್ರಧ್ವಜವನ್ನು ತೋರಿಸಬೇಕೆಂದು ಮಾಡಿದ್ದೇನೆ. ಆದರೆ ನಿನ್ನನ್ನು ನೋಡಿರಲ್ಲೇ ಇಲ್ಲ (ನಗು.)

ರಣ.— ಹೀಗೇನು ಮಗು? ಮೊದಲು ಇದನ್ನು ಸಭೆಯಲ್ಲಿ ಮಹಾರಾಜರಿಗೆ ತೋರಿಸ ನಡೆಯಪ್ಪಾ; ಅವರು ನಿನ್ನನ್ನು ಕಂಡು ಸಂತೋಷಬಟ್ಟಾರು?

ವೀ. ಬಾ.— ಅಪ್ಪಾ, ಮಹಾರಾಜರು ಈ ನನ್ನ ಧ್ವಜವನ್ನು ವಂದಿಸುವರೇನು?

ರಣ.— ವಂದಿಸದೇ? ಇವರೇ ಏಕೆ ಬಾಲಾ, ಇವರ ಅಜ್ಜ ಮುತ್ತಂದಿರು ಕೂಡ ಈ ನಾಡಗುಡಿಯನ್ನು ವಂದಿಸಿದ್ದಾರೆ.

ವೀ. ಬಾ.— ಹಾಗಾದರೆ ಈ ನಾಡಗುಡಿಯು ಆಗಲೂ ಇತ್ತೇನೋ ಅಪ್ಪಾ?

ರಣ.— ಓಹೋ ಇರದೇ? ತಮ್ಮಾ, ಈ ನಾಡಗುಡಿಯು ಯಾವಾಗಲೂ ನಾಡೊಡನೆ ಕೂಡಿ ಇರತಕ್ಕದ್ದೇ! ಇದುವೇ ನಾಡಿನ ಜೀವವು! ಸ್ವಾತಂತ್ರ್ಯದ ಚಿಹ್ನವು.

ವೀ. ಬಾ.— ಹೀಗೇನು? ನಾನು ಮೊದಲು ವಂದಿಸುವೆನು; ಹಿಡಿ ಇದನ್ನು.

(ಆತನ ಕೈತೆಗಿಸಿ ಹಿಡಿಸುವನು; ಬಳಿಕ ಸುತ್ತುವರಿದು ನಮಿಸುವನು; ಎರಡುಸಾರೆ)

ರಣಮಲ್ಲ.— ಇಂಥ ಪುತ್ರರತ್ನವನ್ನು ಹೆತ್ತ ನನ್ನ ಪುಣ್ಯವು ಸಾಮಾನ್ಯವೇ?

ವೀ. ಬಾ.— ಅಪ್ಪಾ ಇನ್ನು ನೀನು ವಂದಿಸು.

(ಕೈಯಲ್ಲಿ ತೆಗೆದುಕೊಂಡು ಸೀಟಾಗಿ ಬಿಂಕಿನಿಂದ ನಿಲ್ಲುವನು.)

ರಣಮಲ್ಲ.— ಆಗಲಿ. (ಖಡ್ಗ ಹಿರಿದು ನಮಿಸುವನು.)

ವೀ. ಬಾ.— (ತೆರೆಯಲ್ಲಿ ನೋಡಿ) ಇದೋ ಅಪ್ಪಾ ಅವ್ವನು ಮನೆಗೆ ಬಂದಳು. ಏನವ್ವಾ! ನೋಡವ್ವಾ! ನನ್ನವ್ವಾ......... (ಜಿಗಿಯುತ್ತ ಹೋಗುವನು.)

ರಣಮಲ್ಲ.— ಅಹಹಾ!

ಕಂದ॥ ಮಗನವ ನಿರ್ಮಲ ಬಗೆಯುವ।
ನಗೆವೊಗದಿಂ ಸೊಗವ ನೀಯೆ ಮಿಗಿಲಾದವನು॥
ಬಗೆಯನ್ನರಳಿಪ ಸವಿನುಡಿ।
ಮೊಗದಿಂದುಗೆ ಸುಗುಣಿಯಾದ ಪಂಗನೇ ಮಗನು॥ (ಹೋಗುವನು.)

೫ ನೇ ನೋಟ.

(ಛಾವಣಿ, ಸಭಾಲಯ, ಸಿಂಹಾಸನದಲ್ಲಿ ಪುಲಿಕೇಶಿ; ಉಳಿದ ಚಾಲುಕ್ಯ ಮಂಡಲವು, ಮೋಹಿನಿಯು, ಪ್ರತಾಪರಾಯನು, ಉಚಿತಾಸನದಲ್ಲಿ ಇರುವರು.)

ವೀ. ಬಾ.— (ಬಂದು) ಮಹಾರಾಜರೇ ಮತ್ತು ಸಭಿಕರೆ, ನೀವು ನನ್ನ ರಾಷ್ಟ್ರಪತಾಕೆಯನ್ನು ವಂದಿಸತಕ್ಕದ್ದು.

ರಣರಂಗ.— ರಣಮಲ್ಲ ನಾಯಕರೇ ನಿಮ್ಮ ಮಗುವು.

ಬಲರಾಯ.— ವಾಹವ್ವಾ! ರಣಮಲ್ಲರಂಥ ನರಕೇಸರಿಯ ಮಗುವು, ಕೇಸರಿಯ ಮರಿಯೇ ಆಗಿದೆ; ವಾಹವ್ವಾ! ಈ ನಿನ್ನ ಧ್ವಜವನ್ನು ವಂದಿಸಬೇಕೇನಯ್ಯಾ?

ರಣಮಲ್ಲ.— (ನಕ್ಕು) ಹುಡುಗರ ಆಟ, ಎಲೋ ಈಚೆಗೆ ಬಾರಲಾ.

ಪುಲಿ.— ಬಾಲಕಾ ನಿಲ್ಲು; ರಣಮಲ್ಲ ನಾಯಕಾ, ಈ ಮಗುವಿನ ಎಳೆತನದಲ್ಲಿಯ ಇಷ್ಟು ದೇಶಾಭಿಮಾನವನ್ನು ಕಂಡು ನನಗೆ ಬಲು ಆನಂದವೆನಿಸುತ್ತದೆ. ಈಗ ನೀನು ಆತನನ್ನು ಸುಮ್ಮನೆ ಕೂಡಹಚ್ಚಿ, ಇದೀಗ ಉತ್ಕೃಷ್ಟವಾಗಿ ಬೆಳೆಯಲಿರುವ ದೇಶಾಭಿಮಾನದ ಮೊಳಕೆಯನ್ನು ಕಮರಿಸಲಾಗದು. ತಿಳಿದವರು ದೇಶಕಾರ್ಯದಲ್ಲಿ ಹೆಜ್ಜೆ ಇಡುತ್ತಿರುವ ತಮ್ಮ ಎಳೆಯರನ್ನು ಎಂದೂ ಹಿಂದೆಳೆಯಲಾಗದು. (ಎದ್ದು ಬಂದು) ಭಾವೀ ಕಾಲದಲ್ಲಿ ಇದೋ ಇಂತಹರೇ (ಭುಜ ಸ್ಪರಿಸಿ) ಈ ಆರ್ಯಭೂಮಾತೆಯನ್ನು ಉದ್ಧರಿಸುವರು. ಶಾಬಾಸ್ ವೀರಪುತ್ರ!

ಬಾಲಕ.— ಮಹಾರಾಜ, ಮೊದಲು ಇದನ್ನು ವಂದಿಸಿರಿ! (ಬಿಂಕ)

ಪುಲಿ.— ಅವಶ್ಯ ಆಗಲಿ! ಸೇನಾಪತಿಗಳೇ ಧ್ವಜವಂದನೆಯಾಗತಕ್ಕದ್ದು.

ಸೇನಾಪತಿ.— ಎಲ್ಲರೂ ಹೂ, ನನ್ನ (ಖಡ್ಗಗ್ಗೆ ಕೈ) ದೇಶ (ಹಿರಿದು ನಮಸ್ಕಾರ) ವಂದನೆ (ಎದ್ದು ಒರೆಗಾಣಿಸುವರು. ಎಲ್ಲರೂ ಕೂಡ್ರುವರು.)

ಬಾಲಕ.— ಅಪ್ಪಾ ಇದನ್ನು ಹಿಡಿ. ಮಹಾರಾಜರಿಗೆ ನಮಸ್ಕಾರ ಮಾಡುತ್ತೇನೆ. (ಕೊಟ್ಟು ನಮಸ್ಕರಿಸಿ ಎದ್ದು) ತಾ, ನನ್ನ ಧ್ವಜವನ್ನು! ಹೇಳುವೆನು ಅವ್ವನಿಗೆ! ಏನಮ್ಮ ನೋಡಮ್ಮ (ಜಿಗಿಯುತ್ತ ಹೋಗುವನು.)

ದ್ವಾರಪಾಲಕ.— (ನಮಿಸಿ) ಬಾಗಿಲಲ್ಲಿ ಹರ್ಷರಾಜರು ಬಂದಿರುವರು.

ಪುಲಿ.— ಬರಮಾಡು ಅವರನ್ನು (ಸಿಂಹಾಸನದಲ್ಲಿ ಕೂಡುವನು)

ಹರ್ಷ.— (ಬಂದು ಮೊಣಕಾಲೂರಿ) ಮಹಾರಾಜರೆ, ನನ್ನನ್ನು ಕಾಪಾಡಬೇಕು.

ಪುಲಿ.— ನಿಮಗೆ ಅಭಯವಿದೆ. (ಎದ್ದು ಬಂದು ಒಯ್ದು ಕೂಡ್ರಿಸುವನು.)

ಹರ್ಷ.— ಮುಂದಿನ ಕಾರ್ಯಕ್ಕೆ ಅಪ್ಪಣೆಯಾಗಲಿ.

ಪುಲಿ.— ಸಾಗಲಿ (ಸೇನಾಪತಿಯನ್ನು ನೋಡುವನು.)

ಸೇನಾಪತಿ.— ಚಾಲುಕ್ಯರ ಮತ್ತು ಹರ್ಷರ ಸರದಾರ ಸೈನಿಕರೆ, ಹಾಗು ಸಾಮಂತರಾಜರೆ, ಈ ಹೊತ್ತು ಹರ್ಷರಾಜರ ಇಚ್ಛೆಯಂತೆ, ಚಾಲುಕ್ಯ ಮಹಾರಾಜರ ಅಪ್ಪಣೆಯಿಂದ ಹರ್ಷ ಚಾಲುಕ್ಯರ ನಡುವೆ ಒಡಂಬಡಿಕೆಯಾಗಿ ಯುದ್ಧವು ನಿಲ್ಲಿಸಲ್ಪಟ್ಟಿತು. ಆ ಒಡಂಬಡಿಕೆಯ ಶರ್ತುಗಳು ಹೀಗೆ (ಓದುವನು.)

೧. ಹರ್ಷವರ್ಧನರಾಜರು ಚಾಲುಕ್ಯರಿಗೆ ಮಾಂಡಲಿಕರಾಗಿರಬೇಕು. ಕಪ್ಪಕೊಡುತ್ತ ಹೋಗಬೇಕು. ೨. ದೇವದುರ್ಗವನ್ನು ಯುದ್ಧದ ವೆಚ್ಚಕ್ಕಾಗಿ ಚಾಲುಕ್ಯರೇ ಇಟ್ಟುಕೊಳ್ಳಬೇಕು. ೩. ಉಜ್ಜಯಿನಿಯ ಪ್ರತಾಪರಾಯರು ಚಾಲುಕ್ಯರ ಮಾಂಡಲಿಕರೇ ಆಗಿರಬೇಕು. ಹೀಗಿರುವ ಶರ್ತುಗಳಿಗೆ ಚಾಲುಕ್ಯ ಮಹಾರಾಜರ ಹಾಗು ಹರ್ಷರಾಜರ ಒಪ್ಪಿಗೆಯಿದೆ. (ಎಲ್ಲರೂ ಅಂಕಿತಗಳನ್ನು ಹಾಕುವರು.)

ಪುಲಿ:— ಎಲ್ಲ ನನ್ನ ಸಾಮಂತ ಮಂಡಲವೆ, ಸರದಾರರೆ, ನಿಮ್ಮೆಲ್ಲರ ಅತುಲ ಬಲದ ಸಹಾಯದಿಂದಲೇ ನಾನು ಹಲವು ಗೆಲವುಗಳನ್ನು ಪಡೆದು ದಿಗಂತವಿಶ್ರುತಕೀರ್ತಿಯುತನಾದೆನು. ಈ ವರೆಗೆ ಐದಾರು ವರ್ಷಗಳಿಂದ ನಡಿಸುತ್ತ ಬಂದ ದಿಗ್ವಿಜಯವು ಇಲ್ಲಿಗೆ ಕೊನೆಗಂಡಿತು. ನನ್ನ ಹಾಗು ಸಾಮಂತರಾಜರ ಬಲಶಾಲಿಗಳಾದ ಸೈನಿಕರು ಯುದ್ಧದ ಮೇಲೆ ಯುದ್ಧವನ್ನು ಮಾಡಿ ಬೇಸತ್ತಿರುವರಲ್ಲದೆ ಎಷ್ಟೋ ಜನ ತಮ್ಮ ಬಂಧುಮಿತ್ರರನ್ನು ಕಳೆದುಕೊಂಡು ದುಃಖಿತರೂ ಆಗಿರಬಹುದು. ಇನ್ನು ಅವರಿಗೆ ವಿಶ್ರಾಂತಿಗೊಟ್ಟು ಅವರು ಸುಖದಿಂದಿರುವಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯವು. ಆದ್ದ

ರಿಂದ ನಾಳೆಯೇ ಎಲ್ಲರೊಡನೆ ವಾತಾಪಿಪುರದ ಕಡೆಗೆ ಸಾಗತಕ್ಕದ್ದು. ಎಲ್ಲ ರಾಜಮಂಡಲವು ಅಲ್ಲಿಯ ವರೆಗೆ ಬಂದು ನನ್ನ ಅಲ್ಪಾತಿಥ್ಯ ವನ್ನು ಸ್ವೀಕರಿಸಿ ತಮ್ಮ ತಮ್ಮ ರಾಜ್ಯಗಳಿಗೆ ತೆರಳಬೇಕೆಂದು ಬೇಡಿ ಕೆಯಿದೆ.

ಒಬ್ಬಸಾಮಂತರಾಜ.— ಮಹಾರಾಜರ ಇಚ್ಛೆಯನ್ನು ಯಾರು ಮೀರುವರು? ಎಲ್ಲರೂ ಬರುವೆವು.

ಪುಲಿ.— ಹರ್ಷರಾಜರೂ ನಮ್ಮ ಬಿನ್ನಹವನ್ನು ಮನ್ನಿಸಬೇಕು.

ಹರ್ಷವರ್ಧನ.— ಆಗಬಹುದು.

ಪುಲಿ.— ಎಲ್ಲರ ಒಪ್ಪಿಗೆಯಿಂದ ಬಲು ಸಂತೋಷವಾಯಿತು. ಪ್ರತಾಪರಾಯರೇ ನೀವು ಆದಷ್ಟು ತೀವ್ರವಾಗಿ ಉಜ್ಜಯಿನಿಯಿಂದ ನಿಮ್ಮ ಮಹಾರಾಣಿಯವರನ್ನು ಕರೆಯಿಸಿಕೊಳ್ಳಬೇಕು. ಹೆತ್ತಮ್ಮ ನನ್ನು ಕಾಣುವ ಹಂಬಲವು ಮೋಹಿನಿಗೂ ಆಗಿರಬಹುದು. ಎಲ್ಲರೂ ವಾತಾಪಿಗೆ ಬರತಕ್ಕದ್ದು.

ಮೋ.— ಮಹಾರಾಜರಿಗೆ ಮನೋಗತವನ್ನು ಬಿಚ್ಚಿ ಹೇಳ ಬೇಕೇ?

ಪ್ರತಾಪರಾಯ.— ಹಾಗೆಯೇ ಮಾಡುವೆನು.

ಪುಲಿ.— ಹಾಗಾದರೆ ಪ್ರಯಾಣದ ಸಿದ್ಧತೆಯು ನಡೆಯಲಿ (ಏಳು ವನು)

ಎಲ್ಲರೂ.— ಜಯಕರ್ನಾಟಕ ಭೂಮಾತೆ! (ಹೋಗುವರು.)

ಪುಲಿ.— ಪದ ರಾ। ಪೂರ್ವಿ, ತಾ। ಝಂಪಾ.

ಸಂರಕ್ಷಿಸಿದೆ ತಾಯೆ ಕರ್ಣಾಟಕಾಂಬೆ ನೀ। ನಿನ್ನಾದರ ಸತ್ವವನು ಇತ್ತು ಪಾಲಿಸಿದೆ॥ ನಿನ್ನ ಈ ಋಣವನ್ನು ತೀರಿಸುವ ಯೋಗವನು ಮಾ ನ್ನಳೇ ಕರುಣದಿಂದೊದಗಿಪುದು ಜವದೆ॥

೬ ನೇ ನೋಟ.

[ವಾತಾಪಿಪುರದ ಓಣಿ; ಇಬ್ಬರು ವಿದ್ಯಾರ್ಥಿಗಳು.]

ಮುದ್ದಣ್ಣ.— (ಕೇಳಿ ಆಶ್ಚರ್ಯದಿಂದ) ಹಾ! ಇದೇನು? ಆಕಾಶದಲ್ಲಿ ಗುಡುಗು ಕೇಳಿಸುತ್ತದೆ. ಆದರೆ ಮೋಡವು ಅಂಗೈಯಷ್ಟಾದರೂ ಇಲ್ಲವಲ್ಲ!

ವೀರಣ್ಣ.— (ಬಂದು) ಏನು ಯೋಚನೆ ನಡೆದಿದೆ ಮುದ್ದಣ್ಣಾ?

ಮು.— ಅಣ್ಣಾ, ಆಕಾಶದಲ್ಲಿ ಮೋಡವಿಲ್ಲದೆ ಗುಡುಗು ಕೇಳುತ್ತದೆ ಇದೇನಾಶ್ಚರ್ಯ?

ವೀ.— ತಮ್ಮಾ ಇದು ಮೇಘಗಳ ಗುಡುಗಲ್ಲ; ಭಾರತವನವನ್ನೆಲ್ಲ ಸಂಚರಿಸಿ ಅಲ್ಲಿರುವ ಮೃಗಮೃಗಾಧಿಪತಿಗಳನ್ನೆಲ್ಲ ಗೆದ್ದುಬಂದಿರುವ ಚಾಲುಕ್ಯಕೇಸರಿಯ ಗುಡುಗಿದು.

ಮು.— ಹೀಗಂದರೇನು? ನನಗೇನೂ ತಿಳಿಯುಲಿಲ್ಲ.

ವೀರ.— ತಿಳಿಯುಲಿಲ್ಲವೋ ಕೇಳು. ನಮ್ಮ ಪುಲಿಕೇಶಿ ಮಹಾರಾಜರು ದಿಗ್ವಿಜಯಕ್ಕಾಗಿ ಹೊರಟು ಭಾರತದೊಳಗಿನ ಅರಸರನ್ನೆಲ್ಲ ಗೆದ್ದು ಬಂದಿರುವರು. ಅವರೀಗ ವಿಜಯೋತ್ಸವದೊಡನೆ ನಗರಪ್ರವೇಶ ಮಾಡುವರು. ಅವರ ದಂಡಿನೊಳಗಿನ ವಿಜಯದುಂದುಭಿಯ ಸಪ್ಪಳವು ಹೀಗೆ ಪ್ರತಿಧ್ವನಿಗೊಂಡು ಕೇಳಿಸುತ್ತಲಿಹುದು.

ಮು. ಹೀಗೋ ದುಂದುಭಿಯ ಸಪ್ಪಳ? (ಅಭಿನಯ)

ವೀ.— ಅಹುದಹುದು ದುಂದುಭಿಯ ಸಪ್ಪಳವು.

ಮು.— ಅದಕ್ಕಂತೆ ನಮ್ಮ ವಾತಾಪಿಪುರವು ಇಷ್ಟು ಸಿಂಗರಿಸಲ್ಪಟ್ಟಿದೆ ತಿಳಿಯಿತು. ಅಣ್ಣಾ, ನಮ್ಮ ಮಹಾರಾಜರು ಆವ ಆವ ದೇಶಗಳ ಅರಸರನ್ನು ಗೆದ್ದರು?

ವೀ.— ಇವರು ದೊಡ್ಡ ದಂಡಿನೊಡನೆ ಹೊರಟು, ಗಂಗ, ಕದಂಬ, ಪಲ್ಲವ, ಪಾಂಡ್ಯ, ಕೇರಳ, ಶಿಲಾಹಾರ, ಲಾಟ, ಮಹಾ

ರಾಷ್ಟ್ರ ಮುಂತಾದ ಅರಸರನ್ನೆಲ್ಲ ಗೆದ್ದು ತಮ್ಮ ಅಂಕಿತದಲ್ಲಿ ಇಂಗೆ ದುಕೊಂಡರು. ಗುಜರಾಥ ಮಾಳವಗಳ ಅರಸರನ್ನೂ ಗೆದ್ದರು. ತಮ್ಮಾ ಇವರೆಲ್ಲರನ್ನೇನು ಮಾಡುವೆ? ಕೊನೆಯಲ್ಲಿ ಬಹು ಬಲಾ ಢ್ಯನಾದ ಅರಸನೊಬ್ಬನು ಇವರಿಗೆ ಇದಿರಾದನಂತೆ!

ಮು.— ಎಂಥವರಿದ್ದರೇನು ನಮ್ಮ ಮಹಾರಾಜರಿಗೆ ಈಡೇ?

ವೀ.— ಅದು ನಿಜ, ಆದರೆ ಆತನು ಉತ್ತರ ಹಿಂದುಸ್ಥಾನದ ಸಾರ್ವಭೌಮನು. ನಮ್ಮವರ ಸೈನ್ಯದ ಎರಡಷ್ಟು ಸೈನ್ಯವುಳ್ಳವನು. ಕೊನೆಗೆ ತಮ್ಮಾ, ನಮ್ಮ ಮಹಾರಾಜರು ಅವನನ್ನು ಕೂಡಾ ಸೋಲಿಸಿ, ಹಿಮಾಲಯದಿಂದ ರಾಮೇಶ್ವರದ ವರೆಗೆ ವಿಜಯ ದಂದು ಭಿಯನ್ನು ಹೊಡೆಯಿಸಿ ಬಿಟ್ಟರು.

ಮು.— ಭಲೆಭಲೆ, ನಮ್ಮ ಮಹಾರಾಜರಿಗೆ ದೇವರು ದೊಡ್ಡ ಆಯುಷ್ಯವನ್ನು ಕೊಡಲಿ. ಅಣ್ಣಾ, ಪಾಠಶಾಲೆಯಲ್ಲಿ ನಾವು ದಿನಾಲು ಮಹಾರಾಜರ ಜಯಜಯಕಾರಗಳನ್ನು ಹಾಡುತ್ತಿದ್ದೆವು. ರಾಷ್ಟ್ರಗೀತೆ ಯನ್ನು ಅನ್ನುತ್ತಿದ್ದೆವು. ಆದಿಂದು ಸಫಲವಾಯಿತು ಬಿಡು ಅಣ್ಣಾ.

ವೀ.— ಅಲ್ಲದೆ ಮತ್ತೆ!

ಮು.— ಮತ್ತು ನಮ್ಮ ಮಹಾರಾಜರನ್ನು ಎಲ್ಲ ಜನರೂ ಕೊಂಡಾಡುತ್ತಾರೆ. ಹೊಲಮಾಡುವವರು ತೋಟಿಗರು ಕೂಡ ಅವರ ಕೀರ್ತಿಯ ಹಾಡುಗಳನ್ನೇ ಹಾಡುತ್ತಾರೆ. ನಮ್ಮಕ್ಕನಂತೂ ಯಾವಾ ಗಲೂ ಮಹಾರಾಜರ ವಿಜಯದ ಪದಗಳನ್ನೇ ಹಾಡುತ್ತ ಬೀಸು ವಳು; ಕುಟ್ಟುವಳು.

ವೀ.— ನಿಜ, ಯಾವನಿಂದ ತಮ್ಮ ಆಪನ್ನಿವಾರಣೆಯಾಗು ವದೋ ಯಾವನಿಂದ ತಮ್ಮ ಇಚ್ಛಿತ ಫಲವು ಕೈಗೂಡುತ್ತಿರುವದೋ ಅವನನ್ನು ಎಲ್ಲರೂ ಕೊಂಡಾಡುತ್ತಾರೆ.

ಮು.— ಅಣ್ಣಾ ಈಗ ಆ ಜಯಜಯಕಾರವನ್ನು ಹಾಡುವಾ!

ವೀ.— ಆಗಲಿ. (ಇಬ್ಬರೂ ಅನ್ನುವರು)

ಪದ. ರಾ। ಭೀಮಪಲಾಸ ತಾ। ದುಮಾಲಿ (ಧಾಟಿ:— ಆನಂದಾಚಾಕಂದ)

ಸನ್ನುತ ಕರ್ಣಾಟಕಾಂಬೆ ಜಯುಜಯು। ಕನ್ನಡ ನೃಪತಿಲಕಂಗೆ ಜಯುಜಯು॥ ವಿಶಾಲಕೀರ್ತಿಯ ಪೊಂದಿದಾ। ಚಲುಕ್ಯಭೂಪನಿಗೇ ಜಯು। ಪ್ರಜೆಗಳ ದುಃಖ ನಿವಾರಣೆಗೈಯುವ। ಸುಜನವಿನುತ ಜನಪಂಗೆ ಜಯುಜಯು ॥೧॥

ಮುದ್ದ.— ಅದೋ ವಿಜಯೋತ್ಸವದ ಮೆರವಣಿಗೆಯು ಸಮೀಪವಾಗಿಯೇ ಬಂದಂತೆ ಕಾಣುತ್ತದೆ. ನಾವೂ ನೋಡಹೋಗೋಣ.

ವೀ.— ಆಗಲಿ ನಡೆ ಓಡು. (ಜಿಗಿಯುತ್ತ ಹೋಗುವರು.)

೭ ನೇ ನೋಟ.

[ವಾತಾಪಿಪುರದರಮನೆಯ ಮಹಾದ್ವಾರದ ಒಳಭಾಗ. ದಾಸಿಶಾಂತೆಯು ಸಾಮಾನು ಸಂಗ್ರಹಿಸುತ್ತ ಕಾದಿದ್ದಿರುವಳು. ಮಾಲತಿಯು ಅವಸರದಿಂದ ಹೋಗುತ್ತ]

ಮಾಲತಿ.— ಏನೇ ಶಾಂತಾ ಇಲ್ಲೇಕೇ?

ಶಾಂತೆ.— (ಅಣಕಿಸೆ) ಏನೇ ಶಾಂತಾ ಇಲ್ಲೇಕೇ! ಇಲ್ಲಿರಬೇಕಾಗಿದೆ. ಅಪ್ಪನವರು ತಾವು ಎಲ್ಲಿ ದಯಮಾಡಿಸಿದ್ದಿರಿ. ಮಹಾರಾಣಿಯವರು ನಿಮ್ಮನ್ನು ಹುಡುಕಿಸಿದರು. ವಿಜಯೋತ್ಸವದೊಡನೆ ಬಂದ ಮಹಾರಾಜರು ಅರಮನೆಯನ್ನು ಪ್ರವೇಶಿಸುವಾಗ ಮಹಾರಾಜ್ಞಿಯವರು ಮಂಗಲಾರತಿಯಿಂದ ಅವರನ್ನು ಸನ್ಮಾನಿಸುವರು ಅದರ ಸಿದ್ಧತೆಯನ್ನು ಮಾಡಬೇಡವೇ? ಮತ್ತೆ ಬಂದಿರುವಳಿಲ್ಲಿ ಏನೇ ಶಾಂತಾ ಇಲ್ಲೇಕೆ ಎಂತ! ದಯಮಾಡಿಸತ್ತ!!

ಮಾಲತಿ.— ನಿಜವೇ ಶಾಂತಾ, ಮೆರವಣಿಗೆಯನ್ನು ನೋಡಲೆಂದು ಉಪ್ಪರಿಗೆಯನ್ನು ಏರಿದವಳು ಮೈಮರೆತೇ ಬಿಟ್ಟದ್ದೇನೆ.

ಶಾಂ.— ಅಂಥದೇನು ಕಂಡೇ ಮೈ ಮರೆಯಲಿಕ್ಕೆ?

ಮಾ.— ಅದನ್ನೇನು ಹೇಳಬೇಕೇ? ಶಾಂತಾ ನಮ್ಮ ಮಹಾರಾಜರು ಮತ್ತೊಬ್ಬ ದೊರೆಸಾನಿಯವರನ್ನ ಸಂಗಡ ತಂದಿರುವರು.

ಶಾಂ.— ಹುಂ ಈ ಸಂಗತಿಯು ನಮ್ಮ ಹಿರೇ ಮಹಾರಾಣಿ ಲೋಕಮಹಾದೇವಿಯವರಿಗೆ ಮೊದಲೇ ತಿಳಿದಿದೆ. ನೀನು ಆ ನೂತನ ರಾಣಿಯವರನ್ನು ಈಗಲೇ ಇಷ್ಟೊಂದು ಉಬ್ಬಿನಿಂದ ನೋಡುತ್ತ ನಿಂತಿರ ಬಹುದಲ್ಲವೇ?

ಮಾ.— ಎಲ್ಲಿಯ ಉಬ್ಬೇ ನಮ್ಮವ್ವಾ? ಮತ್ತೊಬ್ಬಳು ಮಹಾರಾಣಿ ಮಹಾರಾಜನ ತೊಡೆಯನೇರಿದರೆ, ತೊತ್ತಿಗೇನು ಹೊತ್ತ ನೀರಿನ ಬಹುಮಾನವೇ ಸೈ.

ಶಾಂ.— ಇದನ್ನೇನು ಹೇಳುವೆ? ದಯಾನಿಧಿಗಳಾವ ನಮ್ಮ ಮಹಾರಾಜರ ಅಭ್ಯುದಯವಾದರೆ ನಮಗೆ ಉಬ್ಬಲ್ಲವೇ? ಅದರಲ್ಲಿ ಸ್ವಲ್ಪ ಹೆಚ್ಚಾದ ಕೆಲಸದ ಮಾತೇನು ಅಂಥ ಮಹತ್ವದ್ದು?

ಮಾ.— ನೀನನ್ನುವದು ಸರಿಯೇ! ಆದರೆ, ಹಳೆ ಹೊಸ ರಾಣಿಯರ ಮನವೊಂದುಗೂಡದೆ ತಿಕ್ಕಾಟನಡೆದರೆ. ಗುಂಡು ಬಂಡೆಗಳ ಘರ್ಷಣದಲ್ಲಿ ಸಿಕ್ಕ ಹರಳುಗಲ್ಲುಗಳು ಪುಡಿಯಾಗುವಂತೆ, ಈ ದಾಸಿಯರು ಸಣ್ಣಾಗಬೇಕಾಗುತ್ತದೆ ಸಣ್ಣ. ಆಗ ಈ ದಾಸ್ಯ ಜೀವನವು ಎಂಥ ಹೀನವಾದುದೆಂಬ ನಿನ್ನ ಸ್ಥಿತಿಯು ನಿನಗೇ ತಿಳದೀತು.

ಶಾಂ.— ಛೀ, ಮಾಲತೀ ಅಂಥ ಕಲ್ಪನೆಯನ್ನೇ ಮಾಡಬೇಡ. ಮೇಲೆ ಮೋಹಕವಾಗಿ ಒಡಲೊಳಗೆ ವಿಷವಿರುವ ಅಡವಿಯ ಹೂವನ್ನು ನಮ್ಮೊಡೆಯರು ಗಡಿಬಿಡಿಯಿಂದ ಮೋಹಿಸಿ ಎಂದೂ ಮೋಸ ಹೋಗುವವರಲ್ಲ. ನಮ್ಮ ಮಹಾರಾಜರು ತಂದದ್ದು ಬರೇ ಬಣ್ಣದಿಂದ ಮೆರೆಯುವ ಕಣಗಿನ ಹೂವಲ್ಲ.

ಮಾ.— ಹಾಗಾದರೆ ನಮ್ಮ ಮಹಾರಾಜರು ತಂದ ಕುಸುಮವು ಸುಗಂಧಯುಕ್ತ ಸತ್ಕುಸುಮವೇ ಆರಗಿಬಹುದೇನು?

ಶಾಂ.— ಸಂಶಯವೇನು ಇನ್ನೂ ಇದಕ್ಕೆ? ಅದು ಮಲ್ಲಿಗೆಯೇ!

ಮಾ.— ಹಾಗಿದ್ದರೆ ಮಾತ್ರ ನಮ್ಮೊಡೆಯರ ಅಭ್ಯುದಯವಾಗಿ ನಮ್ಮೆಲ್ಲರ ಕಣ್ಣು ಮನಗಳಿಗೆ ಉಬ್ಬಿನ ಹಬ್ಬವೆಂಬಲ್ಲಿ ಸಂದೇಹವಿಲ್ಲ. ಯಾಕಂದರೆ ಹಿರೇ ಮಹಾರಾಣಿಯವರಾದ ನಮ್ಮ ಲೋಕಮಹಾದೇವಿಯವರಾದರೂ ತಮ್ಮ ಹೆಸರಿಗೆ ತಕ್ಕ ದೊಡ್ಡ ಮನಸ್ಸಿನವರೇ ಆಗಿರುವರು.

ಶಾಂ.— ಇದೋ ಉತ್ಸವವು ಹೆಬ್ಬಾಗಿಲಿಗೆ ಬಂತು; ಮಹಾರಾಜರು ಇತ್ತ ದಯಮಾಡಿಸಿದರು. ಹೋಗು ಬೇಗ ಆರುತಿಯೊಡನೆ ಮಹಾರಾಣಿಯವರನ್ನು ಕರೆ. (ಮಾಲತಿ ಹೋಗುವಳು.) ಅವ್ವಾ ಬಂದೇ ಬಿಟ್ಟರು. (ತಾನೂ ಓಡುವಳು.)

[ಪುಲಿಕೇಶಿ ಮೋಹಿನಿಯೊಡನೆ ಬರಲು ಇತ್ತ ದಾಸಿಯರೊಡನೆ ಬಂದ ರಾಣಿಯು ರಾಜನ ಕಾಲು ತೊಳೆದು ಪೂಜಿಸಿ, ಹಾರಹಾಕಿ ಆರುತಿ ಮಾಡುವಳು. ಆಸನದಲ್ಲಿ ಕೂಡ್ರುವನು.]

ಮೋಹಿನಿ.— (ಅರಸಿಗೆ ನಮಿಸಿ) ಅಕ್ಕಾ ಇವಳೊಬ್ಬಳು ನಿಮ್ಮ ದೀನದಾಸಿಯು ಅನುಗ್ರಹಿಸಬೇಕು.

ಲೋಕಮಹಾದೇವಿ.— ಸುಮಂಗಲೆಯಾಗು ಏಳಮ್ಮಾ(ಎಬ್ಬಿಸಿ) ನಾವಿಬ್ಬರು ಈ ಮಹಾಪಾದದ ದಾಸಿಯರು. ಈ ಸೌಭಾಗ್ಯದ ಅಂಗವಾದ ನೀನೂ ಧನ್ಯಳೇ! ತಂಗೀ ಸದ್ಗುಣಗಳ ಕಳೆಯು ಬೆಳಗುವ ನಿನ್ನ ಮುಖಾವಲೋಕನದಿಂದ ಒಡಹುಟ್ಟಿದವಳ ವಾತ್ಸಲ್ಯವು ನನ್ನಲ್ಲಿ ಸಹಜವಾಗಿ ಉದ್ಭವಿಸುತ್ತಲಿದೆ. ನಿಜವಾಗಿ ನೀನು ನನ್ನ ಸಹೋದರಿಯು.

ಪುಲಿ.— ಹೀಗೇನು ಹೇಳುವೆ ಲೋಕಾ? ಇದೀಗ ನೀನು ವ್ಯಕ್ತ ಮಾಡಿದ ಅಭಿಪ್ರಾಯದಿಂದ ಇವಳು ನಿನ್ನ ಸವತಿಯಾಗತಕ್ಕವಳು; ನಿನ್ನ ಸುಖಸಂಪದನುಭವದ ಪಾಲುಗಾರಳು. ಹೀಗಿದ್ದು ಸಹೋದರೀ ಪ್ರೇಮಕ್ಕೆ ಆಸ್ಪದವೆಲ್ಲಿ?

ಲೋಕ.— ಮಹಾರಾಜರೇ, ನನ್ನ ಪ್ರಾಣೇಶ್ವರರಾದ ಈ ತಮ್ಮ ಕರಪಿಡಿದ ಮಾನಿನಿಯು ಎನಗನ್ಯಳೇ? ಅನುಜೆಯಲ್ಲವೇ? ಈ ಚಾಲುಕ್ಯ ರಾಜವಂಶಾಭಿವೃದ್ಧಿಯು ನನಗೆ ಅಭಿಮಾನದ ಸಂಗತಿಯಲ್ಲವೇ? ಸಾಮಾನ್ಯ ಸ್ತ್ರೀಯರಲ್ಲಿರುವ ಸಪತ್ನೀ ಮತ್ಸರದ ನಂಜು ನನ್ನನೂ ಸೋಂಕುವದಾದರೆ ಇಷ್ಟು ದಿನದ ತಮ್ಮ ಸಹವಾಸದ ಫಲವು ನಿಷ್ಫಲವಾಗುವದೇ? ಈ ಮಹಾ ಪಾದದ ಪುಣ್ಯವು ಅಡಗುವದೇ? ಮಹಾರಾಜ ಈ ದಾಸಿಯ ಮನವನ್ನು ಅರಿತೂ ಹೀಗೆ ಪರೀಕ್ಷಿಸಬೇಕಾಯಿತಲ್ಲ!

ಪುಲಿ.— (ಎದ್ದು ಮುಂದೆ ಬರಬರುತ್ತ) ಪ್ರಿಯೇ ವಿನೋದಕ್ಕಾಗಿ ಹೀಗೆ ನುಡಿದೆನಲ್ಲದೆ ಬೇರೆಯಿಲ್ಲ. (ಮುಂದೆ ಬರುವರು)

ಲೋಕ.— ತಾವು ಹೇಗೆ ನುಡಿದರೂ ನನಗೆ ಮಾನ್ಯವು. ತಮ್ಮ ಈ ವಿನೋದವು ನನ್ನ ಈ ಸಹೋದರಿಯ ಸಕಲೋನ್ನತಿಗೆ ಕಾರಣವಾದರೆ ನನ್ನಂಥ ಪುಣ್ಯವಂತಳಿರುವಳೇ? (ಗದ್ದ ಹಿಡಿಯುವಳು.)

ಮೋ.— ಪದ ರಾ. ದೇಶ, ತಾ. ತ್ರಿವಟ, (ಧಾಟಿ ಪ್ರೇಮ ಅತುಲಬಲ ಪ್ರೇಮಲ)

ಧನ್ಯಳಹುದು ತವ। ದಿವ್ಯ ಮಮತೆಯಾ ವಿಮಲಾಂಗನ ಸತಿ।
ಪೊಂದಿದೆಸೀಗಳೆ। ತಾಳುತೆ ತೋಷವ॥ [ರಾಣಿಯರು ಪರಸ್ಪರ ಆಲಿಂಗನ]
ಸ್ವಪತಿಯ ಕರವಾ ಪಿಡಿದಿಹನಾರೀ। ತನ್ನ ಸೌಖ್ಯವಾ ಬಾರಿಪ ವೈರಿ।
ಕಾಣೆನಲ್ಲ ತವಮನದಲಿ ಕಲುಷವ। ತಳೆದೆನು ಹರುಷವ।[ಮತ್ತೆ ಆಲಿಂಗನ]

ಪುಲಿ.— ಇಂಥ ಕಾಂತಾಮಣಿ ಯುಗ್ಮವನ್ನು ಹೊಂದಿದ ನನ್ನಂಥ ಭಾಗ್ಯವಂತನಿರುವನೇ?

ಮೋ.— ಮಹಾರಾಜರೆ, ಧ್ವಜಪೂಜೆಗೆ ಬರಲು ನಮಗೂ ಅಪ್ಪಣೆಯಾಗುವದೇ?

ಪುಲಿ.— ಅವಶ್ಯವಾಗಿ ಬರಬಹುದು. ಈ ಆರ್ಯ ಭೂಮಾತೆಯ ಉದ್ಧಾರದಲ್ಲಿ ಮಹಿಳೆಯರೂ ಪಾಲುಗಾರರಲ್ಲವೇ?

ಮೋ.— ಅಕ್ಕಾ, ಹೋಗೋಣ.

ಲೋಕಾದೇವಿ.— ಆಗಲಿ, ತಂಗೀ, ಭಾರತದಲ್ಲೆಲ್ಲ ಸಿರಿಯಿಂದ ಮೆರೆದ ಕರುನಾಡ ಗುಡಿಯನ್ನು ಆನಂದದಿಂದ ನೋಡುವಾ ನಡೆ. (ಹೋಗುವರು.)

೮ ನೇ ನೋಟ.

[ಸಭಾಲಯ, ಬಾಲಸೇನೆ ಸಹಿತ ಎಲ್ಲರೂ ಪತಾಕೆಯೊಡನೆ ಬರುವರು. ನಿಲ್ಲಿಸುವರು. ರಾಣಿಯರಿಬ್ಬರು ಅದನ್ನು ವಿಧಿಯಿಂದ ಪೂಜಿಸುವರು. ಕೈ ಮುಗಿಯುವರು. ಬಳಿಕ]

ಸೇನಾಪತಿ.— ಧ್ವಜವಂದನೆ; ನನ್ನ (ಖಡ್ಗಕ್ಕೆ), ಹಿರಿಯ (ನಮಿಸುವದು) ಕರುನಾಡು (ಏಳುವದು ಒರೆ)

ದಿವ್ಯಾನಂದ.— ಜಯಮಹಾದೇವ! ಜಯ ಮಹಾದೇವ!!

[ಎನ್ನುತ್ತ ಬರುವರು. ಎಲ್ಲರೂ ನಿಂತಲ್ಲಿಂದಲೇ ಅಭಿವಂದಿಸುವರು ಅರಸನು ಬಂದು ವಂದಿಸುವನು. ಎಲ್ಲರಿಗೂ ಕೈಯೆತ್ತಿ ಆಶೀರ್ವಾದ ಮಾಡುವರು

ದಿವ್ಯಾನಂದ.— ಕರ್ನಾಟಕ ವಿಜಯಧ್ವಜ ಸ್ಥಾಪನೆಯಿಂದ ಕನ್ನಡಿಗರೆಲ್ಲರಿಗೆ ಮಂಗಲಕರವಾದ ಈ ದಿನವೇ ಕರ್ನಾಟಕ ಸಾರ್ವಭೌಮನ ಮಂಗಲ ಕಾರ್ಯವೊಂದು ಮುಗಿಯಲಿ. ಪ್ರತಾಪರಾಯರೇ, ನಿಮ್ಮ ಮಗಳನ್ನು ಸಕಲರಿದಿರಿನಲ್ಲಿ ಮಹಾರಾಜನಿಗೆ ಅರ್ಪಿಸಿರಿ. (ಹಾಗೆ ಮಾಡುವನು. ಮೋಹಿನಿಯು ಹಾರಹಾಕುವಳು.) ಮಹಾರಾಜನೆ, ರಾಣಿಯರೊಡನೆ ಸಿಂಹಾಸನವನ್ನೇರು.

ಪುಲಿ.— ಮಹದಾಜ್ಞಾ (ಬಾಗಿ ಹಾಗೇ ಮಾಡುವರು.)

ದಿವ್ಯಾನಂದ.— ಹರ್ಷಚಾಲುಕ್ಯರ ನಡುವೆ ಆದ ಕಾಳಗದಲ್ಲಿ ನೀನು ಪಡೆದ ಜಯವು ಸಾಮಾನ್ಯವಾದುದಲ್ಲ. ಅದು ಭಾರತ

ವಿಜಯುವೇ ಸರಿ. ಈ ಮಹತ್ಪ್ರಸಂಗದ ಕುರುಹಿಗಾಗಿ ನೀನೊಂದು ಘನವಾದ ಬಿರುದನ್ನು ಧರಿಸಬೇಕು. ಅದಕ್ಕಾಗಿ ನಿನಗಿರುವ 'ಸತ್ಯಾಶ್ರಯ ಶ್ರೀಪೃಥಿವೀವಲ್ಲಭ, ಎಂಬ ಮಹಾಬಿರುದಿಗೆ 'ಪರಮೇಶ್ವರ' ಎಂಬ ಘನವಾದ ಅಂಕಿತವನ್ನು ಹೊಂದಿಸಿ, ಯಥಾರ್ಥವಾದ ಈ ಸಂಯುಕ್ತ ಹೆಸರಿನಿಂದ ಕರೆಯಿಸಿಕೊಳ್ಳಬೇಕೆಂದು ನಮ್ಮಾಶೆಯಿದೆ.

ಪುಲಿ.— ಗುರುವರ, ತಮ್ಮ ಹಾಗು ಸಕಲ ಪ್ರಜೆಗಳ ಸೇವಕನಾದ ನಾನು, ತಾವೆಲ್ಲರೂ ಪ್ರೀತಿಪೂರ್ವಕವಾಗಿ ಏನೆಂದು ಕರೆದರೂ ಕರೆಯಿಸಿಕೊಳ್ಳುವೆನು.

ದಿವ್ಯಾನಂದ.— ಹೂ, ವೀರರೇ.

ಎಲ್ಲರೂ.— ಜಯಸತ್ಯಾಶ್ರಯ ಶ್ರೀಪೃಥಿವೀ ವಲ್ಲಭ ಮಹಾರಾಜ! ಜಯ ಮಹಾರಾಜಾಧಿರಾಜ ಚಾಲುಕ್ಯರಾಜ ಪರಮೇಶ್ವರ!

ದಿವ್ಯಾನಂದ.— ಇನ್ನು ಎಲ್ಲರೂ ಕುಳಿತುಕೊಳ್ಳಿರಿ. ಮಹಾಜನರೆ, ನಿಮ್ಮ ವಿಜಯೋತ್ಸವದಿಂದ ನನಗಾದ ಆನಂದವನ್ನು ಏನು ಹೇಳಲಿ? ರಾಜಪರಮೇಶ್ವರನೇ ಮೋಹರಹಿತನಾದ ತಪಸಾಚರಣೆಯ ಫಲವನ್ನು ಕಂಡೆಯಷ್ಟೇ? ನೀನು ವೈಭವ ಮತ್ತು ಪದವಿಗಳಿಂದ ನಿರ್ಲಿಪ್ತನಾಗಿದ್ದರೂ ನಿನ್ನ ಹಾಗೂ ನಿನ್ನ ಕನ್ನಡಿಗರ ಕಲಿತನವ ಕೀರ್ತಿಯು ದಿಗಂತದವರೆಗೆ ಹಬ್ಬಹತ್ತಿದೆ. ನೀನು ಪರಮ ಧನ್ಯನು. ಇದೋ ಭರತಖಂಡದಲ್ಲೆಲ್ಲ ವಿಜಯುವನ್ನು ಸಂಪಾದಿಸಿದ ಈ ಕರ್ನಾಟಕ ವಿಜಯುಧ್ವಜವು ಬಹುಕಾಲ ಕೀರ್ತಿಶಾಲಿಯಾಗಿ ಮೆರೆಯಲೆಂದು ನನ್ನ ಪೂರ್ಣ ಆಶೀರ್ವಾದವಿರುವದು. ತನ್ನ ಸ್ವಾತಂತ್ರ್ಯ ರಕ್ಷಣೆಗೆ ಅಭಿಮಾನದಿಂದ ಹೋರಾಡಿದ ಹರ್ಷವರ್ಧನ ರಾಜನು ಸಾಮಾನ್ಯನಲ್ಲ! ಅವನನ್ನು ಮರ್ಯಾದೆಯಿಂದ ನಡೆಯಿಸಿಕೊಳ್ಳು. ಅಥವಾ ಪರಮಮುತ್ಸದ್ದಿಯಾದ ನಿನಗಿದನ್ನು ಹೇಳುವ ಅವಶ್ಯವಾದರೂ ಏನು? ಮಹಾರಾಜನೇ, ಅತುಲಬಲಶಾಲಿಗಳಾದ ಈ ನಿನ್ನ

ಸೇನಾಧಿಕಾರಿಗಳೂ ಸೈನಿಕರೂ ಸಾಮಾನ್ಯರಲ್ಲ; ಅದಕ್ಕಾಗಿ ಈ ಮಹ
ತ್ಕಾಲದಲ್ಲಿ ಅವರನ್ನುದ್ದೇಶಿಸಿಯೂ ಎರಡು ಮಾತುಗಳನ್ನು ಹೇಳಲಿ
ಚ್ಛಿಸುತ್ತೇನೆ. ಎಲೈ ಮಹಾವೀರರೇ, ಕರ್ನಾಟಕಾಭಿಮಾನಿಗಳೇ,
ನಿಮ್ಮ ಶೌರ್ಯವು ಹೊಗಳತಕ್ಕಂಥದೇ ಸರಿ. ನೀವು ನಿಮ್ಮ ಮಹಾ
ರಾಜನಿಗೆ ಅನುಕೂಲರಾಗಿ ನಿಮ್ಮ ಕರ್ನಾಟಕ ವಿಜಯಧ್ವಜದ
ಕೀರ್ತಿಯನ್ನು ವೃದ್ಧಿಗೊಳಿಸಿ ಸ್ಥಿರಪಡಿಸಿದಿರಿ. ವೀರರೇ ಈ ವಿಜಯ
ಧ್ವಜದ ಮಹತ್ವವು ಅಷ್ಟಿಷ್ಟಲ್ಲ! ಈ ವಿಜಯಧ್ವಜವು ಮಾತೃಭೂ
ಮಿಯ ಮಂಗಲ ಚಿಹ್ನವು, ಸಾಮ್ರಾಜ್ಯದೇವಿಯ ಸೌಭಾಗ್ಯತಿಲಕವು!!
ಈ ವಿಜಯಧ್ವಜವು ವೀರಜನರ ಉತ್ಸಾಹದ ಮುಖ್ಯಾಧಾರವು,
ಸಕಲ ವೈಭವದ ಶಿಖರವು!! ಇದರ ಮಾನರಕ್ಷಣವೇ ನಿಮ್ಮ ಜೀವ
ನದ ರಹಸ್ಯವು, ಇದರ ಕೀರ್ತಿಯನ್ನು ವೃದ್ಧಿಗೊಳಿಸುವದೇ ನಿಮ್ಮ
ಪರಮ ಕರ್ತವ್ಯವು!! ನಿಮ್ಮ ಕರ್ತವ್ಯವನ್ನು ನಿವೀಗ ಸರಿಯಾಗಿ
ನೆರವೇರಿಸಿದ್ದರಿಂದ ನನಗೆ ಬಲು ಸಂತೋಷವಾಗಿದೆ. ಧನ್ಯರು,
ಸ್ವಾಮಿಭಕ್ತರೂ ಕರ್ತವ್ಯನಿಷ್ಠರೂ ಆದ ನೀವು ಪರಮ ಧನ್ಯರು!!
ಇದರಂತೆ ನೀವು ಮುಂದಾದರೂ ಕರ್ನಾಟಕ ವಿಜಯಧ್ವಜದ ಶುದ್ಧ
ವಾದ ಕೀರ್ತಿಗೆ ಕಲಂಕವು ತಟ್ಟದಂತೆ ನಡೆಯಿರಿ. ನಿಮ್ಮ ನಡ
ತೆಯು ಭಾವೀ ಪ್ರಜೆಗಳಿಗೆ ಮಾದರಿಯಾಗಲಿ; ಕಾಲಾಂತರದಿಂದ
ಜನರಲ್ಲಿ ಕರ್ನಾಟಕಾಭಿಮಾನವು ಕುಂದಿ ಅವರು ಕರ್ತವ್ಯಹೀನರಾ
ದರೆ, ನಿಮ್ಮ ಚರಿತ್ರದಿಂದ ಮತ್ತೆ ಜಾಗ್ರತರಾಗಲಿ! ಎಲ್ಲಿಯವರೆಗೆ
ಕರ್ನಾಟಕ ರಾಷ್ಟ್ರದಲ್ಲಿ ರಾಷ್ಟ್ರಧ್ವಜದ ಅಭಿಮಾನವೂ ಮಾತೃ
ಭೂಮಿಯ ಬಗ್ಗೆ ಪೂಜ್ಯಭಾವನೆಯೂ ಸಾರ್ವತ್ರಿಕವಾಗಿರುವವೋ
ಅಲ್ಲಿಯವರೆಗೆ ಇದರ ಕೀರ್ತಿಸುಖಸಂಪದಗಳಿಗೆ ಎಂದೂ ಕುಂದು
ತಟ್ಟಲಾರದು. ವೀರರೇ ಕರ್ತವ್ಯದಿಂದ ಪರಮೇಶ್ವರನ ಕೃಪಾಪಾ
ತ್ರರಾದ ನಿಮ್ಮ ಯಶೋವೃದ್ಧಿಯಾಗಲೆಂದು ನನ್ನ ಪೂರ್ಣ ಜಯ

ಕೆಯೂ ಉಂಟು; ಆಶೀರ್ವಾದವೂ ಉಂಟು. ಮಹಾರಾಜನೆ ಮತ್ತೇನಾದರೂ ನಿನ್ನ ಬಯಕೆ ಇಹುದೇ?

ಪುಲಿ.—ತಮ್ಮ ಕೃಪೆಯಿಂದ ಎಲ್ಲ ಮನೋರಥವು ಪೂರ್ಣವಾಗಿದೆ. ಆದರೂ ಇದನ್ನು ಬೇಡಿಕೊಳ್ಳುವೆನು.

ಕನ್ನಡಿಗರ ಕಲಿತನವು ಎಂದೂ ಕುಂದದಿರಲಿ; ಕನ್ನಡ ವಿಜಯ ಪತಾಕೆಯು ಬಗ್ಗದಿರಲಿ; ಕನ್ನಡ ಜನರ ವಿಚಾರ ಪ್ರವಾಹಗಳು ತುಚ್ಛ ಆಚಾರಗಳೆಂಬ ಮಳಲಿನಲ್ಲಿ ಬತ್ತಿಹೋಗದಿರಲಿ; ಅವರು ಪರಸಂಸ್ಕೃತಿಯ ಮೋಹದಲ್ಲಿ ತಮ್ಮ ಸಂಸ್ಕೃತಿಯನ್ನು ಮರೆಯದಿರಲಿ. ಅವರು ಯಾವಾಗಲೂ ಉನ್ನತಮಸ್ತಕರಾಗಿರಲಿ.

(ಮಂಗಲಂ)



ನೀತಿಮುಕ್ತಾವಲಿ.

(ನೈತಿಕ ವಿಷಯದ ಲಘುಕಾವ್ಯ.)

ಮಹನೀಯರ ಅಭಿಪ್ರಾಯಗಳ ಕೆಲವಂಶಗಳು.

ಮುನ್ನುಡಿಯ ಭಾಗ.

ಮಿ. ಶಿರಹಟ್ಟಿಯವರ ಮುಕ್ತಾವಲಿಯು ನಾಡನಲ್ಮೆ, ಘನವಂತಿಕೆ, ಕೆಳಮೆ, ಸಿರಿ, ಸ್ತ್ರೀಚರ್ಯೆ, ವಿರಕ್ತಿ ಮುಂತಾದ ಮುಕ್ತಾಫಲಗಳನ್ನು ಕೋದು ರಚಿತವಾಗಿದೆ. ಈ ವಿಷಯಗಳಲ್ಲಿ ಹೇಳಬೇಕಾದ ಮಾತುಗಳಲ್ಲಿ ಹಲವನ್ನು ಹೊಸಬಗೆಯಲ್ಲಿ ಹೇಳಿರುವರಲ್ಲದೆ ನಾಡನಲ್ಮೆಯ ವಿಚಾರಗಳು ಆಧುನಿಕ ಯುಗಕ್ಕೆ ಉದ್ಬೋಧಕವಾಗಿವೆ. ದೃಷ್ಟಾಂತಗಳ ಔಚಿತ್ಯವು ಎಲ್ಲೆಡೆಗಳಲ್ಲಿ ಆಕರ್ಷಕವಾಗಿ ಮುಖ್ಯ ಆಸ್ವಾದ್ಯ ವಿಷಯವಾಗಿದೆ.

ಮ. ಪ್ರ. ಪೂಜಾರ, ಕನ್ನಡ ಪಂಡಿತ.

ನಿಮ್ಮ ಹಿಂದಿನ ಕವಿತ್ವಕ್ಕಿಂತ ಈಗಣ ಈ ನೀತಿ ಮುಕ್ತಾವಲಿಯ ಕವಿತ್ವವು ಮಧುರವೂ ಲಲಿತವೂ ಆಗಿದೆ. ಕವಿತ್ವದಲ್ಲಿಯು ಬಂಧವು (ಬಿಗು) ಚನ್ನಾಗಿ ಸಾಧಿಸಿದೆ.

ಕೇಶವ ಶರ್ಮಾ ಗಲಗಲಿ, ಕನ್ನಡ ಪಂಡಿತ.

ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಾಡಿಕೆಯ ವಿಷಯಗಳು ಅಂದರೆ ಸಜ್ಜನರು, ದುರುಳರು, ಗೆಳೆತನ, ಸ್ತ್ರೀನೀತಿ, ಇಂಥವುಗಳ ಮೇಲೆ ಸಣ್ಣ ಸಣ್ಣ ಕವಿತೆಗಳನ್ನು ಮಾಡಿರುವರು. ರಚನಾ ಶೈಲಿಯು ಪ್ರೌಢವಾಗಿದ್ದು ಬಾಲಕರಿಗೆ ಬಹು ಉಪಯುಕ್ತವಾಗಿರುವದು.

'ನವಕರ್ನಾಟಕ ವಿಜಾಪುರ.'

ಶ್ರೀ ಶಿರಹಟ್ಟಿಯವರು ವಿಷಯನಿರೂಪಣೆಯಲ್ಲಿ ತೋರಿಸಿರುವ ನೈಪುಣ್ಯದ ಮೂಲಕ ಇಂದಿನ ಮನ್ವಂತರದಲ್ಲಿ ನಿರಸವಾಗಿ ತೋರುತ್ತಿರುವ 'ನೀತಿ' ಎಂಬ ವಿಷಯವು ಓದುಗರಿಗೆ ಸರಸವಾಗಿ ತೋರದಿರದು.... ಎಲ್ಲೆಲ್ಲಿಯೂ ತೋರಿಬರುತ್ತಿರುವ ಅಚ್ಚಗನ್ನಡ ಶಬ್ದಗಳ ಮಾಧುರ್ಯವು ಕನ್ನಡಿಗರ ಮನಸ್ಸನ್ನು ಮೆಚ್ಚಿಸದಿರದು.

'ಕರ್ನಾಟಕ ಟಾಯಿಮ್ಸ' ಧಾರವಾಡ.

ಪುಟ. ೪೨+೪. ಬೆಲೆ ೦—೨—೬.

(**ಮೂರಾಣೆಗಳ ಟಪಾಲಟಿಕೀಟು ಕಳಿಸಿದರೆ, ಮನೆಯಬಾಗಿಲಿಗೆ ಬರುವದು.**)

ಜೋರಾಪುರಪೇಟೆ
ವಿಜಾಪುರ.

'ಲ. ಅ. ಶಿರಹಟ್ಟಿ' ಶಾಸ್ತ್ರಿ
ಗ್ರಂಥಕರ್ತ.

